

ಇನ್ನೊಬ್ಬ ದ್ರೋಣಾಚಾರ್ಯ

ಮೂಲ ಹಿಂದಿ
ಡಾ. ಶಂಕರ್ ಶೇಷ್

ಕನ್ನಡಕ್ಕೆ
ಪ್ರೊ. ಆರ್. ಲಕ್ಷ್ಮೀನಾರಾಯಣ

ಅವಿರತ ಪುಸ್ತಕ

[illegible] [illegible]

ಇನ್ನೊಬ್ಬ ದ್ರೋಣಾಚಾರ್ಯ

ಇನ್ನೊಬ್ಬ ದ್ರೋಣಾಚಾರ್ಯ

ಮೂಲ(ಹಿಂದಿ)

ಡಾ. ಶಂಕರ್ ಶೇಷ್

ಕನ್ನಡಕ್ಕೆ

ಡಾ. ಆರ್. ಲಕ್ಷ್ಮೀನಾರಾಯಣ

ಅವಿರತ ಪುಸ್ತಕ

INNOBBA DRONACHARYA : Hindi play by **Dr. SHANKAR SHESH**
Translated by **DR. R. LAKSHMINARAYANA**

Publisher: **V. Harishkumar,** for Aviratha Pustaka, # 70 9th Cross, 1st Main Road, BDA Layout Avalahalli, Bangalore -560 085

email : byregowda.m1@gmail.com

Pages	:	xii + 100
First Impression	:	2009
Paper	:	NS Maplitho 80 GSM
Price	:	Rs. 55/-
Size	:	1/8 Demmy

ಪುಟಗಳು	:	xii + 100
ಮೊದಲ ಮುದ್ರಣ	:	2009
ಕಾಗದ	:	ಎನ್.ಎಸ್. ಮ್ಯಾಪ್ಲಿಥೊ 80 ಜಿಎಸ್ಎಂ
ಬೆಲೆ	:	ರೂ 55/–
©	:	ಲೇಖಕರದ್ದು
ಸೈಜ಼್	:	1/8 ಡೆಮಿ
ಪ್ರತಿಗಳು	:	1000
ಸಲಹಾ ಸಮಿತಿ	:	ಡಾ. ಎಂ. ಬೈರೇಗೌಡ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಜಿ.ಎನ್. ಮೋಹನ್ ಲಕ್ಷ್ಮೀಪತಿ ಕೋಲಾರ ಓ. ವೆಂಕಟೇಶ್
ಮುಖಪುಟ	:	ಪರಮೇಶ್ ಜೋಳದ್
ಡಿ.ಟಿ.ಪಿ.	:	ಜೋಸ್ಪಿನ್
ಪ್ರಕಾಶಕರು	:	ವಿ. ಹರೀಶ್‌ಕುಮಾರ್ ಅವಿರತ ಪುಸ್ತಕ, ನಂ. 70, 9ನೇ ಕ್ರಾಸ್ 1ನೇ ಮುಖ್ಯರಸ್ತೆ, ಆವಲಹಳ್ಳಿ ಬಿಡಿಎ ಲೇಔಟ್, ಬೆಂಗಳೂರು – 85

ಮುದ್ರಕರು : ವಿಶ್ವಾಸ್ ಪ್ರಿಂಟ್ಸ್
VISHWAS PRINTS
23, 3ನೇ ಅಡ್ಡರಸ್ತೆ, ನಂಜಾಂಬ ಅಗ್ರಹಾರ
ಚಾಮರಾಜಪೇಟೆ, ಬೆಂಗಳೂರು - 18
ದೂರವಾಣಿ : 26604835

ಅರ್ಪಣೆ

ಅಕಾಲದಲ್ಲಿ ಅಗಲಿದ ಜೀವದ ಗೆಳೆಯ

ಪ್ರೊ. ನೊ.ಸಂ. ತಿಮ್ಮೇಗೌಡರಿಗೆ

ಚಿರಂತನ ಸ್ನೇಹದ ಕುರುಹಾಗಿ

ಡಾ. ಶಂಕರ್ ಶೇಷ್

ಹಿಂದೀ ರಂಗಭೂಮಿಯನ್ನು ಶ್ರೀಮಂತಗೊಳಿಸಿದ ಹೊಸ ಪೀಳಿಗೆಯ ನಾಟಕಕಾರರಲ್ಲಿ ಡಾ. ಶಂಕರ್‌ಶೇಷ್ ಅವರಿಗೆ ಉನ್ನತ ಸ್ಥಾನವಿದೆ. ಮೋಹನ್ ರಾಕೇಶ ಅವರ ತರುವಾಯ ಅರವತ್ತರ ನಂತರದ ದಶಕಗಳಲ್ಲಿ ನಾಟಕ ಮತ್ತು ರಂಗಭೂಮಿಯ ಕ್ಷೇತ್ರಗಳಲ್ಲಿ ವಿಭಿನ್ನ ಪ್ರಯೋಗಗಳನ್ನು ಮಾಡಿ ನೂತನ ಸಾಧ್ಯತೆಗಳನ್ನು ತೆರೆದು ತೋರಿದವರಲ್ಲಿ ಡಾ. ಶಂಕರ್‌ಶೇಷ್ ಪ್ರಮುಖರು.

1933ರ ಅಕ್ಟೋಬರ್ 2ರಂದು, ಮಧ್ಯಪ್ರದೇಶದ ವಿಲಾಸಪುರದಲ್ಲಿ ಜನಿಸಿದ ಶಂಕರ್ ಶೇಷ್ ಅವರ ಮನೆಮಾತು ಮರಾಠಿ. ನಾಗಪುರ ವಿಶ್ವವಿದ್ಯಾನಿಲಯದ ಬಿ.ಎ. (ಆನರ್ಸ್) ಮತ್ತು ಪಿಎಚ್.ಡಿ., ಹಾಗೂ ಮುಂಬಯಿ ವಿಶ್ವವಿದ್ಯಾಲಯದ ಎಂ.ಎ. ಪದವೀಧರರು. ಬಹುಮುಖ ಪ್ರತಿಭೆಯ ಬರಹಗಾರರಾದ ಶಂಕರ್‌ಶೇಷ್ ಅವರು, ಇಪ್ಪತ್ತೆರಡು ಸ್ವತಂತ್ರ ನಾಟಕಗಳು, ನಾಲ್ಕು ಏಕಾಂಕ ನಾಟಕಗಳು, ಎರಡು ಮಕ್ಕಳ ನಾಟಕಗಳು ಮತ್ತು ನಾಲ್ಕು ಅನುವಾದಿತ ನಾಟಕಗಳಲ್ಲದೆ, ನಾಲ್ಕು ಕಾದಂಬರಿಗಳು ಹಾಗೂ ಮೂರು ಸಂಶೋಧನಾತ್ಮಕ ಕೃತಿಗಳನ್ನೂ ರಚಿಸಿದ್ದಾರೆ. ಇದಲ್ಲದೆ ಎರಡು ಚಲನ ಚಿತ್ರಗಳಿಗೆ ಚಿತ್ರಕಥೆಗಳನ್ನು ರಚಿಸಿದ್ದಾರೆ. ಅನೇಕ ಪ್ರತಿಷ್ಠಿತ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡ ಡಾ. ಶಂಕರ್‌ಶೇಷ್ ಅವರು ತಮ್ಮ ಜೀವಿತಾವಧಿಯಲ್ಲಿ (ಮರಣ 1981) ಅಧ್ಯಾಪಕ, ಸಂಶೋಧಕ ಹಾಗೂ ಬ್ಯಾಂಕ್ ಅಧಿಕಾರಿ ಹೀಗೆ ಹಲವು ನೆಲೆಗಳಲ್ಲಿ ಕಾರ್ಯನಿರ್ವಹಿಸಿದವರು. ಅಷ್ಟೇ ಅಲ್ಲ, ಅವರೊಬ್ಬ ಯಶಸ್ವೀ ನಟ, ನಿರ್ದೇಶಕ ಹಾಗೂ ರಂಗಕರ್ಮಿ. ರಂಗಭೂಮಿಯ ನೂತನ ಸಾಧ್ಯತೆಗಳನ್ನು ಗಮನದಲ್ಲಿಟ್ಟುಕೊಂಡು, ನಾಟಕಗಳನ್ನು ರಚಿಸಿದವರು.

ಪ್ರಸ್ತುತ 'ಇನ್ನೊಬ್ಬ ದ್ರೋಣಾಚಾರ್ಯ', ಪೌರಾಣಿಕ ಹಾಗೂ ಆಧುನಿಕ ಸಂದರ್ಭಗಳನ್ನು ಬಿಂಬ-ಪ್ರತಿಬಿಂಬ ರೂಪದಲ್ಲಿ ಪ್ರಸ್ತುತ ಪಡಿಸಲಾಗಿರುವ ಒಂದು ನಾಟಕ. ಮಹಾಭಾರತದ ದ್ರೋಣನ ಬದುಕನ್ನು ಆಧುನಿಕ ಬದುಕಿನೊಂದಿಗೆ ತಳುಕು ಹಾಕುವ ಒಂದು ಅದ್ಭುತ ಪ್ರಯತ್ನವಾಗಿದೆ. ರಂಗಪ್ರಯೋಗದ ದೃಷ್ಟಿಯಿಂದ ಅತ್ಯಂತ ಯಶಸ್ವಿಯಾದ ಈ ಜನಪ್ರಿಯ ನಾಟಕದ ಮೊದಲ ಪ್ರಯೋಗ ಪ್ರಸಿದ್ಧ ರಂಗ ನಿರ್ದೇಶಕ ಬಿ.ವಿ. ಕಾರಂತರ ನಿರ್ದೇಶನದಲ್ಲಿ ಭೋಪಾಲ್‌ನಲ್ಲಿ ಆಗಿತ್ತು. ಅನಂತರವೂ ಇದರ ಹಲವಾರು ಯಶಸ್ವೀ ಪ್ರಯೋಗಗಳಾಗಿವೆ.

ನಾಟಕ ಕುರಿತು

ಇಪ್ಪತ್ತನೆಯ ಶತಮಾನದ ಶೋಧಗಳಲ್ಲಿ ಮನುಷ್ಯನ ವ್ಯಕ್ತಿತ್ವದ ಅನಾವರಣವೂ ಒಂದು. ಪುರಾಣ ಮತ್ತು ಚರಿತ್ರೆಯ ವ್ಯಕ್ತಿತ್ವ ಮಾದರಿಗಳನ್ನು ಆಕರಗಳಾಗಿ ಮಾಡಿಕೊಂಡು ಮನುಷ್ಯತ್ವದ ನಿಗೂಢಗಳನ್ನು ಬಯಲಾಗಿಸುವ ಪ್ರಕ್ರಿಯೆ ಎಲ್ಲಾ ಸೃಜನಶೀಲ ಪ್ರಕಾರಗಳಲ್ಲೂ ಕಾಣಸಿಗುತ್ತದೆ. ಸೀತೆ, ದೇವಯಾನಿ, ಹರಿಶ್ಚಂದ್ರ, ದ್ರೋಣ ಮುಂತಾದ ಪುರಾಣ ಪಾತ್ರಗಳು ಬಸವಣ್ಣ, ಅಕ್ಕ, ತುಘಲಕ್, ಟಿಪ್ಪು, ಮುಂತಾದ ಚಾರಿತ್ರಿಕ ಪಾತ್ರಗಳನ್ನು ವಿಶ್ಲೇಷಣೆಗ ಒಳಪಡಿಸುವ ಮೂಲಕ ಆಧುನಿಕ ವ್ಯಕ್ತಿತ್ವದ ವೈರುಧ್ಯ ಆಯಾಮಗಳನ್ನು ಗ್ರಹಿಸಲು ಪ್ರಯತ್ನಿಸಿರುವುದು ಎಪ್ಪತ್ತರ ದಶಕದ ಕನ್ನಡ ನಾಟಕಗಳ ಮುಖ್ಯ ಲಕ್ಷಣಗಳಲ್ಲಿ ಒಂದಾಗಿದೆ.

ಹಸಿವಿನ ಅನಿವಾರ್ಯತೆ ಮತ್ತು ಅಧಿಕಾರದ ಮೋಹದ ಎದಿರು ತಾನು ನಂಬಿದ ತತ್ವದ ಜೊತೆ ಅನಿವಾರ್ಯವಾಗಿ ರಾಜಿ ಮಾಡಿಕೊಳ್ಳುವ ವ್ಯಕ್ತಿತ್ವದ 'ಆರ್ಕಿಟೈಪ್' ಆಗಿ ದ್ರೋಣಾಚಾರ್ಯನ ಪಾತ್ರವನ್ನು ಭಾರತೀಯ ಮನಸ್ಸು ಸೃಷ್ಟಿಸಿಕೊಂಡಿದೆ. ತತ್ವನಿಷ್ಠೆಯನ್ನು ಆತ್ಯಂತಿಕ ಮೌಲ್ಯವಾಗಿ ಪರಿಗಣಿಸಿದ ದ್ರೋಣ ಕೌಟುಂಬಿಕ ಸಂಬಂಧಗಳ ಒತ್ತಡದ ಕಾರಣ ಪಥಭ್ರಷ್ಟನಾಗುವ ಸೂಕ್ಷ್ಮಗಳನ್ನು, ಹಾಗೂ ವೈಯಕ್ತಿಕ ದುರಂತವನ್ನು ತಪ್ಪಿಸುವ ಸಲುವಾಗಿ ಸಾಮಾಜಿಕ ದುರಂತಕ್ಕೆ ಎಡೆಮಾಡಿಕೊಡುವ ಸ್ವಮರುಕದ ಅಸಹಾಯಕ ನೆಲೆಯನ್ನು ಗ್ರಹಿಸುವ ಪರಿಕರವಾಗಿ ದ್ರೋಣನಪಾತ್ರವನ್ನು ಭಾರತೀಯ ನಾಟಕಗಳು ಕಟ್ಟಿಕೊಂಡಿವೆ.

ಬಿ. ಶಂಕರಶೇಷು ಅವರ ಹಿಂದಿ ನಾಟಕ "ಔರ್ ಏಕ್ ದ್ರೋಣಾಚಾರ್ಯ" ಎಪ್ಪತ್ತರದ ದಶಕದಲ್ಲಿ ಚರ್ಚಿತವಾಗುತ್ತಿದ್ದ ವ್ಯಕ್ತಿ ಮತ್ತು ಇಂಟೆಗ್ರಿಟಿಯ ಸಂಬಂಧವನ್ನು ವಸ್ತುವಾಗಿಸಿಕೊಂಡು ರೂಪಿಸಿದ ನಾಟಕ ಕೃತಿ. ಈ ನಾಟಕದಲ್ಲಿ ಬಳಕೆಯಾಗಿರುವ ಪುರಾಣ ಮತ್ತು ವರ್ತಮಾನಗಳು ಎರಡು ಕನ್ನಡಿಗಳ ಪ್ರತಿಬಿಂಬಗಳು ಒಂದಾಗಿ ಕಾಣುವಂತೆ ಬೆಸುಗುಳುವ ಮೂಲಕ ಪುರಾಣವೇ ವರ್ತಮಾನವಾಗಿ ರೂಪಾಂತರವಾಗುವ ನಾಟಕೀಯ ಕ್ರಿಯೆ ಸಂಭವಿಸುತ್ತದೆ. ಪುರಾಣದ ದ್ರೋಣ ಹಾಗೂ ವಾಸ್ತವದ ಅರವಿಂದನನ್ನು ಕೂಡಿಸುವ ವಿಮಲೇಂದುವಿನ ಭೂತ ನಾಟಕಕ್ಕೆ ಮೂರನೆಯ ಆಯಾಮವನ್ನು ಕಲ್ಪಿಸುತ್ತದೆ.

ಎಪ್ಪತ್ತರ ಚಳುವಳಿಗಳ ಕನಸುಗಳು ಬೌದ್ಧಿಕ ಪಳೆಯುಳಿಕೆಗಳಾಗಿ ಆಗಾಗ ಕಾಡುತ್ತಿರುವ ಈ ಕಾಲಘಟ್ಟದಲ್ಲಿ ಇನ್ನೊಬ್ಬ ದ್ರೋಣಾಚಾರ್ಯ ನಾಟಕವನ್ನು ಕನ್ನಡಿಸುವ ಮೂಲಕ ಮತ್ತೆ ಆ ನೆನಪುಗಳ ಭೂತವನ್ನು ಮರು ಎದಿರುಗೊಳ್ಳುವಂತೆ ಮಾಡಿದ ಡಾ. ಆರ್. ಲಕ್ಷ್ಮೀನಾರಾಯಣ ಅವರಿಗೆ ಅಭಿನಂದನೆಗಳು.

– ಡಾ. ಕೆ.ವೈ. ನಾರಾಯಣಸ್ವಾಮಿ

ಎರಡು ಮಾತು

ಅನ್ಯಭಾಷೆಯ ಉತ್ತಮ ಕೃತಿಗಳನ್ನು ಕನ್ನಡಕ್ಕೆ ತರಬೇಕೆಂಬ ನನ್ನ ಪ್ರಯತ್ನದ ಫಲವೇ ಕಣ್ಣಮುಂದಿರುವ ಪ್ರಸ್ತುತ ನಾಟಕ 'ಇನ್ನೊಬ್ಬ ದ್ರೋಣಾಚಾರ್ಯ'. ಹಿಂದಿ ರಂಗಭೂಮಿಯ ಮೇಲೆ ಹಲವಾರು ಯಶಸ್ವೀ ಪ್ರಯೋಗಗಳನ್ನು ಕಂಡು ಜನಪ್ರಿಯತೆ ಗಳಿಸಿರುವ ಈ ನಾಟಕ ಕನ್ನಡಿಗರಿಗೂ ಪ್ರಿಯಿವಾಗಿ ಕನ್ನಡ ರಂಗಭೂಮಿಂಯು ಮೆಲೂ ಯುಶಸ್ವಿಂಯಾಗಿ ಪ್ರಯೋಗವಾದೀತೆಂದು ಆಶಿಸಿ ಇದನ್ನು ಅನುವಾದಿಸುವ ಪ್ರಯತ್ನಕ್ಕೆ ಕೈಹಾಕಿದ್ದೇನೆ. ಇದರ ಪ್ರಕಟಣೆಗೆ ನೆರವಾದವರನ್ನು ನೆನೆಯುವುದು ನನ್ನ ಪ್ರೀತಿಯ ಕರ್ತವ್ಯ.

ಕೇಳಿದ ಕೂಡಲೇ ಕನ್ನಡಕ್ಕೆ ಅನುವಾದಿಸಲು ಅನುಮತಿ ನೀಡಿದ ದಿವಂಗತ ಡಾ. ಶಂಕರ್‌ಶೇಷ್ ಅವರ ಶ್ರೀಮತಿಯವರಾದ ಸುಧಾಶಂಕರ್ ಅವರಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ.

ನಾಟಕದ ಪ್ರಕಟಣೆಯ ಸಮಸ್ಯೆ ಎದುರಾದಾಗ, ಅದನ್ನು ಸುಲಭವಾಗಿ ಬಗೆಹರಿಸಿ, ಎಲ್ಲ ರೀತಿಯ ಒತ್ತಾಸೆ ನೀಡಿ ಪ್ರಕಟಿಸಲು ನೆರವಿತ್ತ ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್‌ನ ಕಾರ್ಯದರ್ಶಿ ಡಾ. ಎಂ. ಬೈರೇಗೌಡರಿಗೆ, ಪ್ರಕಟಣೆಯ ಹೊಣೆ ಹೊತ್ತ ಅವಿರತ ಪುಸ್ತಕ ಸಂಸ್ಥೆಯ ವಿ. ಹರೀಶ್‌ಕುಮಾರ್ ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ತಮ್ಮ ಬಿಡುವಿಲ್ಲದ ಕೆಲಸಗಳ ಮಧ್ಯದಲ್ಲಿ ಬಿಡುವು ಮಡಿಕೊಂಡು, ಇದಕ್ಕೊಂದು ಅರ್ಥಪೂರ್ಣ ಬೆನ್ನುಡಿ ಬರೆದುಕೊಟ್ಟಿರುವ ಆತ್ಮೀಯ ಮಿತ್ರ ಡ. ಕೆ.ವೈ. ನಾರಾಯಣಸ್ವಾಮಿ ಅವರಿಗೆ ಋಣಿಯಾಗಿರುತ್ತೇನೆ.

ಕೊನೆಯದಾಗಿ ಇದಕ್ಕೊಂದು ಸುಂದರವೂ, ಸಾರ್ಥಕವೂ ಆದ ರಕ್ಷಾಪುಟವನ್ನು ಸಕಾಲದಲ್ಲಿ ರಚಿಸಿಕೊಟ್ಟ ಕಲಾವಿದ ಪರಮೇಶ್ ಡಿ. ಜೋಳದ್ ಮತ್ತು ಅಂದವಾಗಿ ಮುದ್ರಿಸಿಕೊಟ್ಟ ವಿಶ್ವಾಸ್ ಪ್ರಿಂಟ್ಸ್‌ನ ಮಾಲೀಕರು ಮತ್ತು ಸಿಬ್ಬಂದಿ ವರ್ಗದವರಿಗೆ ನನ್ನ ಅನಂತ ಕೃತಜ್ಞತೆಗಳು.

ಬೆಂಗಳೂರು — **ಆರ್. ಲಕ್ಷ್ಮೀನಾರಾಯಣ**

6.8.2009

ಪಾತ್ರವರ್ಗ

ಅರವಿಂದ	–ಕಾಲೇಜಿನಲ್ಲಿ ಪ್ರಾಧ್ಯಾಪಕ
ಯದೂ	–ಅರವಿಂದನ ಸಹೋದ್ಯೋಗಿ, ಮಿತ್ರ
ಪ್ರೆಸಿಡೆಂಟ್	–ಕಾಲೇಜ್ ಮ್ಯಾನೇಜ್‌ಮೆಂಟಿನ ಅಧ್ಯಕ್ಷ
ವಿಮಲೇಂದು	–ಅರವಿಂದನ ಗತಿಸಿದ ಸಹೋದ್ಯೋಗಿ
ಹಿನ್ನೆಲೆಯಲ್ಲಿ	
ಲೀಲಾ	–ಅರವಿಂದನ ಹೆಂಡತಿ
ಅನೂರಾಧ	–ವಿದ್ಯಾರ್ಥಿನಿ
ಚಂದೂ	–ವಿದ್ಯಾರ್ಥಿ
ದ್ರೋಣಾಚಾರ್ಯ	
ಭೀಷ್ಮಾಚಾರ್ಯ	
ಯುಧಿಷ್ಠಿರ	
ಅಶ್ವತ್ಥಾಮ	
ಕೃಪೀ	
ಸೈನಿಕ	–1
ಸೈನಿಕ	–2

ಪೂರ್ವಾರ್ಧ

ಲೀಲಾ: ಲೈಟ್ ಹಾಕಿಕೊಳ್ಳಬಾರದೆ (ಹೋಗಿ ಸ್ವಿಚ್ ಆನ್ ಮಾಡುತ್ತಾಳೆ. ಟೇಬಲ್ ಮೇಲೆ ಇಟ್ಟಿದ್ದ ಖಾಲಿಕಪ್ ತೆಗೆಯುವಳು) ಸಕ್ಕರೆಗೆ ಏನು ರೇಟ್ ನಡೀತಾ ಇದೆ ಗೊತ್ತಿದೆಯೇನು? ಭರ್ತಿನಾಲ್ಕು ರೂಪಾಯಿ ಆಗಿ ಹೋಯಿತು.

ಅರವಿಂದ: (ಕೇಳಿಸದವನಂತೆ) ಹೂಂ.

ಲೀಲಾ: (ಸಿಗರೇಟು ತುಂಡುಗಳನ್ನು ಎತ್ತುತ್ತಾ) ಎಷ್ಟು ಸಲ ಹೇಳಿದ್ದೀನಿ ಆಷ್‌ಟ್ರೇ ತೊಗೊಳ್ಳಿ ಅಂತ. ಕಸ ಹೊಡೆದೂ ಹೊಡೆದೂ ನನ್ನ ಸೊಂಟ ತಾನೆ ಮುರಿಯೋದು.

ಅರವಿಂದ: ತೊಗೊಳ್ತೀನಿ.

ಲೀಲಾ: ಆಮೇಲೆ, ರೇಷನ್ ಕಾರ್ಡ್ ಆಯ್ತಾ (ಬಿಡುವು) ಆಗಿಲ್ಲ ಅಲ್ವಾ? ಹೋಗಿದ್ದರೆ ತಾನೆ? ಯಾರಿಗೆ ಬೇಕಾಗಿದೆ. (ಬಿಡುವು) ಅಮ್ಮನ ಆಪರೇಷನ್ ಯಾವಾಗ ಅಂತ ಆಯ್ತಾ? (ಬಿಡುವು). ಅಂದರೆ ಆಸ್ಪತ್ರೆಗೆ ಹೋಗಿಲ್ಲ. ಒಬ್ಬಳೇ ಎಲ್ಲೆಲ್ಲಿ ಅಂತ ಸಾಯಲಿ? (ಬಿಡುವು) ಯಾಕೆ ಏನೂ ಮಾತಾಡ್ತಿಲ್ಲ? ಏನಾಗಿದೆ ನಿಮಗೆ?

ಅರವಿಂದ: ಏನೂ ಇಲ್ಲ.

ಲೀಲಾ: (ಪ್ರತಿಗಳನ್ನು ಕೊಟ್ಟು) ಸಿನ್ಹಾನ ಕೆಲಸ ಮಾಡಿದಿರೋ ಇಲ್ಲವೋ? ಮಾಡಿಲ್ಲ ಅಲ್ವಾ? (ಬಿಡುವು) ಎಲ್ಲ ಕಷ್ಟಗಳೂ ನನ್ನ ತಲೆಮೇಲೆ ಮಾರ್ಕ್ಸ್ ಹೆಚ್ಚು ಮಾಡಲಿಲ್ಲವೆ? ಹಾಗಾದರೆ ಓಡಿ ಹೋಗಿ ಅವರ ಕಡೆಯಿಂದ ಉಪಕಾರ ಯಾಕೆ ಮಾಡಿಸಿ ಕೊಳ್ಳುತ್ತೀರಿ?

ಅರವಿಂದ: ಏನು ಉಪಕಾರ ಮಾಡಿಸಿಕೊಂಡಿದ್ದೀನಿ?

ಲೀಲಾ: ಅವನನ್ನು ಫೇಲ್ ಮಾಡಿಸಿದ್ದೀರ ಎನ್ನುವುದು ಸ್ಪಷ್ಟವೇ ಇದೆ. ನನ್ನ ರೆಕಮೆಂಡೇಷನ್ ತಾನೆ. (ಬಿಡುವು) ಬೇರೆಯಾರಾದರೂ ಮಾಡಿದ್ದರೆ......

ಅರವಿಂದ: ಕೊನೆಗೆ ಏನು ಹೇಳಬೇಕು ಅಂತಿದ್ದೀ ನೀನು?

ಲೀಲಾ: (ತೀಕ್ಷ್ಣವಾಗಿ) ಅವರಿಗೆ ಏನು ಉತ್ತರ ಹೇಳಲಿ? ಅವನು ಅವರ ಆಫೀಸರ್‌ಗೆ ಏನು ಉತ್ತರ ಹೇಳ್ತಾನೆ? ಅವನ ಪ್ರಮೋಷನ್‌ದು ಏನಾಗುತ್ತೆ?

ಅರವಿಂದ: ಹುಡುಗನಿಗೆ ಪಾಸಾಗೋ ಯೋಗ್ಯತೆ ಇಲ್ಲದೆ ಇದ್ದರೆ ನಾನೇನು ಮಾಡಲಿ?

ಲೀಲಾ: ಪಾಸ್ ಆಗೋ ಯೋಗ್ಯತೆ ಇದ್ದಿದ್ದರೆ ನಿಮಗೆ ಯಾತಕ್ಕೆ ಹೇಳುತ್ತಾ ಇದ್ದ? ಸಿನ್ಹಾ ಏನು ತಿಳಿದುಕೊಳ್ಳುತ್ತಾನೆ ಅಂತ ಯೋಚನೆ ಮಾಡಿದ್ದೀರಾ? ಎಂಥಾ ಒಳ್ಳೆ ಕೃತಘ್ನರಪ್ಪ!

ಅರವಿಂದ: ಏನು ಕೃತಘ್ನ ಕೆಲಸ ನಾನು ಮಾಡಿರೋದು?

ಲೀಲಾ: ನಿಮಗೆ ಈ ಕೆಲಸ ಸಿಕ್ಕಿದ್ದು ಯಾರಿಂದ? ಈಮನೆ? ಆಸ್ಪತ್ರೆಯಲ್ಲಿ ಎಲ್ಲ ಅನುಕೂಲಗಳನ್ನು ಕೊಡಿಸುತ್ತಾ ಇರುವವರು ಯಾರು? ಎರಡು ಮಾರ್ಕ್ಸ್ ಹೆಚ್ಚಾಗಿ ಕೊಟ್ಟಿದ್ದರೆ ಏನು ಆಕಾಶ ಕಳಚಿ ಬೀಳುತಿತ್ತೆ?

ಅರವಿಂದ: ಈಗ (ಸ್ವಲ್ಪ) ಸುಮ್ಮನೆ ಇರ್ತಿಯಾ?

ಲೀಲಾ: ಸುಮ್ಮನಿರೋದು ಒಂದು ಬಿಟ್ಟು ಇದುವರೆತನಕ ಏನು ಮಾಡಿದ್ದೀರಿ ನೀವು? ನೀವು ಹೋಗಿ ಹರಿಶ್ಚಂದ್ರನ ಖಾಲಿ ಜಾಗದಲ್ಲಿ ಕೂತುಕೊಳ್ಳಿ. [ಯದು ಬರುತ್ತಾನೆ. ಅರವಿಂದನ ಸಮ ವಯಸ್ಕ. ಮುಖದ ಮೇಲೆ ಉದ್ವಿಗ್ನತೆ ಇದೆ]

ಯದು : ನಗರದಲ್ಲಿ ಏನು ಸುದ್ದಿ ಹಬ್ಬುತ್ತಿದೆ. ಅಂತ ನಿನಗೆ ಗೊತ್ತೇನು?

ಲೀಲಾ: ಎಂಥ ಸುದ್ದಿ?

ಯದು: (ಅರವಿಂದನನ್ನು ಕುರಿತು) ಬೆಳಿಗ್ಗೆ ಏನು ನಡೆಯಿತೋ ಅದು ನಿಜವೇನು?

ಲೀಲಾ: ಏನು ನಡೆಯಿತು ಬೆಳಿಗ್ಗೆ? ನನಗೂ ಹೇಳಲಿಲ್ಲ?

ಯದು: ಏನು ಹೇಳಲಿ ಭಾಭಿ! ದುರದೃಷ್ಟ ವಶಾತ್ ನಾನು ಇವತ್ತು ಕಾಲೇಜಿಗೆ ಹೋಗಲು ಆಗಲಿಲ್ಲ. ಮತ್ತೀ ಹಾಳಾದೋನು ಸಮಸ್ಯೆ ತಂದಿಟ್ಟಿದ್ದಾನೆ.

ಲೀಲಾ: ಹೋಗಲಿ ಆದದ್ದಾದರೂ ಏನು?

ಯದು: ಈ ಹೊತ್ತು ಇವನು ಪ್ರೆಸಿಡೆಂಟರ ಮಗನನ್ನೇ ಕಾಪಿ ಮಾಡುತ್ತಿರುವಾಗ ಹಿಡಿದು ಮನೆಗೆ ಕಳಿಸಿದ್ದಾನೆ ಗೊತ್ತೇನು?

ಲೀಲಾ: ಅಂದರೆ ರಾಜಕುಮಾರನನ್ನೇ?

ಯದು: ಹೌದು ರಾಜಕುಮಾರನನ್ನು. ನಗರದ ಬಹಳ ದೊಡ್ಡ ಗೂಂಡಾನನ್ನು. (ಬಿಡುವು. ಅರವಿಂದನೊಂದಿಗೆ) ಎಲ್ಲ ಗೊತ್ತಿದ್ದೂ ನಿನ್ನ ಬುದ್ಧಿ ಎಲ್ಲಿ ಹಾಳಾಗಿ ಹೋಗಿರುತ್ತೆ?

ಅರವಿಂದ: ಚೂರಿ ಮುಂದಿಟ್ಟುಕೊಂಡು ಕಾಪಿ ಮಾಡುತ್ತಾ ಇದ್ದವನನ್ನು ಹೇಗೆ ಬಿಟ್ಟು ಬಿಡಲಿ?

ಯದು: ಬಡ್ಡೀ ಮಗನೆ! ಸತ್ಯ ಮತ್ತು ಪ್ರಾಮಾಣಿಕತೆಗೆ ಹುಟ್ಟಿರುವವನು ನೀನೊಬ್ಬನೇ ಉಳಿದಿರುವುದು. ಆರಾಮವಾಗಿರುವುದು ನಿನ್ನ ಅದೃಷ್ಟದಲ್ಲಿದ್ದರೆ ತಾನೆ?

ಲೀಲಾ: (ಅರವಿಂದನೊಂದಿಗೆ) ನಿಮಗೇನು ದರದು ಇತ್ತು? ಕಾಪಿ ಮಾಡುತ್ತಿದ್ದ ತಾನೆ. ಮಾಡುವುದಕ್ಕೆ ಬಿಡಬೇಕಾಗಿತ್ತು. ಅದರಿಂದ ಏನು ಹಾಳಾಗುತ್ತಿತ್ತು?

ಅರವಿಂದ: ನೋಡುನೋಡ್ತಾ ಅಮೇಧ್ಯ ತಿನ್ನಕ್ಕಾಗಲ್ಲವಲ್ಲ.

ಲೀಲಾ: ಹಾಗಾದರೆ ಏನು ಜಗಳ ಆಗುತ್ತಾ?

ಯದೂ: ಆಗದೆ ಇನ್ನೇನು ಮತ್ತೆ? ಈ ಸಲವಂತೂ ಸರಿಯಾಗಿ ಹೊಡೆದಾಟ ಬಡಿದಾಟ ಆಗುತ್ತೆ.

ಲೀಲಾ: ಮತ್ತೆ ಇದರ ಜವಾಬ್ದಾರಿಯನ್ನು ಇವರ ತಲೆಗೆ ಮಟ್ಟುತ್ತಾರೆ (ಅರವಿಂದನೊಂದಿಗೆ) ಇಷ್ಟೆಲ್ಲಾ ತಿಳಿಸಿ ಹೇಳಿದ ಮೇಲೂ ನೀವು ಯಾಕೆ ಒಪ್ಪುತ್ತಾ ಇಲ್ಲ? ಇಂಥದೆಲ್ಲಾ ಸಾಹಸ ಮಾಡುವುದಕ್ಕೆ ನಿಮಗೆ ವಯಸ್ಸಿದೆಯೇನು?

ಯದೂ: ಈಗ ಯಾಕೆ ತಿಳಿಸಿ ಹೇಳುತ್ತಿದ್ದೀರಿ? ಜೀವಮಾನದುದ್ದಕ್ಕೂ ಇವನಿಗೆ ಪ್ರೀತಿ ಮಾಡಿದ್ದೇ ಮಾಡಿದ್ದು. ಇವನ ಆದರ್ಶದ ಮೂರ್ಖತನಗಳ ಆರಾಧನೆ ಮಾಡುತ್ತಾ ಬಂದಿರಿ. ಈಗ ಏಕೆ ಹಾರಾಡುತ್ತಾ ಇದ್ದೀರಿ?

ಲೀಲಾ: ನನ್ನ ಮಾತು ಯಾರು ಕೇಳುತ್ತಿದ್ದರು?

ಯದೂ: ಕೇಳದೆ ಇದ್ದರೆ ವಿರೋಧಿಸಬೇಕಾಗಿತ್ತು. ಆದರೆ ದೊಡ್ಡಸ್ತಿಕೆ ತೋರಿಸುವ ಅಭ್ಯಾಸ ಎಲ್ಲಿ ಹೋಗುತ್ತೆ?

ಅರವಿಂದ: ನಾನು ಹೇಳುವುದನ್ನೂ ಸ್ವಲ್ಪ ಕೇಳುತ್ತೀಯಾ?

ಯದೂ: ನಿನ್ನ ಮಾತು ಕೇಳಿ ಕೇಳಿ ನನ್ನ ಕಿವಿ ಕಿವುಡಾಯಿತು. ನಾನು ನೋಡಿದರೆ ಒಂದೆರಡು ವರ್ಷಗಳಲ್ಲಿ ನೀನು ಪ್ರಿನ್ಸಿಪಾಲ್ ಆಗುತ್ತೀಯಾ ಅಂತ ಅಂದುಕೊಂಡಿದ್ದೆ. ನೀನು ನೋಡಿದರೆ ಇದೆಲ್ಲಿಯ ಉಪದ್ವ್ಯಾಪ ಮಾಡಿಟ್ಟಿದ್ದೀಯ. (ಬಿಡುವು). ಮೊದಲು ನಿನ್ನ ಚರ್ಮ ಉಳಿಸಿಕೊ. ಆಮೇಲೆ ಬೇರೆಯವರ ಮೇಲೆ ಕೈ ಹಾಕು.

ಅರವಿಂದ: ನನ್ನ ಜಾಗದಲ್ಲಿ ನೀನು ಇದ್ದಿದ್ದರೆ ಏನು ಮಾಡುತ್ತಿದ್ದೆ?

ಯದು: ನಾನೆ? ನಾನಾಗಿದ್ದರೆ ಇನ್ನಷ್ಟು ಪೇಪರ್ ತಂದು ಕೊಡುತ್ತಿದ್ದೆ. ಹೇಳ್ತಾ ಇದ್ದೆ; ಕಾಪಿಮಾಡು ಮಗನೆ. ಸಂತೋಷವಾಗಿ ಮಾಡು. ನಮ್ಮಪ್ಪನದ್ದೇನು ಹೋಗುತ್ತೆ! – ಅಂತ.

ಅರವಿಂದ: ಏನು ನೀನು ಹೀಗೆ ಯೋಚನೆ ಮಾಡುತ್ತೀಯಾ?

ಯದೂ: ನಾನು ಯೋಚನೆಯನ್ನೇ ಮಾಡಲ್ಲ. ಯೋಚನೆ ಮಾಡುವುದರಿಂದೇನು ಲಾಭ? ಆದರೆ ನೀನು ಇದ್ದೀಯಲ್ಲ ಮಿಡ್ಲ್ ಕ್ಲಾಸ್ ಮನುಷ್ಯ. ಪ್ರತಿಯೊಂದು ಸಣ್ಣ ಪ್ರಶ್ನೆಯನ್ನೂ ಗ್ಲೋರಿಫೈ ಮಾಡುತ್ತೀಯ. ಹಾಹಾಕಾರ ಮಾಡುತ್ತೀಯ. ನಿನ್ನನ್ನು ಯಾರು ಕೇಳುತ್ತಾರೆ!

ಅರವಿಂದ: ಬೇರೆಯವರಿಗೆ ಈ ಪ್ರಶ್ನೆ ಸಣ್ಣದಾಗಿರಬಹುದು ಯದೂ. ಆದರೆ ನಮಗೆ ಇದು ಜೀವನ್ಮರಣದ ಪ್ರಶ್ನೆ. ಇದು ಪ್ರೋಫೆಷನಲ್ ಎಥಿಕ್ಸ್ ಪ್ರಶ್ನೆ.

ಯದೂ: ಲೆಕ್ಚರ್ ಕೊಡಬೇಡ. ಯಾವ ಹೊತ್ತು ನೀನು ವಿಮಲೇಂದು ಅವರ ದ್ರೋಣಾಚಾರ್ಯನಾಟಕ. ಆಡಿದೆ, ಆಗಿನಿಂದ ನಿನ್ನ ಬುದ್ಧಿ ತಿರುಗಿ ಹೋಗಿದೆ. (ಬಿಡುವು) ಮಿಡ್ಲ್‌ಕ್ಲಾಸ್. ನಪುಂಸಕನ ಆವೇಶ ಬಿಟ್ಟುಬಿಡು. ಹೋಗು ಪ್ರೆಸಿಡೆಂಟರ ಕೈಕಾಲು ಹಿಡಿ. ಕೇಸ್ ವಾಪಸ್‌ತಗೋ.

ಅರವಿಂದ: ಯದೂ!

ಯದೂ: ಹಾಗಲ್ಲದೆ ಇನ್ನೇನು! ತಾಯಿ ಕ್ಯಾನ್ಸರ್ ಹತ್ತಿ ಆಸ್ಪತ್ರೆಯಲ್ಲಿ ಬಿದ್ದಿದ್ದಾರೆ. ವಿಧವೆ ತಂಗಿ ಪ್ರತಿ ತಿಂಗಳು ಒಂದನೇ ತಾರೀಕು ನಿನ್ನ ಮನಿ ಆರ್ಡರ್ ನಿರೀಕ್ಷೆಯಲ್ಲಿರುತ್ತಾಳೆ. ಮಗನನ್ನು ಮೆಡಿಕಲ್ ಕಾಲೇಜಿಗೆ ಕಳಿಸಬೇಕಾಗಿದೆ. ಇವರುಗಳ ಕಡೆ ನೋಡು. ಈ ಸಿದ್ಧಾಂತ-ಗಿದ್ಧಾಂತದ ಮೂರ್ಖತನ ಬಿಟ್ಟುಬಿಡು.

ಲೀಲಾ: ಇವರಿಗೆ ತಿಳಿಸಿ ಹೇಳುವುದು ವ್ಯರ್ಥ ಯದೂ ಅಣ್ಣ! ವಿವೇಕಕ್ಕೂ ಇವರಿಗೂ ಶತ್ರುತ್ವ. ಗೋಡೆಗೆ ತಲೆ ಚಚ್ಚಿಕೊಳ್ಳುತ್ತ ಅರ್ಧ ಆಯಸ್ಸು ಕಳೆದು ಹೋಯಿತು.

ಯದೂ: (ಅರವಿಂದನೊಂದಿಗೆ) ಏನು, ನೀನು ಪ್ರೆಸಿಡೆಂಟರ. ಮಗನದ್ದನ್ನು ರಿಪೋರ್ಟ್ ಮಾಡಿದೆಯಾ?

ಅರವಿಂದ: ಇನ್ನೇನು ಮಾಡಬೇಕಾಗಿತ್ತು ನಾನು?

ಯದೂ: ಆದರೆ ಆ ನಮ್ಮ ಪ್ರಿನ್ಸಿಪಾಲ್ ಹಲ್ಲುಗಿಂಜಿರಬೇಕು! ಏನು ಹೇಳುತ್ತಾನೆ ಅವನು?

ಅರವಿಂದ: ರಿಪೋರ್ಟನ್ನು ಹತ್ತಿಕ್ಕಬೇಕು ಅಂತ ಇದ್ದಾನೆ. ರಿಪೋರ್ಟ್ ವಾಪಸ್ ತೆಗೆದುಕೊಳ್ಳಬೇಕು ಎಂದು ಒತ್ತಡ ತರುತ್ತಿದ್ದಾನೆ.

ಲೀಲಾ: ಹಾಗಾದರೆ ವಾಪಸ್ ಯಾಕೆ ತೆಗೆದುಕೊಳ್ಳಬಾರದು? (ಬಿಡುವು) ಬೈ ಮಿಸ್ಟೇಕ್ ಆಗಿದೆ ಎಂದು ಹೇಳಿಬಿಡಿ.

ಅರವಿಂದ: ರಿಪೋರ್ಟ್ ವಾಪಸ್ ತೆಗೆದುಕೊಳ್ಳಲು ಸಾಧ್ಯವಿಲ್ಲ. ವಿಷಯ ತುಂಬ ಮುಂದೆ ಹೋಗಿದೆ.

ಯದೂ: ಹಾಗಾದರೆ ಸಾಯಿ! ಪ್ರೆಸಿಡೆಂಟ್ ಕೆಲಸದಿಂದ ತೆಗೆದು ಬಿಡುತ್ತಾನಲ್ಲ ಆಗ ಬುದ್ಧಿ ನೆಟ್ಟಗಾಗುತ್ತೆ.

ಅರವಿಂದ: ಹಾಗೆ ಹೇಗೆ ಹೊರಗೆ ಹಾಕುತ್ತಾನೆ? ಬೇರೆ ಪ್ರೊಫೆಸರ್‌ಗಳು ಸುಮ್ಮನೆ ಕೂತಿರ್ತಾರೇನು?

ಯದೂ: ಯಾವ ಪ್ರಪಂಚದಲ್ಲಿದ್ದೀ! ನಿನ್ನ ಪ್ರತಿಯೊಬ್ಬ ಸಹೋದ್ಯೋಗಿಯೂ ನಿನ್ನನ್ನು ಬಯ್ತಾ ಇರೋದು ನಿನಗೆ ಗೊತ್ತಿಲ್ಲವೇನು?

ಅರವಿಂದ: ಯಾಕೆ?

ಯದೂ: ಯಾಕೆ ಅಂದರೆ ನೀನು ಪ್ರೆಸಿಡೆಂಟರಿಗೆ ಸಿಟ್ಟು ಬರಿಸಿದ್ದೀಯ. ಪ್ರತಿಯೊಬ್ಬರೂ ಯೋಚನೆಮಾಡುವುದು ಈಗ enhance ಆದ ಡಿ.ಎ. cold storageಗೆ ಬಿತ್ತು ಎಂದು.

ಅರವಿಂದ: ಹಾಗಾದರೆ ಯಾರೂ ನನ್ನ ಬೆಂಬಲಕ್ಕೆ ನಿಲ್ಲುವುದಿಲ್ಲವೇನು?

ಯದೂ: ವಿಮಲೇಂದು ಅವರ ಬೆಂಬಲಕ್ಕೆ ಯಾರು ನಿಂತಿದ್ದರು? ಎಲ್ಲರೂ ಹೇಡಿಗಳ ಹಾಗೆ ಮನೆಯಲ್ಲಿ ಕುಳಿತಿದ್ದರು. ಗೂಂಡಾಗಳು ಸರ್ಕಲ್ ಮಧ್ಯದಲ್ಲಿ ಅವರ ಪ್ರಾಣ ತೆಗೆದರು – ಏನಾಯಿತು? ಅವರೂ ಒಬ್ಬ ದೊಡ್ಡ ಮನುಷ್ಯರ ಮಗ. ಕಾಪಿ ಮಾಡುತ್ತಾ ಇರುವಾಗ ಹಿಡಿದಿದ್ದರು. ಒಬ್ಬರಾದರೂ ಸಾಕ್ಷಿ ಹೇಳಲು ಹೋದರಾ? ಎಲ್ಲ ಬಡ್ಡಿಮಕ್ಕಳೂ ಬಾಲ ಅದುಮಿಕೊಂಡು ಕೂತುಕೊಂಡರು.

ಅರವಿಂದ: ವಿಮಲೇಂದು ಹೆಸರು ಹೇಳಿ ನೀನು ನನ್ನನ್ನು ಹೆದರಿಸುತ್ತಾ ಇದ್ದೀಯ. ಯಾರು ಬೆಂಬಲಕ್ಕೆ ನಿಲ್ಲಲಿ, ಬಿಡಲಿ ನಾನು ರಿಪೋರ್ಟ್‌ವಾಪಸ್ ತೆಗೆದುಕೊಳ್ಳುವುದಿಲ್ಲ.

ಯದೂ: ನೀನು ಒಬ್ಬನೇ ಏನೂ ಮಾಡುವುದಕ್ಕಾಗಲ್ಲ. ಈಗಲೂ ಇನ್ನೂ ಸಮಯವಿದೆ. ನಾನು ಹೇಳುವುದನ್ನು ಕೇಳು. ರಿಪೋರ್ಟ್ ವಾಪಸ್ ತೆಗೆದುಕೊಂಡು ಬಿಡು. (ಹೊರಡುತ್ತಾನೆ)

ಅರವಿಂದ: ಎಲ್ಲಿಗೆ ಹೋಗುತ್ತಾ ಇದ್ದೀಯಾ?

ಯದೂ: ಸ್ವಲ್ಪ ಪತ್ತೆ ಮಾಡಿಕೊಂಡು ಬರಲಾ ಅಂತ. ಹುಡುಗರಂತೂ ಹೇಗೂ ಏನಾದರೂ ಪ್ಲಾನ್ ಮಾಡುತ್ತಲೇ ಇರಬಹುದು. ಅವರ ಉದ್ದೇಶಗಳ ಅರಿವು ನಮಗಿರಬೇಕು. ನಾನು ಹೇಳಿದ್ದನ್ನು ಕುರಿತು ಇನ್ನೊಮ್ಮೆ ಯೋಚನೆ ಮಾಡು. ನಿನ್ನನ್ನು ಸಪೋರ್ಟ್ ಮಾಡುವವರು ಯಾರೂ ಇಲ್ಲ. ಯಾರನ್ನೂ ನಂಬಬೇಡ. [ಯದೂ ಹೋಗುತ್ತಾನೆ. ಕೆಲಕ್ಷಣಗಳ ಕಾಲ ಅಸಹನೀಯ ಮೌನ] (ಬಿಡುವು)

ಲೀಲಾ: [ಕೋಪದಿಂದ] ನಿಮ್ಮ ಸಂಸಾರದ ರಥವನ್ನು ಹೇಗೆ ನಡೆಸುತ್ತಿದ್ದೀನಿ ಎಂದು ಗೊತ್ತಿದೆಯಾ ನಿಮಗೆ? ಒಂದೊಂದು ಪೈಸೆಗೂ ಜಗ್ಗಾಟ ಮಾಡಬೇಕಾಗಿದೆ. ನೀವು ನೋಡಿದರೆ ಇದೊಂದು ಹೊಸ ಆಪತ್ತು ತಂದಿಟ್ಟಿದ್ದೀರಿ.

ಅರವಿಂದ: ನಾನು ಅದನ್ನು ನಿಭಾಯಿಸ್ತೀನಿ.

ಲೀಲಾ: ಬಲು ಬಲು ನಿಭಾಯಿಸ್ತೀರಿ! ಕೆಲಸ ಬಿಟ್ಟು ಕುಳಿತು ಕೊಳ್ಳುತ್ತೀರಿ. ಏನು ನೀವೊಬ್ಬರೇ ಪ್ರಪಂಚವನ್ನು ಸರಿಪಡಿಸುವ ಗುತ್ತಿಗೆ ತೆಗೆದು ಕೊಂಡಿದ್ದೀರಾ?

ಅರವಿಂದ: ಹಾಗಂತ ನಾನು ಯಾವಾಗ ಪ್ರಮಾಣಮಾಡಿ ಹೇಳಿದ್ದೀನಿ?

ಲೀಲಾ: ಈಗ ಸುತ್ತಾಡುವಷ್ಟು ವಯಸ್ಸಿದೆಯೆ ಎಂದು ಏತಕ್ಕೆ ಯೋಚನೆ ಮಾಡಲ್ಲ? ಮದುವೆಯಾಗಿ ಇಪ್ಪತ್ತು ವರ್ಷ ಆಯಿತು. ಯಾವ ವಿಷಯದಲ್ಲಾದರೂ ಭರವಸೆ ಎನ್ನುವುದು ಇದ್ದಿದ್ದರೆ? (ಬಿಡುವು).

ಆ ದೇವರ ಮೇಲೆ ಆಣೆ, ಕೊನೆಯ ಪಕ್ಷ ಈಗ ಕೈಗೆ ಹತ್ತಿರುವ ಅನ್ನವೂ ಕೈ ಬಿಟ್ಟು ಹೋಗುವಂಥ ಕೆಲಸ ಮಾತ್ರ ಮಾಡಬೇಡಿ.

ಅರವಿಂದ: ಈಗ ನಾನು ಯಾರು ಯಾರಿಗೆ ಅಂತ ಹೆದರಿಕೊಳ್ಳಬೇಕು ಲೀಲಾ? ಕಾಲೇಜನ್ನು ಅಂಗಡಿ ಥರಾ ನಡೆಸುತ್ತಿರುವ ಆ ಪ್ರೆಸಿಡೆಂಟ್‌ಗೆ? (ಬಿಡುವು) ಹೆಬ್ಬೆಟ್ಟೊತ್ತುವ ಕಮಿಟಿ ಮೆಂಬರುಗಳಿಗೆ? (ಬಿಡುವು) ಚಾಡಿ ಮಾತು ಕೇಳುವ ಸಹೋದ್ಯೋಗಿಗಳಿಗೆ? ಆ ಬೆಣ್ಣೆ ಥರದ ಪೆದ್ದ ಪ್ರಿನ್ಸಿಪಾಲ್‌ಗೆ? ವಿದ್ಯಾರ್ಥಿಗಳಿಗೆ? ಇಡೀ ಆಯುಷ್ಯಪೂರ್ತಿ ಹೆದರಿಕೊಂಡೇ ಇರಬೇಕೆ?

ಲೀಲಾ: ಈ ಹುಡುಗರದ್ದೇನು ಭರವಸೆ? ಯಾರಿಗೆ ತಾನೆ ಇವರುಗಳು ಬೆಂಬಲಕ್ಕೆ ನಿಂತಿದ್ದಾರೆ! ಎಲ್ಲಾದರೂ.... ವಿಮಲೇಂದೂ ಹಾಗೆ, ನಿಮ್ಮನ್ನೂ..... ನಾನು ಹೇಳುತ್ತೀನಿ, ಈ ಜಂಜಾಟದಲ್ಲಿ ಯಾಕೆ ಬೀಳುತ್ತೀರಿ?

ಅರವಿಂದ: ಆಯಿತು ನೋಡೋಣ (ಸಿಗರೇಟ್ ಪ್ಯಾಕೆಟ್ ತೆರೆದು ನೋಡುತ್ತಾನೆ) ಸಿಗರೇಟ್ ತೊಗೊಂಡು ಬರಲಾ

ಲೀಲಾ: ಇಷ್ಟು ಹೊತ್ತಿನಲ್ಲಿ ಹೊರಗಡೆ ಹೋಗಬೇಡಿ.

ಅರವಿಂದ: ಹೆದರ್ತೀಯಾ? ಇಷ್ಟೊಂದು ಹೆದರಿಕೊಂಡರೆ ಕೆಲಸ ಹೇಗೆ ನಡೆಯಬೇಕು? [ಹೋಗುತ್ತಾನೆ. ಲೀಲಾ ಚಿಂತಿತಳಾಗಿದ್ದಾಳೆ. ಅವಳು ಅಲ್ಲಿ ಚೆದರಿದ್ದ. ಪ್ರತಿಗಳನ್ನು ಜೋಡಿಸತೊಡಗುತ್ತಾಳೆ. ಟೇಬಲ್ ಕ್ಲಾತನ್ನು ಸರಿಪಡಿಸುತ್ತಾಳೆ. ಪ್ರಿನ್ಸಿಪಾಲ್‌ನ ಪ್ರವೇಶ. ವಯಸ್ಸು ಸುಮಾರು ಅರುವತ್ತು ವರ್ಷ. ಆದರೆ ಇನ್ನೂ ಹೆಚ್ಚು ವಯಸ್ಸಾದವನ ಹಾಗೆ ಕಾಣುತ್ತಾನೆ ಕುಳ್ಳ. ಒಕ್ಕಣ್ಣ]

ಲೀಲಾ: (ಆಶ್ಚರ್ಯದಿಂದ) ತಾವು?

ಪ್ರಿನ್ಸಿಪಾಲ್: ಏನು ಮಾಡಲಿ; ಬರಲೇಬೇಕಾಯಿತು. ಇಂಥ ಕಷ್ಟ ಬಂದು ಬಿಟ್ಟಿದೆಯಲ್ಲ. ಸಹಿಸದೆ ಹೋದರೆ ಎಲ್ಲಿಗೆ ಹೋಗೋಣ! ಕೆಟ್ಟ ದಿನಗಳು ಬಂದು ಬಿಟ್ಟವಲ್ಲ!

ಲೀಲಾ: ನೀವು ಇವರನ್ನು ನೋಡಲಿಲ್ಲವೆ? ಈಗ ತಾನೆ ಹೋದರು.

ಪ್ರಿನ್ಸಿಪಾಲ್: ಯಾಕೆ ನೋಡಲಿಲ್ಲ! ಆದರೇನು ಪ್ರಯೋಜನ?

ಲೀಲಾ: ನೀವು ತಡೆಯಲಿಲ್ಲವೆ?

ಪ್ರಿನ್ಸಿಪಾಲ್: ಅವನನ್ನು ಯಾರದರೂ ನಿಲ್ಲಿಸುವುದಕ್ಕಾಗುತ್ತಾ? ಏನು ದಿನಗಳು ಬಂದುಬಿಟ್ಟವು!

ಲೀಲಾ: ಹಾಗಾದರೆ ನೀವು ಅವರ ಹತ್ತಿರ ಮಾತನಾಡುವುದಕ್ಕೆ ಇಷ್ಟ ಪಡುವುದಿಲ್ಲವೆ?

ಪ್ರಿನ್ಸಿಪಾಲ್: ಏನಾದರೂ ಕೇಳಿಸಿಕೊಂಡರೆ ತಾನೆ ಮಾತನಾಡೋದು. ಏನಾದರೂ ಪ್ರಯೋಜನ ಆಗುವುದಾದರೆ ತಾನೆ ಮಾತನಾಡೋದು. ನಡೀತದೆ. ಸಹಿಸಿಕೊಳ್ಳದೆ ಹೋದರೆ ಎಲ್ಲಿಗೆ ಹೋಗೋಣ?

ಲೀಲಾ: ಹಾಗಾದರೆ ತಾವು?

ಪ್ರಿನ್ಸಿಪಾಲ್: ನಿಮ್ಮ ಹತ್ತಿರ ಮಾತನಾಡುವುದಕ್ಕೆ ಬಂದಿದ್ದೀನಿ. ಬಹುಶಃ ನೀವೇ ಅವನಿಗೆ ತಿಳಿಸಿ ಹೇಳಬಹುದು. ತಿಳಿಯ ಹೇಳುವುದಂತೂ ಇದ್ದೇಇದೆ.

ಲೀಲಾ: ನಾನು ಏನು ತಿಳಿಯ ಹೇಳಬಹುದು?

ಪ್ರಿನ್ಸಿಪಾಲ್: ಹಾಗಾದರೆ ಯಾರು ತಿಳಿಯ ಹೇಳಬಹುದು. ನೋಡಿದಿರಲ್ಲ, ಎಲ್ಲ ಸರಿಯಾಗಿ ನಡೆಯುತ್ತಿತ್ತು. ಪ್ರೆಸಿಡೆಂಟ್ ಸಾಹೇಬರು ಖುಷಿಂಯಾಗಿದ್ದರು. ಎಲ್ಲರಿಗೂ ಸಂಬಳ ಸಿಕ್ಕುತ್ತಿತ್ತು. ಡಿ.ಎ.ಕೊಡಬೇಕೆಂದು ಯೋಚಿಸಿದ್ದರು. ಆದರೆ ಅರವಿಂದನೇ ಇಲ್ಲದ ಕಷ್ಟ ತಂದಿಟ್ಟಿದ್ದಾನೆ. (ಸಮಸ್ಯೆ) ಇದನ್ನೇ ಕೆಟ್ಟ ದಿನಗಳು ಅಂತ ಹೇಳೋದು. ಏನು ಅರ್ಥವಾಯಿತೆ?

ಲೀಲಾ: ನಾನು ಹೇಳಿದ್ದನ್ನು ಎಲ್ಲಿ ಒಪ್ಪುತ್ತಾರೆ ಅವರು?

ಪ್ರಿನ್ಸಿಪಾಲ್: ಹಾಗಾದರೆ ನೀವೆಂಥಾ ಹೆಂಗಸು? ಅರೆ, ಕಾಪಿಮಾಡುವುದನ್ನು ಹಿಡಿಯುವುದು ಜೂನಿಯರ್ ಲೆಕ್ಚರರ್‌ಗಳ ಕೆಲಸ; ಸೀನಿಯರ್‌ಗಳಿಗೆ ಅದೇನು ಮರ್ಯಾದೆ ತರುತ್ತದೆಯೆ? ಆಯಿತು. ಒಂದು ತಪ್ಪಂತೂ ಆಗಿ ಹೋಯಿತು. ಆದರೆ ಈಗ ಅದನ್ನು ಸರಿಪಡಿಸುವುದಾದರೂ ಆಗಬೇಕಲ್ಲವೆ?

ಲೀಲಾ:	ನಾನೆಲ್ಲಿ ಅದನ್ನು ತಡೆದಿದ್ದೀನಿ? ಆದರೆ ಒಪ್ಪಬೇಕಲ್ಲ!
ಪ್ರಿನ್ಸಿಪಾಲ್:	ಈಗ ನಿಮಗೆ ಏನೂಂತ ಹೇಳಲಿ? ಊರಲ್ಲಿ ಭಾರೀ ಗಲಾಟೆ ಆಗುವ ಭಯ ಇದೆ. ಹುಡುಗರು ನನ್ನನ್ನು ಸಾಯಿಸಿ ಬಿಡ್ತೀವಿ ಅಂತ ಬೆದರಿಕೆ ಹಾಕ್ತಿದ್ದಾರೆ.
ಲೀಲಾ:	ತಮಗೆ?
ಪ್ರಿನ್ಸಿಪಾಲ್:	ಹೌದು ನನಗೆ. ಈ ಮುದುಕನಿಗೆ. ಆದರೆ ಏನು ಮಾಡೋದು? ಎಲ್ಲ ಸಹಿಸಬೇಕಾಗಿದೆ. ಕೆಲಸ ಮಾಡಬೇಕು ಅಂದರೆ ಏಟೂ ತಿನ್ನಬೇಕಾಗುತ್ತೆ.
ಲೀಲಾ:	ಆದರೆ ರಾಜಕುಮಾರ್ ಕಾಪಿ ಮಾಡಿದನೆ?
ಪ್ರಿನ್ಸಿಪಾಲ್:	ಈಗ ನನ್ನನ್ನು ಕೇಳಿ ಅಂತೂ ಮಾಡಲಿಲ್ಲ. ಒಂದು ಚೂರು ಮಾಡಿದ್ದರೆ ತಾನೆ ಯಾರದ್ದೇನು ಹಾಳಾಯ್ತು? ತಪ್ಪು ಯಾರು ಮಾಡಿದ್ದಾರೋ ಅವರದ್ದು. ಇವರಪ್ಪನ ಮನೆ ಗಂಟೇನು ಹೋಯಿತು!
ಲೀಲಾ:	ಆದರೂ?
ಪ್ರಿನ್ಸಿಪಾಲ್:	ಈಗ ನಿಮಗೆ ಅರ್ಥವಾಗಲ್ಲ. ಕಾಪಿ ಮಾಡುವುದು ನಿಲ್ಲಬಹುದು, ನಿಲ್ಲದೆ ಇರಬಹುದು. ಆದರೆ ಕಾಲೇಜಂತೂ ನಿಂತು ಹೋಗುತ್ತೆ. ಕೆಲಸವಂತೂ ಖಂಡಿತ ಹೋಗುತ್ತೆ. ಕೆಟ್ಟ ದಿನ ಅಂತ ಇನ್ನ್ಯಾವುದಕ್ಕೆ ಹೇಳ್ತಾರೆ?
ಲೀಲಾ:	ವಿಷಯ ಈ ಹಂತದವರೆಗೂ ಹೋಗುತ್ತೇನು?
ಪ್ರಿನ್ಸಿಪಾಲ್:	ಈ ಹಂತದವರೆಗೂ! ಇಲ್ಲ, ಇದಕ್ಕಿಂತ ಮುಂದಕ್ಕೂ ಹೋಗಬಹುದು. ಪ್ರೆಸಿಡೆಂಟ್ ಸಾಹೇಬರು ಇದರ owner; ಅವರೇ ಅನ್ನದಾತರು. ಅವರ ಕಾಲೇಜು, ಅವರ ಮರ್ಜಿ. ಅದಕ್ಕೇ ಹೇಳ್ತೀನಿ. ಕೆಲಸ ಮಾಡಬೇಕು ಅಂದರೆ ಕಿವಿಮುಚ್ಚಿಕೊಳ್ಳಿ. ಕಣ್ಣು ಮುಚ್ಚಿಕೊಳ್ಳಿ. ಬಾಯಿ ತೆರೆದುಕೊಂಡಿರಿ–ಮಾತನಾಡುವುದಕ್ಕಲ್ಲ, ಅನ್ನ ತಿನ್ನುವುದಕ್ಕೆ.
ಲೀಲಾ:	ಪ್ರೆಸಿಡೆಂಟರು ಕಾಲೇಜು ಮುಚ್ಚಿಬಿಡುತ್ತಾರೆ ಅಂತ ನಿಮಗೆ ಪೂರಾ ನಂಬಿಕೆ ಇದೆ ಅಲ್ಲವೆ?

ಪ್ರಿನ್ಸಿಪಾಲ್: ಹಾಗಲ್ಲದೆ ಮತ್ತಿನ್ನೇನು! ಸ್ವಲ್ಪ ಯೋಚನೆಮಾಡಿ ನೋಡಿ. ಎಲ್ಲರೂ ಮಕ್ಕಳು ಮರಿ ಇರೋರು. ಎಲ್ಲಿಗೆ ಹೋಗ್ತಾರೆ? ಪ್ರತಿಯೊಬ್ಬರೂ ದೊಡ್ಡ ಮನುಷ್ಯರಂತೂ ಆಗಿರೋದಕ್ಕಾಗೋಲ್ವಲ್ಲ.

ಲೀಲಾ : (ಚಿಂತೆಯ ದನಿಯಿಂದ) ಆದರೆ ಇವರಂತೂ ಯಾವಗಲೂ ತತ್ತ್ವ ಮತ್ತು ನ್ಯಾಯದ ಮಾತು ಆಡ್ತಾರೆ.

ಪ್ರಿನ್ಸಿಪಾಲ್: ಈಗ ನ್ಯಾಯದ ಪ್ರಶ್ನೆತಾನೆ ಎಲ್ಲಿ ಬಂತು? ಈಗಿರೋ ಪ್ರಶ್ನೆ - ನಲವತ್ತು ಕುಟುಂಬಗಳ ಅನ್ನದ ಪ್ರಶ್ನೆ. ಏನು, ಗೊತ್ತಾಯಿತೆ- ಅನ್ನದ್ದು. ಕೆಟ್ಟ ದಿನಗಳು ಬಂದು ಬಿಟ್ಟವುನೋಡಿ.

ಲೀಲಾ: ಜನಗಳು ವಿರೋಧಿಸೋಲ್ಲವೆ?

ಪ್ರಿನ್ಸಿಪಾಲ್: ಯಾರಿಗೆ ಧೈರ್ಯವಿದೆ? ದುಷ್ಟರನ್ನು ಎಲ್ಲಾದರೂ ವಿರೋಧ ಮಾಡಿಕೊಳ್ಳುವುದಕ್ಕಾಗುತ್ತದೆಯೆ? ನನಗಂತೂ ಬೆಳಿಗ್ಗೆಯಿಂದ ಸಂಜೆತನಕ ಬಯ್ತಾ ಇರುತ್ತಾನೆ. ಕತ್ತೆ, ಗೂಬೆ, ಅಂತೆಲ್ಲಾ ಬಯ್ತಾನೆ. ಆದರೇನು ಮಾಡಲಿ? ಎಲ್ಲ ಕೇಳಿಸಿಕೊಳ್ತೀನಿ. ಕೇಳಿಸಿಕೊಳ್ಳದಿದ್ದರೆ ಎಲ್ಲಿಗೆ ಹೋಗಲಿ? ಕೆಲಸವನ್ನಂತೂ ಮಾಡಬೇಕಲ್ಲವೆ.

ಲೀಲಾ : ತಾವು ಹೇಳೋ ಮಾತು ನನಗೆ ಚೆನ್ನಾಗಿ ಅರ್ಥ ಆಗುತ್ತೆ ಪ್ರಿನ್ಸಿಪಾಲ್ ಸಾಹೇಬರೆ. ಆದರೆ ಯಾರು ಅರ್ಥ ಮಾಡಿಕೊಳ್ಳಬೇಕೋ ಅವರು ಸಿದ್ಧವಾಗಿರಬೇಕಲ್ಲ?

ಪ್ರಿನ್ಸಿಪಾಲ್ : ಹಾಗೆ ನೋಡಿದರೆ ಯಾರು ತಾನೆ ಸಿದ್ಧವಾಗಿರ್ತಾರೆ? ಈಗ ನೀವೇ ಹೇಳಿ- ನಾನೇನು ಸಂತೋಷವಾಗಿ ನಾಲಾಯಕ್ ಅಂತ ಕರೆಸಿಕೊಳ್ತೇನೆಯೆ? ಆದರೆ ಕರೆಸಿಕೊಳ್ತೀನಿ. ನಾಲಾಯಕ್ ಅಂತ ಕರೆಸಿಕೊಂಡ ಮೇಲೂ ನಾನು ಸಂತೋಷವನ್ನು ವ್ಯಕ್ತಪಡಿಸುತ್ತಿರುತ್ತೇನೆ. ಕೆಲಸ ಮಾಡಬೇಕಲ್ಲ. (ಬಿಡುವು) ನನ್ನ ವಿಷಯ ಬಿಡಿ. ನಿಮ್ಮದು ಯೋಚನೆ ಮಾಡಿ. ಕೆಲಸ ಹೋಯಿತು ಅಂದರೆ ಯಾರಿಗೆ ಚಿಂತೆ? ನಿಮಗೆ ತಾನೆ? ಅನುಭವಿಸೋರು ಯಾರು? ನೀವು! ಮನೆ ನಡೆಸೋದು ಯಾರು? ವೃದ್ಧಾಪ್ಯವನ್ನು ನರಕ ಮಾಡಿಕೊಳ್ಳೊದಾ? (ಬಿಡುವು) ಇದರದ್ದೂ ಹಾಗಿರಲಿ. ಆದರೆ

ನಾವು ಬದುಕಿದ್ದರೆ ತಾನೆ ಜಗತ್ತು. ಪ್ರಾಣ ಅಂತೂ ಉಳಿಸಿಕೊಳ್ಳಬೇಕಲ್ಲ. ಛೆ ಎಂಥ ದಿನಗಳು ಬಂದು ಬಿಟ್ಟವು! ಮೇಷ್ಟ್ರ ಪ್ರಾಣ ಅಪಾಯದಲ್ಲಿದೆ.

ಲೀಲಾ: ಹಾಗಾದರೆ ಏನು ವಿಮಲೇಂದು ಥರ...?

ಪ್ರಿನ್ಸಿಪಾಲ್: ಏನು ಬೇಕಾದರೂ ಆಗಬಹುದು. ಪಾಪ ಬಡಪಾಯಿಯನ್ನು ಹೊಡೆದು ಹಾಕಿದರಲ್ಲವೆ! ಈಗ ಏನು ಪರಿಸ್ಥಿತಿ? ಅವರ ವಿಧವೆ ಹೆಂಡತಿಯ ಮುಖನೋಡೋದಕ್ಕಾಗೋಲ್ಲ. ಯೋಚನೆ ಮಾಡಿ ಸ್ವಲ್ಪ. ಮನೆಯನ್ನು ಕತ್ತಲಾಗಿಸಿ, ದೇವಸ್ಥಾನದಲ್ಲಿ ದೀಪ ಹಚ್ಚುವುದರಿಂದ ಏನಾದರೂ ಪ್ರಯೋಜನ ಇದೆಯಾ?

ಲೀಲಾ: ನಾನು ಇವರಿಗೆ ತಿಳಿಸಿಹೇಳ್ತೀನಿ.

ಪ್ರಿನ್ಸಿಪಾಲ್: ಹಾಂ, ಇದು ನೋಡಿ ವ್ಯವಹಾರದ ಮಾತು, ಹೆಂಡತಿ ಮಾತ್ರ ತನ್ನ ಗಂಡನಿಗೆ ತಿಳಿಯ ಹೇಳಬಲ್ಲಳು. ಅವನಿಗೆ ಹೇಳಿ ಉದ್ಯೋಗ ಮಾಡೋದನ್ನು ಕಲಿ ಅಂತ. ಈಗ ನನ್ನ ಬಾಯಲ್ಲೇ ನನ್ನನ್ನು ಏನಂತ ಹೊಗಳಿಕೊಳ್ಳಲಿ; ಮೂವತ್ತು ವರ್ಷ ಸರ್ವೀಸ್ ಮಾಡಿದ್ದೀನಿ. ಪೂರ್ತಿ ಮೂವತ್ತು ವರ್ಷ. ಮುನಿಸಿಪಲ್ ಆಕ್ಟ್ರಾಯ್ ಆಫೀಸಿನಲ್ಲಿ ಗುಮಾಸ್ತನ ಕೆಲಸದಿಂದ ಮೇಲು ಮೇಲಕ್ಕೇರಿ ಪ್ರಿನ್ಸಿಪಾಲ್ ಆಗಿ ಬಿಟ್ಟೆ. ಸಂಘರ್ಷ ಮಾಡಿಕೊಂಡು ಬಂದಿದ್ದರೆ ಏನು ಆಗುತ್ತಾ ಇದ್ದೆ? ಸಂಘರ್ಷ ಬೇಡ. ತಗ್ಗಿ ನಡೆ. ವಿಚಾರ ಮಾಡಬೇಡ– ಒಪ್ಪಿಕೋ, ಅರ್ಥವಾಯಿತೆ? ಹಾಗಿದ್ದರೆ ತಿಳಿಯ ಹೇಳಿ. ನಾನು ಬರ್ತೀನಿ. [ಪ್ರಿನ್ಸಿಪಾಲ್ ಹೋಗುತ್ತಾನೆ. ಲೀಲಾ ಜಡವೆಂಬಂತೆ ನಿಂತಿರುತ್ತಾಳೆ. ಅನಂತರ ಕಾಪಿಗಳನ್ನು ಜೋಡಿಸಿಕೊಳ್ಳಲು ಪ್ರಾರಂಭಿಸುತ್ತಾಳೆ ಅರವಿಂದನ ಆಗಮನ]

ಅರವಿಂದ: ಈ ಪ್ರಿನ್ಸಿಪಾಲ್ ಮಗ ಯಾಕೆ ಬಂದಿದ್ದ?

ಲೀಲಾ: (ಕಟುವಾಗಿ) ಹರಟೆ ಹೊಡೆಯೋಕೆ.

ಅರವಿಂದ: ಯಾಕೆ ನೇರವಾಗಿ ಬಾಯಿಂದ ಮಾತು ಬರೋದಿಲ್ಲವೋ?

ಲೀಲಾ: ಕೇಳೋರು ಯಾರು?

ಅರವಿಂದ: ಏನು ಹೇಳ್ತಾ ಇದ್ದ?

ಲೀಲಾ: ತಿಳಿಯ ಹೇಳ್ತಿದ್ದ.

ಅರವಿಂದ: ನಿನಗೆ?

ಲೀಲಾ: ಇಲ್ಲ ನಿಮಗಾ?

ಅರವಿಂದ: ಏನು ಸಲಹೆ ಕೊಡುತ್ತಿದ್ದ?

ಲೀಲಾ: ವಿವೇಕದ ಮಾತು ಹೇಳ್ತಾ ಇದ್ದ. (ಬಿಡುವು) ನಿಮಗಾದರೋ ವಿವೇಕ ಅಂದರೆ ಆಗೋಲ್ಲ.

ಅರವಿಂದ: ಅದೇನು ಹೇಳಲ್ಲ.

ಲೀಲಾ: ರಿಪೋರ್ಟ್ ವಾಪಸ್ ತಗೊಳ್ಳೋ ವಿಷಯ ಹೇಳ್ತಾ ಇದ್ದ (ಬಿಡುವು). ಹೋಗಿ ರಿಪೋರ್ಟ್ ವಾಪಸ್ ತೆಗೆದುಕೊಳ್ಳಿ.

ಅರವಿಂದ: ಲೀಲಾ!

ಲೀಲಾ: ಹೌದು, ವಾಪಸ್ ತಗೊಂಡ್ಬಿಡಿ. ಅದರಲ್ಲೇ ಎಲ್ಲರ ಹಿತ ಇದೆ.

ಅರವಿಂದ: ನೀನೂ, ನಾನು ಅಪ್ರಾಮಾಣಿಕನಾಗಿರಬೇಕು ಅಂತ ಬಯಸ್ತೀಯಾ?

ಲೀಲಾ: ವಿವೇಕದಿಂದ ನಡೆದುಕೊಳ್ಳಿ, ಮದುವೆ ಆಗಿ ಇಪ್ಪತ್ತು ವರ್ಷ ಆಯಿತು. ಇದಕ್ಕೆ ಮುಂಚೆ ಯಾವೊತ್ತಾದರೂ ನಿಮ್ಮ ಮನಸ್ಸಿಗೆ ವಿರುದ್ಧವಾಗುವಂಥ ಮಾತನ್ನು ಆಡಿದ್ದೇನೆಯೆ? ಆದರೆ ಈ ಹೊತ್ತು ನಾನು ಹೇಳುವುದನ್ನು ಒಪ್ಪಿಕೊಳ್ಳಿ.

ಅರವಿಂದ: ಲೀಲಾ ನನ್ನ ಮೇಲೆ ಒತ್ತಡ ಹಾಕಬೇಡ.

ಲೀಲಾ: (ಆವೇಶದಿಂದ) ಈ ಮನೆಯಲ್ಲಿ ಏಕಾಂಗಿಯಾಗಿ ಬದುಕಿದ್ದವರು ಯಾರು ಅಂತ ಎಂದಾದರೂ ಯೋಚನೆ ಮಾಡಿದ್ದೀರಾ? ನೀವು, ನೀವು ಮಾತ್ರ! ನಮ್ಗಳಿಗೆ ಯಾವೊತ್ತೂ ನಮ್ಮ ಅಸ್ತಿತ್ವದ ಅರಿವೇ ಇರಲಿಲ್ಲ (ಬಿಡುವು) ನಾವುಗಳು ಹೇಗೆ ಬದುಕಬೇಕು ಅಂತ ತೀರ್ಮಾನಮಾಡುತಿದ್ದೋರು ನೀವು. ಅದೇ ಥರ ನಾವು

ಬದುಕಿಕೊಂಡು ಬಂದೆವು. ಆದರೆ ಇನ್ನು ಮುಂದೆ ಇದು ನಡೆಯೋಲ್ಲ [ಈ ಮಧ್ಯೆ ಬಾಗಿಲ ಹತ್ತಿರ ಚಂದೂ ಕಾಣಿಸಿಕೊಳ್ಳುತ್ತಾನೆ ಅವನ ವಯಸ್ಸು ಸುಮಾರ ಇಪ್ಪತ್ತು. ಕಾಲೇಜು ವಿದ್ಯಾರ್ಥಿಗಳು ಧರಿಸುವಂಥ ವೇಷಭೂಷಣ. ಲೀಲಾ ಒಂದು ಕ್ಷಣ ನಿಲ್ಲುತ್ತಾಳೆ. ಆಮೇಲೆ ಎದ್ದು ಒಳಗೆ ಹೋಗುತ್ತಾಳೆ]

ಅರವಿಂದ: (ಆಶ್ಚರ್ಯದಿಂದ) ನೀನು?

ಚಂದೂ: ಏನು ಮಾಡಲಿ ಸರ್! ಬರಲೇ ಬೇಕಾಯಿತು.

ಅರವಿಂದ: ಈಗ ಬೇರೆ ಏನು ಪರಾಕ್ರಮ ತೋರಿಸಿದ್ದೀ?

ಚಂದೂ: ಪರಾಕ್ರಮ ನಾನೇನು ತೋರಿಸಲಿ. (ಬಿಡುವು) ನನ್ನ ಪ್ರೊಫೆಸರ್‌ಗಳು ಪರಾಕ್ರಮ ತೋರಿಸ್ತಿದ್ದಾರೆ.

ಅರವಿಂದ: ಅಸಭ್ಯತನ ತೋರಿಸುವುದಕ್ಕೆ ನಿನಗೆ ನಾಚಿಕೆಯಾಗೋಲ್ವೆ?

ಚಂದೂ: ಮೊದಲು ಆಗ್ತಾ ಇತ್ತು. ಈಗ ಆ ಪ್ರಶ್ನೆಯಾದರೂ ಎಲ್ಲಿ ಏಳುತ್ತೆ? (ಬಿಡುವು) ಈಗ ಯಾರ ಮೇಲೂ ನಂಬಿಕೇನೇ ಉಳಿದಿಲ್ಲ.

ಅರವಿಂದ: ಸುಳ್ಳು ಹೇಳ್ತಿದ್ದಿ. ಕಾಪಿ ಮಾಡುವುದಕ್ಕೆ ನಿನಗೆ ನಾಚಿಕೆಯಾಗಲಿಲ್ಲವೆ? (ಬಿಡುವು) ನಿನ್ನ ಜಾಗದಲ್ಲಿ ಬೇರೆ ಯಾರಾದರೂ ಇದ್ದಿದ್ದರೆ ಮುಳುಗಿ ಸಾಯುತ್ತಿದ್ದರು.

ಚಂದೂ: ನೀವೂ ಇದೇ ಮಾತು ಹೇಳ್ತೀರಿ ಅಂತ ನನಗೆ ಗೊತ್ತಿತ್ತು.

ಅರವಿಂದ: ಬೇರೆ ಏನಾದರೂ ಮಾತು ಹೇಳಕ್ಕಾದರೂ ಆಗುತ್ತಾ?

ಚಂದೂ: ಕೊನೇ ಪಕ್ಷ ನೀವಾದರೂ ನಿಜ ಏನು ಅಂತ ಪತ್ತೆ ಹಚ್ಚುವ ಪ್ರಯತ್ನ ಮಾಡ್ತೀರಿ ಅಂತ ನಾನು ಅಂದುಕೊಳ್ತಿದ್ದೆ.

ಅರವಿಂದ: ನಾನೇನೂ ಕೇಳೋದಕ್ಕೆ ಇಷ್ಟಪಡಲ್ಲ; ಐ ಡಿಸ್ ಲೈಕ್ ಯೂ, ಗೆಟ್ ಔಟ್.

ಚಂದೂ: ಏನು ನೀವು ನನ್ನ ಮಾತು ಕೇಳಿಸಿಕೊಳ್ಳೋಲ್ವೆ?

ಅರವಿಂದ: ನಾನು ಯಾಕೆ ಕೇಳಿಸಿಕೊಳ್ಳಲಿ?

ಚಂದೂ: ನೀವು ಕೇಳಿಸಿಕೊಳ್ಳದಿದ್ದರೆ ಬೇರೆ ಯಾರು ಕೇಳಿಸಿಕೊಳ್ತಾರೆ? (ಬಿಡುವು) ಕೇಳಿಸಿಕೊಂಡ ಮೇಲೆ ನಾನು ಸುಳ್ಳು ಹೇಳ್ತಾ ಇದ್ದೀನಿ ಅಂತ ನಿಮಗೆ ಅನ್ನಿಸಿದರೆ, ಚಪ್ಪಲಿ ಕಳಚಿಕೊಂಡು ಹೊಡೀರಿ ಹತ್ತು ಏಟು.

ಅರವಿಂದ: (ಒಂದು ಕ್ಷಣ ಯೋಚಿಸಿದ ಮೇಲೆ) ಕೂತುಕೋ, ಕೇಳಿಸಿಕೊಳ್ತಿದ್ದೀನಿ.

ಚಂದೂ: ನಾನು ಕಾಪಿ ಮಾಡಿಲ್ಲ ಸರ್!

ಅರವಿಂದ: ಇಲ್ಲ ನೀನು ಕಾಪಿ ಮಾಡಿದ್ದಿ.

ಚಂದೂ: ಇಲ್ಲ ಸರ್, ನಾನು ಕಾಪಿ ಮಾಡಿಲ್ಲ.

ಅರವಿಂದ: ಯೂ ಆರ್ ಎ ಲೈಯರ್, ಪ್ರೊ॥ ಮಿಶ್ರಾ ಅವರು ಸುಳ್ಳು ಹೇಳ್ತಾರೇನು?

ಚಂದೂ: ನಾನು ಕಾಪಿ ಮಾಡಿಲ್ಲ ಸರ್

ಅರವಿಂದ: ಪೇಪರ್ ಯಾರ ಕೈಯಲ್ಲಿತ್ತು?

ಚಂದೂ: ನನ್ನ ಕೈಯಲ್ಲಿ.

ಅರವಿಂದ: ಇಷ್ಟರ ಮೇಲೂ...

ಚಂದೂ: (ಮಧ್ಯದಲ್ಲೇ) ಆದರೆ ನಾನು ಆ ಪೇಪರ್‌ನ ಉಪಯೋಗ ಮಾಡಿಕೊಳ್ಳಲಿಲ್ಲ

ಅರವಿಂದ: ದಿಸ್ ಈಸ್, ನೋ ಆರ್ಗ್ಯುಮೆಂಟ್.

ಚಂದೂ: ನನ್ನ ಎದುರುಗಡೆ ಯಾರು ಕೂತಿದ್ದರು ಅಂತ ನಿಮಗೆ ಗೊತ್ತಿದೆಯ? ರಾಜ್ ಕುಮಾರ್.

ಅರವಿಂದ: ಇದರಿಂದ ಏನಾಗುತ್ತೆ?

ಚಂದೂ: ಅವನು ಚೂರಿ ಇಟ್ಟುಕೊಂಡು ಕಾಪಿ ಹೊಡೀತಿದ್ದ. ಪ್ರೊ ಮಿಶ್ರಾ ಅವರು ನಮ್ಮ ರೂಂನಲ್ಲಿ ಪರೀಕ್ಷೆ ಡ್ಯೂಟಿ ಮಾಡ್ತಿದ್ದರು (ಬಿಡುವು). ಅವರು ನೋಡಿಯೂ ನೋಡದ ಹಾಗಿದ್ದರು. ರಾಜಕುಮಾರ್ ಕುಳಿತಿದ್ದ ಸೀಟ್‌ನಿಂದ ದೂರದಲ್ಲಿ ರೌಂಡ್ ಹಾಕುತ್ತಾ ಇದ್ದರು.

ಅರವಿಂದ: ಆದರೆ ಇದರಿಂದ ನೀನು ಕಾಪಿ ಹೊಡೀತಿರಲಿಲ್ಲ ಅಂತ ಎಲ್ಲಿ ಪ್ರೂವ್ ಆಗುತ್ತೆ?

ಚಂದೂ: ಮೊದಲು ನಾನು ಹೇಳುವ ಮಾತನ್ನು ಪೂರ್ತಿ ಕೇಳಿಸಿಕೊಳ್ಳಿ ಸರ್. ರಾಜಕುಮಾರ್ ಕಡೆಯಿಂದ ಒಂದು ಪೇಪರ್ ಹಾರಿ ನನ್ನ ಹತ್ತಿರಕ್ಕೆ ಬಂತು. ನಾನು ಕಾಗದ ಎತ್ತಿಕೊಂಡೆ. ಪ್ರೊ ಮಿಶ್ರಾ ಅವರಿಗೆ ಕೊಟ್ಟು ಬಿಡೋಣ ಅಂತ. ಆದರೆ ಅವರು ವೇಗವಾಗಿ ಬಂದು ನನ್ನ ಕೈ ಹಿಡಿದುಕೊಂಡು ಬಿಟ್ಟರು.

ಅರವಿಂದ: ನೀನು ಯಾಕೆ ಪ್ರತಿಭಟಿಸಲಿಲ್ಲ?

ಚಂದೂ: ನಾನು ತುಂಬ ಕಿರುಚಾಡಿದೆ. ಕೂಗಾಡಿದೆ. ಆದರೆ ಪ್ರೊ ಮಿಶ್ರಾ ಅವರು ಒಪ್ಪಲಿಲ್ಲ.

ಅರವಿಂದ: ಖಂಡಿತವಾಗಿಯೂ ನೀನೇನೋ ಕೆಟ್ಟದಾಗಿ ನಡೆದುಕೊಂಡಿರಬೇಕು.

ಚಂದೂ: ನಾನು ಎಂದಾದರೂ ಹಾಗೆ ನಡೆದು ಕೊಂಡಿದ್ದೇನೆಯೆ? ಅವರು ತಳ್ಳಿಕೊಂಡು ನನ್ನನ್ನು ಪ್ರಿನ್ಸಿಪಾಲ್ ರೂಮಿಗೆ ಕರೆದುಕೊಂಡು ಹೋದರು.

ಅರವಿಂದ: ಪ್ರಿನ್ಸಿಪಾಲರಿಗೆ ನೀನು ಹೇಳಬೇಕಾದ್ದು ಹೇಳಿದೆಯಾ?

ಚಂದೂ: ಅಲ್ಲಿ ಪ್ರಿನ್ಸಿಪಾಲರ ಜೊತೇಲಿ ಕಾಲೇಜ್ ಪ್ರೆಸಿಡೆಂಟೂ ಕೂತಿದ್ದ. ಅವನು ಬೇಟೆ ತನ್ನ ಕೈಗೆ ಸಿಕ್ಕೇ ಬಿಟ್ಟಿತೇನೋ ಅನ್ನುವ ಹಾಗೆ ನನ್ನ ಕಡೆ ನೋಡಿದ. (ಬಿಡುವು) ಅವನ ಮುಗುಳ್ನಗೆ ಭಯಂಕರವಾಗಿತ್ತು ಸರ್.

ಅರವಿಂದ: ಆಮೇಲೆ ಏನಾಯ್ತು? ಚಂದೂ ಇದರ ನಂತರ ಸ್ವಲ್ಪ ಹೊತ್ತು ನನಗೆ ಕೊಠಡಿಯಿಂದ ಆಚೆ ಹೋಗಲು ಹೇಳಿದರು. ಮತ್ತೆ ಕರೆಸಿಕೊಂಡು ನನ್ನ ರಿಪೋರ್ಟನ್ನು ಯೂನಿವರ್ಸಿಟಿಗೆ ಕಳಿಸಲಾಯಿತು.

ಅರವಿಂದ: (ಯೋಚಿಸುತ್ತ) ಹಾಗಾದರೆ ನೀನು ಪೇಪರ್ ತೆಗೆದುಕೊಂಡು ಹೋಗಿರಲಿಲ್ಲ?

ಚಂದೂ: ನೋ, ಸರ್, ತಾವೇ ಹೇಳಿ, ನಾನು ಎಂದಾದರೂ ಕಾಪಿ ಮಾಡಿದ್ದೆನೆ?

ಅರವಿಂದ: ಹಾಗಿದ್ದ, ಮೇಲೆ ಪರೀಕ್ಷೆ ಮಾಡದದೆಯೆ ಶಿಕ್ಷೆ ಯಾಕೆ ಕೊಟ್ಟರು?

ಚಂದೂ: ಗೊತ್ತಿದ್ದೂ ಗೊತ್ತಿದ್ದೂ.

ಅರವಿಂದ: ಬೇಕೆಂದೇ ಶಿಕ್ಷೆ ಕೊಡಲು ಜನ ನಿನ್ನ ಶತ್ರುಗಳೇನು?

ಚಂದೂ: ನಮ್ಮ ತಂದೆಗೂ ಪ್ರೆಸಿಡೆಂಟರಿಗೂ ರಾಜಕೀಯ ದ್ವೇಷವಿದೆ. ಮುಂದಿನ ಚುನಾವಣೆಯಲ್ಲಿ ಅವರು ಪ್ರೆಸಿಡೆಂಟರ ವಿರುದ್ಧ ಸೆಣಸುತ್ತಿದ್ದಾರೆ. ನಾನು ಆ ವಿರೋಧದ ಬಲಿಪಶುವಾಗಿದ್ದೇನೆ ಸರ್.

ಅರವಿಂದ: ನನ್ನಿಂದ ಏನನ್ನು ನಿರೀಕ್ಷಿಸುತ್ತಿದ್ದೀ?

ಚಂದೂ: ನ್ಯಾಯವನ್ನು.

ಅರವಿಂದ: ಅಂದರೆ?

ಚಂದೂ: ರಾಜಕುಮಾರ್‌ನನ್ನು ಈ ಹೊತ್ತು ತಾವು ಹಿಡಿದಿದ್ದೀರಿ ಅಲ್ಲವೆ?

ಅರವಿಂದ: ಅವನ ಜೊತೆಯಲ್ಲಿ ನಿನ್ನದೇನು ವ್ಯವಹಾರ?

ಚಂದೂ: ರಾಜ್‌ಕುಮಾರ್‌ನ ರಿಪೋರ್ಟನ್ನು ಯೂನಿವರ್ಸಿಟಿಗೆ ಕಳಿಸಿಕೊಡಲಾಗುತ್ತದೆಯೋ ಇಲ್ಲವೋ ಅಂತ ಕೇಳೋದಕ್ಕೆ ಬಂದಿದ್ದೇನೆ.

ಅರವಿಂದ: ನಾನು ನನ್ನ ಕೆಲಸ ಮಾಡಿದ್ದೀನಿ. ಮುಂದಿನದು ಪ್ರಿನ್ಸಿಪಾಲರ ಜವಾಬ್ದಾರಿ.

ಚಂದೂ: ಇಲ್ಲ ಸರ್! ತಮ್ಮದೂ ಅಷ್ಟೇ ಜವಾಬ್ದಾರಿ ಇದೆ.

ಅರವಿಂದ: ಆದರೆ ಹೇಗೆ?

ಚಂದೂ: ರಿಪೋರ್ಟ್‌ನ್ನು ಹತ್ತಿಕ್ಕಲಾಗುತ್ತಿದೆ. ತಾವು ರಿಪೋರ್ಟನ್ನು ಯೂನಿವರ್ಸಿಟಿಗೆ ಕಳಿಸಿಕೊಡಬೇಕಾಗುತ್ತೆ.

ಅರವಿಂದ: ಅವರು ಕಳಿಸಲಿಲ್ಲ ಅಂದರೆ ನಾನೇನು ಮಾಡಲಿ?

ಚಂದೂ: ತಾವು ನಮಗೆ ಬೆಂಬಲ ಕೊಡ ಬೇಕಾಗುತ್ತೆ.

ಅರವಿಂದ: ಅಂದರೆ?

ಚಂದೂ: ಈ ಸಲ ನಾವೂ ಸಾಯಲು, ಸಾಯಿಸಲು ಸಿದ್ಧವಾಗಿದ್ದೇವೆ. ಕಾಲೇಜನ್ನು ನಾಶಮಾಡಿಬಿಡ್ತೀವಿ. ನಾವು ನ್ಯಾಯದ ಹೋರಾಟ ನಡೆಸುತ್ತೇವೆ. ರಾಜ್‌ಕುಮಾರ್ ಈ ಬಾರಿ ಉಳಿಯೋದಕ್ಕೆ ಸಾಧ್ಯವಿಲ್ಲ.

ಅರವಿಂದ: ಅಂದರೆ ನೀವು ಚಳುವಳಿ ಮಾಡ್ತೀರಿ?

ಚಂದೂ: ಬೇರೆ ಏನೂ ಉಪಾಯವಿಲ್ಲ.

ಅರವಿಂದ: ಆದರೆ ರಿಪೋರ್ಟನ್ನು ಹತ್ತಿಕ್ಕಲಾಗುವುದು ಎಂದು ನೀವುಗಳು ಹೇಗೆ ತೀರ್ಮಾನಕ್ಕೆ ಬಂದಿರಿ?

ಚಂದೂ: ಏಕೆ ಅಂದರೆ ರಾಜ್‌ಕುಮಾರ್ ಪ್ರೆಸಿಡೆಂಟರ ಮಗ.

ಅರವಿಂದ: ಇದರಿಂದ ಏನಂತೆ?

ಚಂದೂ: ಅವನು ಪ್ರೊಫೆಸರ್‌ಗಳನ್ನು ತಮ್ಮ ತಂದೆಯ ನೌಕರರೆಂದು ಮತ್ತು ಕಾಲೇಜನ್ನು ತಮ್ಮ ಸ್ವಂತ ಆಸ್ತಿ ಎಂದು ತಿಳಿದಿದ್ದಾನೆ.

ಅರವಿಂದ: ಇದರಲ್ಲಿ ನಾನು ಏನು ತಾನೆ ಮಾಡೋದಕ್ಕೆ ಸಾಧ್ಯ?

ಚಂದೂ: ತಾವು ನಮಗೆ ಬೆಂಬಲ ನೀಡಬೇಕು. ನಮ್ಮ ಪರವಾಗಿ ತಾವು ಹೋರಾಡಬೇಕು.

ಅರವಿಂದ: ನನ್ನನ್ನು ಯಾಕೆ ಮಧ್ಯದಲ್ಲಿ......

ಚಂದೂ: ಯಾಕೆ ಅಂದರೆ, ತಾವು ನಮ್ಮ ಜೊತೆ ಸೇರಿಕೊಂಡರೆ ಮಾತ್ರ ನಾವು ಗೆಲ್ಲ ಬಲ್ಲೆವು. ಕಾಪಿ ಶಾಶ್ವತವಾಗಿ ನಿಂತು ಹೋಗುತ್ತೆ. ಗೂಂಡಾಗಿರಿ ಸಮಾಧಿಯಾಗುತ್ತೆ. ಹಾಗಾದರೆ ತಾವು ನಮ್ಮ ಜೊತೆ ಇರುತ್ತೀರಲ್ಲವೆ? ರಾಜ್‌ಕುಮಾರ್ ಚೂರಿಯ ಬಲದಿಂದ ಕಾಪಿಮಾಡಿದ್ದಾನೆ ಅಂತ ಎಲ್ಲರ ಎದುರಿಗೆ ಹೇಳುತ್ತೀರಲ್ಲವೆ?

ಅರವಿಂದ: ಆದರೆ ನಾನು ನ್ಯಾಯದ ಪರವಾಗಿ ನಿಲ್ಲುವುದಿಲ್ಲ ಅಂತ ನಿಮಗೆ ಅನುಮಾನಯಾತಕ್ಕೆ?

ಚಂದ್ರೂ: ಯಾತಕ್ಕೆ ಅಂದರೆ, ಜನರು ಸಾಮಾನ್ಯವಾಗಿ ಸರಿಯಾದ ಸಮಯದಲ್ಲಿ ಬದಲಾಗಿ ಬಿಡುತ್ತಾರೆ.

ಅರವಿಂದ: ಏನು ನನ್ನನ್ನೂ ಬೇರೆಯವರ ಹಾಗೆ....

ಚಂದ್ರೂ: ನೋ ಸರ್! ಹಾಗಲ್ಲ ಸರ್. ಆದರೆ ತಮ್ಮ ಮೇಲೆ ಒತ್ತಡ ತರಲಾಗುತ್ತದೆ ತಮಗೆ ಬೆದರಿಕೆ ಹಾಕಲಾಗುತ್ತದೆ. ಕೆಲಸದಿಂದ ತೆಗೆದುಹಾಕುವ ಬೆದರಿಕೆ ಹಾಕಲಾಗುತ್ತದೆ. ಜೀವ ತೆಗೆಯುವ ಬೆದರಿಕೆ ಹಾಕಿದರೂ ಆಶ್ಚರ್ಯವೇನೂ ಇಲ್ಲ.

ಅರವಿಂದ: ನಾನು ಬೆದರಿಕೆಗಳಿಗೆ ಹೆದರಲ್ಲ.

ಚಂದ್ರೂ: ಇಡೀ ಸ್ಟಾಫ್‌ನಲ್ಲಿ ಕೇವಲ ತಮ್ಮ ಮೇಲೆ ನಮಗೆ ಭರವಸೆ ಇದೆ ಸರ್. ನಾಳೆಯಿಂದ ನಾವು ಧರಣಿ ಮಾಡ್ತೀವಿ, ಹರತಾಳ ಮಾಡ್ತೀವಿ. ರಿಪೋರ್ಟ್ ಮಾಡಲಿಲ್ಲ ಅಂದರೆ ಪರೀಕ್ಷೆಗೆ ಬಹಿಷ್ಕಾರ ಹಾಕುತ್ತೇವೆ. ಆದರೆ ತಾವು....

ಅರವಿಂದ: ಯಾಕೆ ಹೇಳ್ತಾ ಇಲ್ಲ? [ಲೀಲಾ ಬರುತ್ತಾಳೆ]

ಚಂದ್ರೂ: ನೀವು ಒಂದು ವೇಳೆ ಬದಲಾದರೆ, ನೆನಪಿಡಿ, ನಾವು ನಿಮ್ಮನ್ನು ಬಿಡುವುದಿಲ್ಲ

ಅರವಿಂದ: ಅಂದರೆ ನನಗೆ ಧಮಕಿ ಹಾಕೋದಕ್ಕೆ ಬಂದಿದ್ದೀಯಾ?

ಚಂದ್ರೂ: ನೀವು ಏನು ಬೇಕಾದರೂ ತಿಳಿದುಕೊಳ್ಳಿ. ಈ ಹೋರಾಟ ನಮಗೆ ಜೀವನ್ಮರಣದ ಪ್ರಶ್ನೆ. ಯಾರು ನಮ್ಮ ಜೊತೆ ಇಲ್ಲವೋ ಅವರನ್ನು ನಮ್ಮ ವಿರೋಧಿಗಳು ಅಂತ ತಿಳಿಯುತ್ತೇವೆ. ನಾನು ತಮ್ಮಲ್ಲಿ, ವಿನಂತಿಮಾಡಲು ಬಂದಿದ್ದೇನೆ, ಜೊತೆಗೆ ಆಗ್ರಹಮಾಡಲೂ.

ಅರವಿಂದಿ: ಈ ರೀತಿಯ ಭಾಷೆ ಬಳಸುತ್ತ ಇರುವುದಕ್ಕೆ ನಿನಗೆ ನಾಚಿಕೆಯಾಗೋಲ್ಲವೆ?

ಚಂದ್ರೂ: ಈ ಸಮಯದಲ್ಲಿ ನನ್ನ ನೂರಾರು ಗೆಳೆಯರ ಪರವಾಗಿ ಮಾತನಾಡುತ್ತಿದ್ದೇನೆ. ಇಲ್ಲಿಂದ ವಾಪಸ್ ಹೋದ ಮೇಲೆ ಅವರಿಗೆಲ್ಲ ಉತ್ತರ ಕೊಡಬೇಕಾಗಿದೆ. ಒಂದು ಸ್ವಲ್ಪ ಸ್ಪಷ್ಟವಾಗಿ ಹೇಳ್ತಾ ಇರುವುದಕ್ಕೆ

ಕ್ಷಮೆ ಕೇಳ್ತಿದ್ದೀನಿ. (ಬಿಡುವು) ಒಂದು ವೇಳೆ ಮಾತು ಬದಲಾಯಿಸಿದ್ದೇ ಆದರೆ, ನಾವು ತಮ್ಮನ್ನು ಎಲ್ಲರಿಗಿಂತ ದೊಡ್ಡ ಅಪರಾಧಿ ಎಂದು ಪರಿಗಣಿಸುತ್ತೇವೆ. ಆ ಮೇಲೆ ಏನೇ ಆದರೂ, ಅದರ ಜವಾಬ್ದಾರಿ ತಮ್ಮ ಮೇಲಿರುತ್ತೆ. [ಚಂದೂ ವೇಗವಾಗಿ ಹೊರಗೆ ಹೋಗುತ್ತಾನೆ. ಅರವಿಂದನ ಮುಖದ ಮೇಲೆ ಚಿಂತೆ]

ಲೀಲಾ : ನೋಡಿದಿರಲ್ಲ ನಿಮ್ಮ ಪ್ರೀತಿಯ ವಿದ್ಯಾರ್ಥಿಯನ್ನು! ಎಷ್ಟೊಂದು ಅಸಭ್ಯವಾಗಿ ಮಾತಾಡ್ತಿದ್ದ. ಇವರುಗಳಿಗೋಸ್ಕರ ಕಷ್ಟಗಳನ್ನು ಮೈಮೇಲೆ ಎಳೆದುಕೊಳ್ತೀರಾ?

ಅರವಿಂದ: ಅವರದ್ದು ತಪ್ಪಲ್ಲ.

ಲೀಲಾ: ನಿಮಗೆ ನೇರವಾಗಿ ಧಮಕಿ ಹಾಕುತ್ತಿರಲಿಲ್ಲವೇನು?

ಅರವಿಂದ: ಅಸಭ್ಯತೆ ಎಂದರೆ ಈಗ ಅದು ಇನ್ನೊಂದು ರೀತಿಯ ಬೆದರಿಕೆಯ ಭಾಷೆ ಎಂದೇ ತಿಳಿಯಲಾಗುತ್ತದೆ.

ಲೀಲಾ: ಹಾಗಾದರೆ ಈ ಹುಡುಗರ ಪರವಾಗಿ ನೀವು ನೇತೃತ್ವವಹಿಸಿ ಕೊಳ್ತೀರಾ?

ಅರವಿಂದ: ಅವರದ್ದು ನ್ಯಾಯದ ಪಕ್ಷ.

ಲೀಲಾ: ಎಲ್ಲಾದರೂ ಒಂದು ಹೊಡೆದಾಟ ಆಗಿ ಚೂರಿ-ಗೀರಿ ಹಾಕಿತು ಅಂದರೆ ಏನಾಗುತ್ತೆ? ಎಲ್ಲಾ ತಪ್ಪನ್ನೂ ನಿಮ್ಮ ತಲೆ ಮೇಲೆ ಹೇರ್ತಾರೆ.

ಅರವಿಂದ: ಹಾಗಾದರೆ ನಾನು ಸುಳ್ಳು ಹೇಳಲೆ?

ಲೀಲಾ : (ಆವೇಶದಿಂದ) ಆದರೆ ನಾನು ಹೇಳ್ತೀನಿ, ನ್ಯಾಯ ನೀಡುವುದಕ್ಕೆ ನಿಮ್ಮನ್ನು ಜಡ್ಜ್ ಮಾಡಿದ್ದು ಯಾರು? ನಾನು ಹೇಳಿದ್ದು ಯಾವತ್ತಾದರೂ ಒಪ್ಪಿದ್ದೀರಾ? ಎಷ್ಟು ಸಾರಿ ಹೇಳಿದೆ ಇವರುಗಳ ಜಂಜಾಟದಲ್ಲಿ ಸಿಕ್ಕಿಕೊಳ್ಳಬೇಡಿ ಅಂತ? ಆದರೆ....... [ಪ್ರೆಸಿಡೆಂಟರ ಪ್ರವೇಶ. ವಯಸ್ಸು ಐವತ್ತರ ಹತ್ತಿರ. ಬಹಳ ದರ್ಪದ ವ್ಯಕ್ತಿತ್ವ, ಬಾಯಲ್ಲಿ ಸಿಗಾರ್ ಇದೆ. ದನಿಯಲ್ಲಿ ಉಕ್ಕಿನ ಕಾಠಿಣ್ಯ. ಲೀಲಾ ಒಳಗೆ ಹೋಗುತ್ತಾಳೆ]

ಅರವಿಂದ: ತಾವು? ಅದೂ ಈ ಹೊತ್ತಿನಲ್ಲಿ!

ಪ್ರೆಸಿಡೆಂಟ್: ನೀವು ಬರದೆ ಇದ್ದದ್ದು, ನೋಡಿ ನಾನೇ ಹೋಗಿ ಬಿಡೋಣ ಅಂತ ಯೋಚಿಸಿದೆ. (ಬಿಡುವು) ಪೀಠಿಕೆ ಹಾಕಬೇಕೋ ಅಥವಾ ನೇರವಾಗಿ ಕೇಳಲೋ?

ಅರವಿಂದ: ನೇರವಾಗಿಯೇ ಕೇಳಿ.

ಪ್ರೆಸಿಡೆಂಟ್: ತಾವು ಏನು ತೀರ್ಮಾನಮಾಡಿದ್ದೀರಿ?

ಅರವಿಂದ: ನಾನು ರಿಪೋರ್ಟ್ ವಾಪಸ್ ತೆಗೆದುಕೊಳ್ಳೋಲ್ಲ.

ಪ್ರೆಸಿಡೆಂಟ್: ಷಹಬ್ಬಾಶ್! (ಬಿಡುವು) ತಮ್ಮ ವಿಚಾರ ಏನಿದೆ; ತಪ್ಪು ಮಾಡಿದವರಿಗೆ ಶಿಕ್ಷೆಯಾಗಬೇಕೋ ಬೇಡವೋ?

ಅರವಿಂದ: ಈ ವಿಷಯದ ಬಗ್ಗೆಯೇ ವಿರೋಧವಿದೆ ಪ್ರೆಸಿಡೆಂಟ್ ಸಾಹೇಬರೆ.

ಪ್ರೆಸಿಡೆಂಟ್: ನನಗೂ ಇದೇ ಇಷ್ಟ.

ಅರವಿಂದ: ಆದರೆ ಪ್ರಿನ್ಸಿಪಾಲ್ ಸಾಹೇಬರು ಏನು ಹೇಳ್ತಾ ಇದ್ದರು ಅಂದ್ರೆ.....

ಪ್ರೆಸಿಡೆಂಟ್: ಅಯ್ಯೋ ಅವನಿಗೆ ಹೊಡೀರಿ ಗೋಲಿ. ಈಗ ಏನು ಹೇಳಲಿ. ಅತ್ಯಂತ ಮೂರ್ಖರ ಪೈಕಿಯ ಮನುಷ್ಯ. ಪರ್ಸನಾಲಿಟೀನು ಇಲ್ಲ. ಗಾಂಭೀರ್ಯವೂ ಇಲ್ಲ. ಯಾವಾಗಲೂ ಹೇ, ಹೇ ಅಂತ ಇರ್ತಾನೆ. (ಬಿಡುವು) ಅವನಿಗೆ ಅರುವತ್ತಾಯಿತು. ರಿಟೈರ್ ಮಾಡಿಬಿಡೋಣ ಅಂತ ಅಂದುಕೊಳ್ತೀನಿ. (ಅರವಿಂದನ ಮುಖದ ಮೇಲೆ ಕಣ್ಣು ನಾಟಿಸಿ) ಆದರೆ ಸರಿಯಾದ ಮನುಷ್ಯ ಸಿಗಬೇಕಲ್ಲಿ?

ಅರವಿಂದ: ಆದರೆ ಅವರು ಬೇರೆನೇ ಹೇಳುತ್ತಿದ್ದರಲ್ಲ.

ಪ್ರೆಸಿಡೆಂಟ್: ಏನು ಹೇಳ್ತಿದ್ದ?

ಅರವಿಂದ: ಅದೇ ತಾವು ನಮ್ಮ ಮಾಲೀಕರು, ಅನ್ನದಾತರು ಅಂತ.

ಪ್ರೆಸಿಡೆಂಟ್: ಹೇಳಿದೆನಲ್ಲ; ಥೇಟ್ ಕತ್ತೆಯಂಥ ಮನುಷ್ಯ. ಯಾರು, ಯಾರ ಮಾಲೀಕ ಮತ್ತು ಯಾರು, ಯಾರ ಅನ್ನದಾತ!

ಅರವಿಂದ: ಹಾಗಾದರೆ, ತಮಗೇನು ಬೇಕು?

ಪ್ರೆಸಿಡೆಂಟ್: ಅದೇ ನಿಜವಾದ ಅಪರಾಧಿ ಪತ್ತೆಯಾಗಬೇಕು ಹಾಗೂ ಅವನಿಗೆ ಕಠಿಣ ಶಿಕ್ಷೆ ಆಗಬೇಕು.

ಅರವಿಂದ: ಹಾಗಾದರೆ ರಾಜ್‌ಕುಮಾರ್ ನಿಜವಾದ ಅಪರಾಧಿ ಅಂತ ತಾವು ಒಪ್ಪುವುದಿಲ್ಲವೆ?

ಪ್ರೆಸಿಡೆಂಟ್: ಇವನು ಅಪರಾಧಿ ಆಗಿರಬಹುದು, ಆದರೆ ನಿಜವಾದ ಅಪರಾಧಿ ಅಲ್ಲ.

ಅರವಿಂದ: ಹಾಗಾದರೆ ಯಾರು?

ಪ್ರೆಸಿಡೆಂಟ್: ನನ್ನನ್ನು ಕೇಳಿದರೆ 'ನೀವು' ಅಂತೀನಿ

ಅರವಿಂದ: ನಾನೆ?

ಪ್ರೆಸಿಡೆಂಟ್: ನಾನು ಹೇಳಿದ ಮಾತಿನ ಅರ್ಥ ನೀವುಗಳು ಅಂತ (ಬಿಡುವು) ಅವನು ಕಳೆದ ಮೂರು ವರ್ಷಗಳಿಂದ ಕಾಪಿ ಹೊಡೀತಾ ಇದ್ದ. ಅವನನ್ನು ಹಿಡಿಯಲಿಲ್ಲ ಯಾಕೆ?

ಅರವಿಂದ: ಈ ಪ್ರಶ್ನೆಯನ್ನು ತಮಗೆ ತಾವೇ ಕೇಳಿಕೊಳ್ಳಿ.

ಪ್ರೆಸಿಡೆಂಟ್: ಅವನ ಮೂರ್ಖ ಕೃತ್ಯಗಳ ಬಗ್ಗೆ ನನಗೆ ಯಾಕೆ ದೂರು ಕೊಡಲಿಲ್ಲ? ನಿಮಗೆಲ್ಲಾ ಯಾವ ವಿಷಯಕ್ಕೆ ಭಯ ಇತ್ತು.?

ಅರವಿಂದ: ತಮ್ಮ ವಿಷಯಕ್ಕೆ

ಪ್ರೆಸಿಡೆಂಟ್: ನನ್ನ ಭಯವೆ?

ಅರವಿಂದ: ಹೌದು ನಿಮ್ಮ ಭಯ. ನಮ್ಮ ಅನ್ನದ ಭಯ. ನಮ್ಮ ಸುರಕ್ಷತೆಯ ಭಯ.

ಪ್ರೆಸಿಡೆಂಟ್: ನಾನು ಯಾರಿಗೇನು ಕೆಟ್ಟದ್ದು ಮಾಡ್ತೀನಿ?

ಅರವಿಂದ: ನಿಮ್ಮ ಭಾಷೆ ಬೆದರಿಕೆಯ ಭಾಷೆ ಆಗಿರಲಿಲ್ಲವೆ? ನೀವು ಏನು ಹೇಳ್ತೀರೋ ಅದೇ ನಿಯಮ ಆಗಿರಲಿಲ್ಲವೆ?

ಪ್ರೆಸಿಡೆಂಟ್: ನಿಮ್ಮ ಆರೋಪ ತಪ್ಪು.

ಅರವಿಂದ: ಇಲ್ಲ ನನ್ನ ಆರೋಪ ಸರಿಯಾಗಿದೆ. ನಿಮ್ಮ ಮಗ ಒಬ್ಬ ಗೂಂಡಾ ಮತ್ತು ಬದ್ಮಾಶ್ ಅಂತ ನಿಮಗೆ ಚೆನ್ನಾಗಿ ಗೊತ್ತಿದೆ. ಇದರ ಮೇಲೂ ತಮಗೇನೂ ಗೊತ್ತಿಲ್ಲ ಅಂತ ಯಾಕೆ ನಾಟಕ ಆಡ್ತೀರಿ.

ಪ್ರೆಸಿಡೆಂಟ್: ಇದು ಸುಳ್ಳು.

ಅರವಿಂದ: ಹಾಗಾದರೆ ಚಂದೂನ ಕೇಸನ್ನು ಯೂನಿವರ್ಸಿಟಿಗೆ ಯಾತಕ್ಕೆ ಕಳಿಸಿದ್ದೀರಿ?

ಪ್ರೆಸಿಡೆಂಟ್: ನಾನು ಕಳಿಸಿದ್ದೀನಾ?

ಅರವಿಂದ: ಹೌದು ನೀವು ಕಳಿಸಿದ್ದೀರಿ. ನೀವು ಸಂದರ್ಭದ ಲಾಭ ಮಾಡಿಕೊಂಡಿದ್ದೀರಿ. ಅವನು ಯಾವ ತಪ್ಪೂ ಮಾಡಿಲ್ಲ ಅಂತ ನಿಮಗೆ ಗೊತ್ತಿತ್ತು.

ಪ್ರೆಸಿಡೆಂಟ್: ನನಗೆ ಅವನ ಬಗ್ಗೆ ಏನು ದ್ವೇಷ ಇರೋದಕ್ಕೆ ಸಾಧ್ಯ?

ಅರವಿಂದ: ಅವನು ನಿಮ್ಮ ರಾಜಕೀಯ ವಿರೋಧಿಯ ಮಗ. ನೀವು ಅವನ ತಂದೆಯವರ ಇಮೇಜ್ ಹಾಳುಮಾಡಬೇಕೂಂತ ಇದ್ದೀರಿ.

ಪ್ರೆಸಿಡೆಂಟ್: ಮಿಸ್ಟರ್ ಅರವಿಂದ್, ನೀವು ನಿಮ್ಮ ಮಿತಿಗಿಂತ ತುಂಬ ಮುಂದೆ ಹೋಗ್ತಿದ್ದೀರಿ

ಅರವಿಂದ: ರಾಜಕುಮಾರ್ ರಿಪೋರ್ಟನ್ನು ಯೂನಿವರ್ಸಿಟಿಗೆ ಕಳಿಸುವುದಕ್ಕೆ ಬಿಟ್ಟು ಬಿಡುವುದರಲ್ಲೇ ಹಿತ ಇದೆ.

ಪ್ರೆಸಿಡೆಂಟ್: ಹಾಗಿದ್ದರೆ ನೀವು ರಿಪೋರ್ಟ್ ವಾಪಸ್ ತೆಗೆದುಕೊಳ್ಳೋದಿಲ್ಲ?

ಅರವಿಂದ: ಆ ಯಾವ ಪ್ರಶ್ನೇನೂ ಏಳೋದೇ ಇಲ್ಲ.

ಪ್ರೆಸಿಡೆಂಟ್: ನೀವು ನಿಮ್ಮ ಹಠದ ಪರಿಣಾಮ ಏನು ಅಂತ ತಿಳಿದಿದ್ದೀರಾ?

ಅರವಿಂದ: ಚೆನ್ನಾಗಿ.

ಪ್ರೆಸಿಡೆಂಟ್: ಹಾಗಾದರೆ ನನ್ನ ಆರೋಪವನ್ನೂ ಕೇಳಿ. ನೀವು ಹುಡುಗರನ್ನು ನನ್ನ ವಿರುದ್ಧ ಎತ್ತಿಕಟ್ಟುತ್ತಿದ್ದೀರಿ. ನೀವು ನಗರದ ಶಾಂತಿ ಮತ್ತು

ಸುವ್ಯವಸ್ಥೆಗೆ ಅಪಾಯ ಉಂಟುಮಾಡುತ್ತಿದ್ದೀರಿ. ನೀವು ಬದ್ಮಾಶ್ ಹುಡುಗರ ಮುಖಂಡತ್ವ ವಹಿಸುತ್ತಿದ್ದೀರಿ.

ಅರವಿಂದ: ಪ್ರೆಸಿಡೆಂಟ್ ಸಾಹೇಬರೆ! ಈ ಆರೋಪಗಳು ತಪ್ಪು ಅಂತ ಸ್ವತಃ ನಿಮಗೇ ಗೊತ್ತಿದೆ.

ಪ್ರೆಸಿಡೆಂಟ್: ನಾಳೆಯ ಒಳಗೆ ನೀವು ರಿಪೋರ್ಟ್ ಬದಲಾಯಿಸದೆ ಹೋದರೆ ಅದರ ಪರಿಣಾಮ ಭಯಂಕರವಾಗುತ್ತದೆ. ನಾನು ಕಾಲೇಜನ್ನು ಮುಚ್ಚುತ್ತೇನೆ.

ಅರವಿಂದ: ಸರಿ. ಬಂದ್ ಮಾಡಿಬಿಡಿ.

ಪ್ರೆಸಿಡೆಂಟ್: [ಅರವಿಂದನ ದೃಢತೆಯನ್ನು ನೋಡಿ ಸ್ವಲ್ಪ ಮೃದುವಾಗಿ] ನೀವು ಅರ್ಥಮಾಡಿಕೊಳ್ಳುವುದಕ್ಕೆ ಯಾಕೆ ಪ್ರಯತ್ನಪಡ್ತಾ ಇಲ್ಲ ಮಿಸ್ಟರ್ ಅರವಿಂದ್! ಕಾಲೇಜ್ ಮುಚ್ಚುವುದರಿಂದಂತೂ ವಿಷಯ ತೊಡಕಾಗಬಹುದೇ ಹೊರತು ಬಗೆಹರಿಯುವುದಂತೂ ಇಲ್ಲವೇ ಇಲ್ಲ.

ಅರವಿಂದ: ಕಾಲೇಜು ಮುಚ್ಚಿಸುವ ಧಮಕಿ ಹಾಕಿದ್ದು ನೀವು. ನಾನಲ್ಲ.

ಪ್ರೆಸಿಡೆಂಟ್: ರಾಜ್‌ಕುಮಾರ್‌ನ ಒಂದು ಕಡೆ ಇಡಿ. ಸ್ವಲ್ಪ ಯೋಚನೆ ಮಾಡಿನೋಡಿ. ಈ ಘಟನೆಯಿಂದ ನನ್ನ ಪಬ್ಲಿಕ್ imageಗೆ ಎಷ್ಟೊಂದು ಧಕ್ಕೆ ಬಂದಿದೆ ಅಂತ. ಚುನಾವಣೆ ಟಿಕೆಟ್ ಕೈ ತಪ್ಪಿ. ಹೋಗ್ತಾ ಇರುತ್ತೆ.

ಅರವಿಂದ: ನಿಮ್ಮ ದೃಷ್ಟಿಯಿಂದ ವಿಷಯ ಸರಿಯಿರಬಹುದು. ಆದರೆ ನಾನು..... [ಮಧ್ಯೆ ಲೀಲಾ ಚಾಯ್‌ನ ಟ್ರೇ ತೆಗೆದುಕೊಂಡು ಬರುತ್ತಾಳೆ]

ಪ್ರೆಸಿಡೆಂಟ್: ಮನೆಯಿಂದ ಹೊರಟಾಗ ಏನು ಅಂದುಕೊಂಡು ಹೊರಟಿದ್ದೆ ಅಂತ ಈಗ ಹೇಗೆ ಹೇಳಲಿ. ನೀವು ಯಾವ ಥರಾ ಮುಖ ಮಾಡಿಕೊಂಡಿರಿ ಅಂದರೆ, ಮಾತೆಲ್ಲ ವ್ಯರ್ಥವಾಯಿತು. (ಬಿಡುವು) ನಿಮ್ಮ ಈ ಪ್ರಿನ್ಸಿಪಾಲ್ ಇದ್ದಾನಲ್ಲ. ಇವನಿಗೆ ರಜ ಕೊಟ್ಟು ಬಿಡೋಣ ಅಂತ ಯೋಚಿಸಿದ್ದೆ. ಕಾಲೇಜ್‌ನ್ನೆಲ್ಲ ಹಾಳು ಮಾಡಿಟ್ಟು ಬಿಟ್ಟಿದ್ದಾನೆ. ಅವನ ಜಾಗದಲ್ಲಿ ನಿಮ್ಮನ್ನು........

ಅರವಿಂದ: (ಆಶ್ಚರ್ಯದಿಂದ) ನನ್ನನ್ನು?

ಪ್ರೆಸಿಡೆಂಟ್: ಹೇಳಿದೆನಲ್ಲ, ಯೂ ಆರ್ ದಿ ಓನ್ಲೀ ಪ್ರೊಫೆಸರ್. ಕೆಲವೊಂದು ವಿಷಯಗಳಲ್ಲಿ ನಿಮ್ಮೊಂದಿಗೆ ವಿರೋಧ ಇರಬಹುದು. ಆದರೆ ಇದರರ್ಥ ನಿಮ್ಮ ಯೋಗ್ಯತೆಯ ವಿಷಯದಲ್ಲಿ ನಾನು ಎಂದಾದರೂ ಸಂದೇಹ ಪಟ್ಟಿದ್ದೆ ಅಂತ ಅಲ್ಲ.

ಅರವಿಂದ: ಅಂದರೆ ನೀವು ನನ್ನನ್ನು ಖರೀದಿ ಮಾಡಬೇಕೂಂತ ಇದ್ದೀರಿ?

ಪ್ರೆಸಿಡೆಂಟ್: My cards are open. ಈಗ ನೀವು ಯೋಚನೆ ಮಾಡಿ ಈಗಲೇ ತೀರ್ಮಾನ ಮಾಡಿ ಬಿಡಿ ಅಂತ ಎಲ್ಲಿ ಹೇಳ್ತಿದ್ದೀನಿ. Take your own time. ಆದರೆ ನಾಳೆ ಹೊತ್ತಿಗೆ ಖಂಡಿತಾ ತಿಳಿಸಿಬಿಡಿ. [ಹೊರಡಲು ಏಳುತ್ತಾನೆ]

ಲೀಲಾ: ಚಹಾ ಕುಡಿಯೋದಿಲ್ಲವೆ?

ಪ್ರೆಸಿಡೆಂಟ್: ಈಗಲೇ ಇಲ್ಲ. ನಾಳೆ ತೀರ್ಮಾನ ಕೇಳಿದ ಮೇಲೆ. (ಹೋಗುತ್ತಾನೆ) [ಗಾಢ ನೀರವತೆ]

ಲೀಲಾ: ಏನು ಯೋಚನೆ ಮಾಡ್ತಿದ್ದೀರಿ?

ಅರವಿಂದ: ಏನೂ ಇಲ್ಲ.

ಲೀಲಾ: ಪ್ರಿನ್ಸಿಪಾಲ್ ಆಗೋದಿಲ್ಲವೆ?

ಅರವಿಂದ: ಅದರ ಬೆಲೆ ಗೊತ್ತಿದೆಯೇನು?

ಲೀಲಾ: ಬೆಲೆ ಕೊಡದೆ ಏನಾದರೂ ಸಿಗೋದೂ ಉಂಟೆ?

ಅರವಿಂದ: ಅಂದರೆ ಅಪ್ರಾಮಾಣಿಕನಾಗಿಬಿಡಲೆ?

ಲೀಲಾ: ಆ ಅಸಭ್ಯ ಹುಡುಗನಿಗೆ ಬೆಂಬಲ ಕೊಟ್ಟರೂ ಏನು ಸಿಗುತ್ತೆ? ಪ್ರೆಸಿಡೆಂಟರೊಂದಿಗೆ ದ್ವೇಷ ಸ್ಥಿರವಾಗುತ್ತೆ. ನಿಮ್ಮ ಸಹೋದ್ಯೋಗಿಗಳು ತಾನೆ ಎಲ್ಲಿ ಬೆಂಬಲ ಕೊಡ್ತಿದ್ದಾರೆ? ಯಾರ ಭರವಸೆಯ ಮೇಲೆ ಹೋರಾಡ್ತೀರಿ?

ಅರವಿಂದ: ಆದರೆ ಚಂದ್ರೂಗೆ ಮೋಸಮಾಡುವುದರ ಅರ್ಥ ನಿನಗೆ ಗೊತ್ತೇನು? ಕಾಪಿ ಮಾಡುವುದನ್ನು ವಿರೋಧಿಸುವ ನೂರಾರು ವಿದ್ಯಾರ್ಥಿಗಳು ನನ್ನ ರಕ್ತಪಿಪಾಸುಗಳಾಗಿ ಬಿಡುತ್ತಾರೆ. ನನ್ನ ಮುಖದ ಮೇಲೆ ಉಗುಳ್ತಾರೆ.

ಲೀಲಾ: ಪ್ರೆಸಿಡೆಂಟ್ ಅವರನ್ನು ವಿಚಾರಿಸಿಕೊಳ್ತಾನೆ. ನಿಮಗೆ ರಕ್ಷಣೆ ಕೊಡ್ತಾನೆ. ಪ್ರಿನ್ಸಿಪಾಲ್ ಮಾಡ್ತಾನೆ. ಮತ್ತು ಈ ಹುಡುಗರು ನಿಮ್ಮನ್ನು ಕೇವಲ ರಸ್ತೆಗಳ ಮೇಲೆ ನಿಲ್ಲಿಸಿಕೊಂಡು ತಮಾಷೆ ನೋಡ್ತಾರೆ. ಅವರನ್ನು ಬೆಂಬಲಿಸಿ ಏನು ಲಾಭ? [ಯದೂನ ಪ್ರವೇಶ. ಬಹಳ ಚಿಂತಾಕ್ರಾಂತನಾಗಿದ್ದಾನೆ. ಹೆಚ್ಚು ಕಡಿಮೆ ಏದುಸಿರು ಬಿಡುತ್ತಿದ್ದಾನೆ]

ಅರವಿಂದ: ಹೀಗೆ ಯಾಕೆ ಏದುಸಿರು ಬಿಡ್ತಿದ್ದೀ?

ಯದೂ: ನಗರದಲ್ಲಿ ಏನು ನಡೀತಾ ಇದೆ ಅನ್ನುವುದರ ಸ್ವಲ್ಪವಾದರೂ ಅಂದಾಜಿದೆಯೆ ನಿನಗೆ?

ಲೀಲಾ: ಯಾಕೆ ಏನಾದರೂ ಅನಾಹುತ ಆಯ್ತೇನು?

ಯದೂ: ಅದರ ಸಿದ್ಧತೆಗಳು ನಡೆಯುತ್ತಿವೆ. ಆ ಚಂದೂ ಅನ್ನೋ ಮೂರ್ಖನನ್ನು ಇನ್ನೂ ಮೇಲಕ್ಕೆ ಹತ್ತಿಸು. ನಿನ್ನ ಹೆಸರು ಹೇಳಿಹುಡಗರನ್ನೆಲ್ಲಾ ಎತ್ತಿಕಟ್ಟುತ್ತಾ ಇದ್ದಾನೆ. ನಾಳೆ ಕಾಲೇಜಿನಲ್ಲಿ ಅನಾಹುತ ಆಗದೆ ಇರುವುದಿಲ್ಲ.

ಅರವಿಂದ: ಆದರೆ ನಾನು ಅವನ ಹತ್ತಿರ ಅಂಥದ್ದೇನೂ ಮಾತಾಡಲಿಲ್ಲ.

ಯದೂ: ಅರ್ಥ ಮಾಡಿಕೊಳ್ಳುವ ಪ್ರಯತ್ನ ಏಕೆ ಮಾಡುತ್ತಿಲ್ಲ ನೀನು? ನಿನ್ನ ಹೆಸರಿನಲ್ಲಿ ಕ್ರಾಂತಿ ಮತ್ತು ಜಿಂದಾಬಾದ್ ಘೋಷಣೆಗಳನ್ನು ಕೂಗುತ್ತಿದ್ದಾರೆ. ಹುಡುಗರನ್ನು ಎತ್ತಿಕಟ್ಟಿದವನು ನೀನು ಅಂತ ಇಡೀ ಊರಿನಲ್ಲೆಲ್ಲ ರೂಮರ್ಸ್ ಹಬ್ಬಿದೆ. ನಿನ್ನ ಈ ದುಷ್ಟ ವ್ಯವಹಾರದ ಬಗ್ಗೆ ಇಡೀ ಸ್ಟಾಫ್ ವ್ಯಗ್ರಗೊಂಡಿದೆ.

ಲೀಲಾ: ಯಾರೂ ಬೆಂಬಲ ಕೊಡೋದಿಲ್ಲ ಅಂತ ನಾನು ಹೇಳ್ತಾ ಇರಲಿಲ್ಲವಾ? ಎಲ್ಲರಿಗೂ ಅವರವರದ್ದೇ ಇರುತ್ತೆ. ಯದೂ ಅಣ್ಣ, ಈಗ ಏನಾಗಬಹುದು?

ಯದೂ: ಅತ್ತ ರಾಜಕುಮಾರ್ ಮತ್ತು ಅವನ ಸ್ನೇಹಿತರು ನಿನ್ನ ಬಗ್ಗೆ ತುಂಬ ಸಿಟ್ಟಾಗಿದ್ದಾರೆ (ಬಿಡುವು) ಒಂದು ಕಡೆ ರಾಜ್‌ಕುಮಾರ್‌ನನ್ನು ಹಿಡಿದು ನೀನು ಅವರಿಗೆಲ್ಲ. ಸವಾಲುಹಾಕಿದ್ದೀಯ. ಚಂದೂನನ್ನು ಬೆಂಬಲಿಸಿ ಅವರ ಅವರ ಅಸ್ತಿತ್ವವನ್ನೇ ಅಂತ್ಯಗೊಳಿಸೋದಕ್ಕೆ ಹೊರಟಿದ್ದೀಯ.

ಅರವಿಂದ: ನಾನು ಚಂದೂನನ್ನು ಎತ್ತಿಕಟ್ಟುತ್ತಿದ್ದೀನಿ ಅಂತ ಯಾರು ಹೇಳ್ತಾರೆ?

ಯದೂ: ಹಾಗಂತ ಅವರು ಯೋಚನೆಮಾಡ್ತಾರೆ. ನೀನೊಂದು ವೇಳೆ ರಿಪೋರ್ಟ್ ವಾಪಸ್ ತೆಗೆದುಕೊಳ್ಳದೆ ಹೋದರೆ, ಇವತ್ತಲ್ಲದಿದ್ದರೆ ನಾಳೆ ನಿನ್ನ ಪ್ರಾಣ ತೆಗೀತಾರೆ

ಅರವಿಂದ: ನೀನು ನನ್ನನ್ನು ಹೆದರಿಸುತ್ತಿದ್ದೀಯಾ?

ಯದೂ: ಇದರಲ್ಲಿ ಹೆದರಿಸೋದು ಏನಿದೆ? ಈ ಜನ ವಿಮಲೇಂದುವನ್ನು ಕೊಲ್ಲಬಹುದಾದರೆ ನಿನ್ನನ್ನು ಯಾಕೆ ಕೊಲ್ಲೋಕೆ ಆಗಲ್ಲ? ಪ್ರತಿಯೊಂದು ಸಂಗತಿಯೂ ನಿನ್ನ ವಿರುದ್ಧ ಹೋಗ್ತಾ ಇದೆ, ನಡಿ ರಿಪೋರ್ಟ್ ವಾಪಸ್ ತಗೊಂಡು ಬಿಡು.

ಲೀಲಾ: ಮತ್ತೆ ಪ್ರೆಸಿಡೆಂಟು ಇವರನ್ನು ಪ್ರಿನ್ಸಿಪಾಲ್ ಮಾಡೋ ವಿಷಯದ ಬಗ್ಗೇನೂ ಹೇಳ್ತಾ ಇದ್ದ.

ಯದೂ: ಹಾಗಾದರೆ ಹೋಗು, ಪ್ರಿನ್ಸಿಪಾಲ್ ಆಗಿಬಿಡು. ನಾನು ವೈಸ್ ಪ್ರಿನ್ಸಿಪಾಲ್ ಆಗೋದಕ್ಕೆ ದಾರಿ ಮಾಡು (ಬಿಡುವು) ನೀನು ಪ್ರೆಸಿಡೆಂಟರ ಬೆಂಬಲಕ್ಕೆ ನಿಲ್ಲುವುದಾದರೆ ಅವನು ನಿನ್ನ ಬೆಂಬಲಕ್ಕೆ ನಿಲ್ತಾನೆ. (ಬಿಡುವು) ಇನ್ನು ಚಂದೂ ಮತ್ತವನ ಗೆಳೆಯರ ವಿಷಯ ಒಂದಿದೆ. ಪ್ರೆಸಿಡೆಂಟು ಸ್ವತಃ ಅದನ್ನು ನಿಭಾಯಿಸ್ತಾನೆ (ಬಿಡುವು) ಆದರೆ ರಾಜಕುಮಾರ್ ನಿನ್ನನ್ನು ಜೀವಂತ ಉಳಿಸೋಲ್ಲ.

ಅರವಿಂದ: (ಸಿಟ್ಟಿನಿಂದ) ಸಾಕು ನಿಲ್ಲಿಸು ನಿನ್ನ ಬೊಗಳೆಯನ್ನು.

ಯದೂ: ಬೊಗಳೆ ಅಂತ ಹೇಳ್ತಿಯಾ? ರಿಪೋರ್ಟ್ ಬದಲಾಯಿಸುವುದರ ಹೊರತು ನಿನಗೆ ಬೇರೆ ಉಪಾಯ ಇಲ್ಲ. ರಾಜ್‌ಕುಮಾರ್‌ನನ್ನು ವಿರೋಧಿಸಿದರೆ ನಿನ್ನ ಹತ್ಯೆ. ಚಂದೂನನ್ನು ವಿರೋಧಿಸಿದರೆ ಸಾಮಾಜಿಕ ಹತ್ಯೆ. ಹತ್ಯೆಯಿಂದ ನೀನು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಅರವಿಂದ: ಸುಮ್ಮನಿರು.

ಲೀಲಾ: ಕೊನೇ ಪಕ್ಷ ಒಂದು ಸಲವಾದರೂ ನಾನು ಹೇಳೋದನ್ನು ಒಪ್ಪಿಕೊಳ್ತೀರಿ ಅಂತ ನಾನು ಅಂದು ಕೊಂಡಿದ್ದೆ. ಆದರೆ ಇಲ್ಲ, ನೀವು ಕೇವಲ ನಿಮಗೋಸ್ಕರ ಬದುಕಿದ್ದೀರಿ. ನಿಮಗೆ ನಿಮ್ಮ ಸಂತೋಷದ ಹೊರತು ಏನೂ ಕಾಣಿಸೋದಿಲ್ಲ. ಎಂಥ ಸ್ವಾರ್ಥೀರೀ! ಈಗ ನಾನು ಮತ್ತು ಚಂದು ಇಬ್ಬರಲ್ಲಿ ಒಬ್ಬರನ್ನು ಆರಿಸಿಕೊಳ್ಳಬೇಕು ನೀವು

ಅರವಿಂದ: (ಚೀರುತ್ತ) ಬಾಯಿ ಮುಚ್ಚು ನನ್ನ ಬುದ್ಧಿ ಕೆಲಸ ಮಾಡ್ತಾ ಇಲ್ಲ. ಯುದೂ ಯೂ ಗೆಟ್ ಔಟ್ ಫ್ರಂ ಹಿಯರ್ ಐಸೇ ಗೆಟ್ ಔಟ್! [ನಿಧನಿಧಾನವಾಗಿ ಕತ್ತಲೆ ಆವರಿಸುತ್ತದೆ. ನಿಧ-ನಿಧಾನವಾಗಿ ಬೆಳಕು ಮತ್ತೆ ಬರುತ್ತದೆ. ಅರವಿಂದ ಸೋಫಾದ ಮೇಲೆ ಒಬ್ಬನೇ ಕುಳಿತಿದ್ದಾನೆ. ಸಿಗರೇಟು ಸೇದುತ್ತಾ ಗಾಢವಾದ ಚಿಂತೆಯಲ್ಲಿ ಮುಳುಗಿದ್ದಾನೆ. ಹೊರಗಡೆ ರಾತ್ರಿಯ ನಿಶ್ಯಬ್ದ. ಎಲ್ಲಿಂದಲೋ ಹನ್ನೆರಡು ಘಂಟೆ ಹೊಡೆದದ್ದು ಕೇಳಿಬರುತ್ತದೆ. ಫೋನ್‌ನೊಳಗಿಂದ ವಿಮಲೇಂದುವಿನ ಶರೀರದ ಆಕೃತಿ ಎದ್ದು ಬರುತ್ತೆ.]

ಅರವಿಂದ: (ಗಾಬರಿಯಿಂದ) ಯಾರು? (ಮೌನ) ಯಾರು ನೀನು?

ವಿಮಲೇಂದು: ಗುರುತು ಹಿಡಿ. ಏನು ಒಂದು ವರ್ಷದೊಳಗೇ ಮರೆತುಬಿಟ್ಟೆಯಾ?

ಅರವಿಂದ: ನಿನ್ನ ಧ್ವನಿಯಂತೂ ವಿಮಲೇಂದುವಿನದು. ಆದರೆ ನಿನ್ನ ಮುಖಾಕೃತಿ ಎಲ್ಲಿ ಹೋಯಿತು?

ವಿಮಲೇಂದು: ನಾನೀಗ ಮುಖವಿಲ್ಲದ ಮನುಷ್ಯ

ಅರವಿಂದ: ನೀವು ವಿಮಲೇಂದು.....

ವಿಮಲೇಂದು: ಹೌದು! ವಿಮಲೇಂದು ನಿನ್ನ ಮಿತ್ರ.

ಅರವಿಂದ: ಆದರೆ ನಿನ್ನ ಮುಖಾಕೃತಿ ಎಲ್ಲಿ ಹೋಯಿತು?

ವಿಮಲೇಂದು: ಸಾವು ಅದನ್ನು ಕಳಚಿ ಹಾಕಿತು. ಜೀವಂತ ಇದ್ದಾಗಲೇ ಮುಖಾಕೃತಿಯನ್ನು ಬದಲಾಯಿಸಬಹುದು. ಒಂದು-ಎರಡು-ಹತ್ತು-

ನೂರು. ಆದರೆ ಸಾವು ಯಾವಾಗಲೂ ಮುಖಾಕೃತಿಯನ್ನು ಕಳಚಿ ಹಾಕಿಬಿಡುತ್ತದೆ.

ಅರವಿಂದ: ಹಾಗಿದ್ದರೆ ನೀನು ವಿಮಲೇಂದುವಿನ ಪ್ರೇತ......

ವಿಮಲೇಂದು: (ನಗುತ್ತಾನೆ) ಪ್ರೇತ.... ಹೌದು, ಪ್ರೇತ! ಜೀವಂತ ಪ್ರೇತಗಳ ನಡುವೆ ಇನ್ನೊಂದು ಪ್ರೇತ.

ಅರವಿಂದ: ಎಲ್ಲಿಂದ ಬರ್ತಿದ್ದೀಯ?

ವಿಮಲೇಂದು: ನಿನ್ನ ಮನಸ್ಸಿನ ಕತ್ತಲೆಯ ಗಲ್ಲಿಗಳಿಂದ. ಅಲ್ಲಿ ಬಹಳ ಕತ್ತಲೆ ಇದೆ. ತೇವ ತುಂಬಿದ ಅನೇಕ ನೆಲಮನೆಗಳಿವೆ ಅಲ್ಲಿ! ಎಷ್ಟೊಂದೆಲ್ಲ ಕಚಡಾನ ಕೂಡಿಹಾಕಿ ಇಟ್ಟುಕೊಂಡಿದ್ದೀಯಾ ನೀನು! ನನಗೂ ಬಹಳ ಕಷ್ಟದಿಂದ ದಾರಿ ಸಿಕ್ಕಿತು.

ಅರವಿಂದ: ಆದರೆ ನೀನು ಬಂದಿರೋದಾದರೂ ಯಾಕೆ? ನಿನ್ನನ್ನು ಕರೆಸಿದವರು ಯಾರು?

ವಿಮಲೇಂದು: ನೀನು!

ಅರವಿಂದ: ನಾನು ನಿನ್ನನ್ನು ಕರೆಸಲಿಲ್ಲ. ನಿನ್ನ ಆವಶ್ಯಕತೆ ಏನಿದೆ ನನಗೆ?

ವಿಮಲೇಂದು: ಸುಳ್ಳು ಹೇಳಬೇಡ. ಕರೆಸದೆ ನಾನು ಎಲ್ಲಿಗೂ ಹೋಗೋದಿಲ್ಲ. ಕರೆಸಿದೆಯೋ ಇಲ್ಲವೋ ಹೇಳು. (ಅರವಿಂದ ಸುಮ್ಮನಿರುತ್ತಾನೆ) ಯಾಕೆ ಮಾತಾಡ್ತಿಲ್ಲ.

ಅರವಿಂದ: ಹೌದು ಕರೆಸಿದೆ.

ವಿಮಲೇಂದು: ಸರಿ ಈಗ ನಾನು ಬಂದೆ ಅಂತ ಹೆದರ್ತಿದ್ದಿ. ಹೆದರಬೇಡ.

ಅರವಿಂದ : ನಿನ್ನನ್ನು ಯಾಕೆ ಕರೆಸಿದೆ ನಾನು?

ವಿಮಲೇಂದು : ನಾನು ಹೇಳಲೆ? (ಬಿಡುವು) ಸಾಯುವಾಗ ನಾನು ಏನು ಯೋಚನೆ ಮಾಡ್ತಿದ್ದೆ ಅಂತ ನೀನು ಕೇಳಬೇಕೂಂತ ಇದ್ದೀಯ. ಗೂಂಡಾಗಳು ನನ್ನ ಮೇಲೆ attack ಮಾಡಿದಾಗ ನನ್ನ ಮನಃಸ್ಥಿತಿ ಏನಿತ್ತು ಅಂತ?

ಅರವಿಂದ: ಹೌದು, ಬಲಿದಾನ ಮಾಡುವಾಗ ನೀನು ಏನು ಯೋಚನೆ ಮಾಡ್ತಿದ್ದೆ?

ವಿಮಲೇಂದು: ಮೂರ್ಖ, 'ಬಲಿದಾನ' ಎನ್ನುವ ಶಬ್ದವನ್ನು ವಾಪಸ್ ತೆಗೆದುಕೋ, ಭಾರಿ ಭಾರಿ ಶಬ್ದಗಳ ಮಾಯಾ ದರ್ಪಣದಲ್ಲಿ ನನ್ನ ಮುಖ ನೋಡಿಕೊಳ್ಳುತ್ತಾ ಇರುವುದಕ್ಕೆ ನಾನು ನಿನ್ನ ಕ್ಲಾಸ್ ರೂಮ್‌ನಲ್ಲಿ ಕುಳಿತಿರುವ ಫಸ್ಟ್ ಇಯರ್‌ನ ಅಬೋಧ ಬಾಲಕನಲ್ಲ. ನಾನು ಈ ಶಬ್ದಗಳಿಂದ ಆಚೆ ಇದ್ದೀನಿ. ಮುಖಾಕೃತಿಗಳಿಂದ ಆಚೆ ಇದ್ದೀನಿ.

ಅರವಿಂದ: ನಾನು ಒಪ್ಪಲಾರೆ! ನೀನು ಮಾಡಿದ್ದು ಬಲಿದಾನ. ಆತ್ಮತ್ಯಾಗ.... ಆದರ್ಶ

ವಿಮಲೇಂದು: ಮತ್ತದೇ ಬೊಗಳೆ. ನಿಲ್ಲಿಸ್ತೀಯೋ ಇಲ್ಲವೋ? (ಬಿಡುವು) ಈ ಬೊಗಳೆಯನ್ನು ಬಹಳ ಕೇಳಿ ಬಿಟ್ಟಿದ್ದೀನಿ. ಚಿತೆಯ ಮೇಲೆ ನನ್ನ ಹೆಣವನ್ನು ಇಡಲಾಗಿತ್ತು. ನೀವುಗಳು ಲೆಕ್ಚರ್ ಕೊಡ್ತಾ ಇದ್ದಿರಿ. ಪ್ರತಿ ಒಬ್ಬೊಬ್ಬನೂ ತಾನು ನನ್ನ ಎಂಥಾ ಪ್ರಾಣಸ್ನೇಹಿತನಾಗಿದ್ದೆ ಎನ್ನುವುದನ್ನು ಹೇಳುವುದಕ್ಕೆ ಪ್ರಯತ್ನಿಸುತ್ತಾ ಇದ್ದ. ನನ್ನಲ್ಲಿ ಇಲ್ಲದೆ ಇದ್ದದ್ದನ್ನೂ ಹುಡುಕಿ ಹುಡುಕಿ ವರ್ಣನೆ ಮಾಡ್ತಾ ಇದ್ದ. ಆದರೆ ವಾಸ್ತವ ಸಂಗತಿ ಏನು ಗೊತ್ತೆ?

ಅರವಿಂದ: ನನಗೆ ಹೇಗೆ ಗೊತ್ತು?

ವಿಮಲೇಂದು: ನಿನಗೆ ಗೊತ್ತಿದೆ. ಆದರೆ ಹೇಗೆ ತಾನೆ ಹೇಳ್ತೀಯಾ! ಎಲ್ಲರೂ ಮನಸ್ಸಿನಲ್ಲೇ ನನ್ನ ಬಗ್ಗೆ ಅಯ್ಯೋ ಪಾಪ ಎನ್ನುತ್ತಿದ್ದೀರಿ. ಬಡ್ಡೀ ಮಕ್ಕಳಲ್ಲಿ ಪರಸ್ಪರ ಸ್ಪರ್ಧೆ ಶುರುವಾಗಿಬಿಟ್ಟಿತ್ತು. ಒಬ್ಬನಂತೂ ಇದೇ ಸ್ಪರ್ಧೆಯಲ್ಲಿ ನಮ್ಮಪ್ಪನನ್ನೂ ಕ್ರಾಂತಿಕಾರಿ ಎಂದು ಹೇಳಿಬಿಟ್ಟ. ತಪಸ್ವಿ, ತ್ಯಾಗಿ ಅಂತೆಲ್ಲ ಹೇಳಿದ. ಬಡ್ಡೀ ಮಗನಿಗೆ ಏನು ಗೊತ್ತು ನಮ್ಮಪ್ಪ ಗಾಂಜಾಸೇದುತಿದ್ದ ಮತ್ತು ಸಟ್ಟಾದಲ್ಲಿ ತೊಡಗಿರುತ್ತಿದ್ದ ಅಂತ. ಗೊತ್ತಾಯಿತಲ್ಲ ಏನು ಅಂತ. ಯಾರದ್ದಾದರೂ ಪ್ರಾಣ ಹೋಗಲಿ. ಈ ಬಡ್ಡೀ ಮಕ್ಕಳು ತಮ್ಮ ಪಬ್ಲಿಸಿಟಿ ಮಾಡ್ತಾ ಇರಲಿ.

ಅರವಿಂದ: ಅಂದರೆ ನೀನು ಸತ್ತದ್ದಕ್ಕೆ ವ್ಯಥೆ ಪಡ್ತಾ ಇದ್ದಿ?

ವಿಮಲೇಂದು: ಹಾಗಲ್ಲದೆ ಇನ್ನೇನು. ನನ್ನದು ಸಾಯುವ ವಯಸ್ಸೇನು? ಸಾಯುವುದಕ್ಕೆ ಮೂರು ವರ್ಷ ಮುಂಚೆ ಮದುವೆ ಆಗಿತ್ತು. ಹೂವಿನಂಥ ಮಗು, ಉಕ್ಕಿಬರುತ್ತಿದ್ದ ಹೆಂಡತಿಯ ಪ್ರೀತಿ! ನಾಟಕ

ಪ್ರಪಂಚದಲ್ಲಿ ಹೆಸರು ಮಾಡಬೇಕು ಎನ್ನುವ ಕನಸು ಎಲ್ಲವೂ ಹಾಳಾಗಿ ಹೋಯಿತು

ಅರವಿಂದ: ಹಾಗಾದರೆ ನೀನು ಕಾಪಿ ಮಾಡುತ್ತಿದ್ದವನನ್ನು ಏಕೆ ಹಿಡಿದೆ?

ವಿಮಲೇಂದು: ಮೂರ್ಖತನಕ್ಕೂ ಒಂದು ತರ್ಕ ಇರುತ್ತಾ? ನನಗೆ ಉತ್ಸಾಹ ಏರಿಬಿಟ್ಟಿತ್ತು. ಒಂದು ಮೂರ್ಖತನ ಆಗಿ ಹೋಯಿತು. ಇದಕ್ಕೆ ಶಿಕ್ಷೆ ಅಂದರೆ ಸಾವು ಪ್ರಾಪ್ತವಾಗುತ್ತೆ ಅಂತ ನನಗೇನು ಗೊತ್ತಿತ್ತು?

ಅರವಿಂದ: ಆದರೆ ನಾವುಗಳು ನಿನ್ನ ಆತ್ಮ ಬಲಿದಾನದ ಕಥೆಯನ್ನು ಹಾಡುತ್ತೀವಿ.

ವಿಮಲೇಂದು: ನೀನು ಬದುಕಿದ್ದೀ ಅಲ್ವಾ, ಅದಕ್ಕೇ. ಸತ್ತುಹೋದರೆ ಆಗ ಜೀವನ ಅಂದರೆ ಏನು ಅಂತ ಗೊತ್ತಾಗುತ್ತೆ.

ಅರವಿಂದ: ಆದರೆ ಕಾಪಿ.....?

ವಿಮಲೇಂದು: ಅದರದ್ದೇ ಇದೆಲ್ಲಾ! ಬಡ್ಡೀ ಮಕ್ಕಳು ಎಲ್ಲಾ ಮಿಡ್ಲ್ ಕ್ಲಾಸ್ ಜನ. ನಿಮ್ಮ ಪ್ರತಿಯೊಂದು ಸಮಸ್ಯೆಯನ್ನೂ ಗ್ಲೋರಿಫೈ ಮಾಡ್ತೀರಿ.... ಮತ್ತೆ ಎಲ್ಲರೂ ಬುದ್ಧಿ ಇಲ್ಲದೆ ಇರ್ತೋರು. ನನ್ನ ಹೆಂಡತಿ ಒಂದು ವರ್ಷದಿಂದ ಕೆಲಸ ಹುಡುಕಿಕೊಂಡು ಮನೆ ಮನೆ ಅಲೆಯುತ್ತಾ ಇದ್ದಾಳೆ. ಎಲ್ಲರೂ ಆಶ್ವಾಸನೆ ಕೊಡ್ತಾರೆ. ಆದರೆ ಕೆಲಸ ಯಾರೂ ಕೊಡಲ್ಲ. ಎಲ್ಲ ಬರೀ ಬೊಗಳೆ.

ಅರವಿಂದ: ನೀನು ಏನು ಹೇಳಬೇಕು ಅಂತ ಇದ್ದೀಯ?

ವಿಮಲೇಂದು: ಅದೇ ನಿನ್ನ ಒಳಮನಸ್ಸು ಯಾವುದನ್ನು ಕೇಳಲು ಇಷ್ಟಪಡುತ್ತದೋ ಅದನ್ನು

ಅರವಿಂದ: ಅಂದರೆ?

ವಿಮಲೇಂದು: ಹೋಗು, ಆ ಪ್ರೆಸಿಡೆಂಟ್ ಜೊತೆ ಕಾಂಪ್ರೋಮೈಸ್ ಮಾಡಿಕೋ. ಪ್ರಿನ್ಸಿಪಾಲ್ ಆಗು. ನಿನ್ನ ಹೆಣದ ಪಕ್ಕದಲ್ಲಿ ಮುನಿಸಿ ಪಾಲಿಟಿ ಛೇರ್ ಮನ್ ಅವರ ಅಧ್ಯಕ್ಷತೆಯಲ್ಲಿ ಶೋಕ ಸಭೆ ನಡೆಯಬೇಕು ಮತ್ತು ನಿರ್ಣಯ ಮಂಡನೆಯಾಗಬೇಕು ಅಂತ ನಿನಗೂ ಆಸೆ ಇದೆಯೇನು?

ಅರವಿಂದ: ನಾನು ಕಾಂಪ್ರೋಮೈಸ್ (ಒಪ್ಪಂದ) ಮಾಡಿಕೊಳ್ಳುವುದಿಲ್ಲ.

ವಿಮಲೇಂದು: ನಾನೂ ನೋಡ್ತೀನಿ. ನನ್ನ ನಾಟಕದ ದ್ರೋಣಾಚಾರ್ಯನೂ ಇದನ್ನೇ ಹೇಳ್ತಿದ್ದ.

ಅರವಿಂದ: ನನ್ನನ್ನು ದ್ರೋಣಾಚಾರ್ಯನ ಜೊತೆ ಯಾತಕ್ಕೆ ಹೋಲಿಸುತ್ತೀಯ. ಅವನು ಬಹಳ ಶಕ್ತಿಶಾಲಿ. ನಾನೊಬ್ಬ ಸಣ್ಣ ವ್ಯಕ್ತಿ. ಸಣ್ಣ ಪುಟ್ಟ ಸಂಗತಿಗಳ ಬಗ್ಗೆ ಹೋರಾಡ್ತೀನಿ.

ವಿಮಲೇಂದು: ಬೊಗಳೆ! ಆ ದ್ರೋಣಾಚಾರ್ಯನೂ ನಿನ್ನ ಹಾಗೆಯೇ ಪ್ರತಿಜ್ಞೆಮಾಡಿದ್ದ. ಅವನನ್ನು ಅರ್ಥಮಾಡಿಕೋ. ಆಗ ನಿನ್ನ ಪ್ರಶ್ನೆಗೆ ಉತ್ತರ ತನಗೆ ತಾನೇ ಸಿಕ್ಕಿಬಿಡುತ್ತೆ. ಅದನ್ನು ನೆನಪಿಸಿಕೋ.... ನೆನಪಿಸಿಕೋ. [ನಿಧಾನವಾಗಿ ಕತ್ತಲೆ. ಕತ್ತಲೆಯಲ್ಲಿ ಮಗು ಅಳುತ್ತಿರುವ, ಬಿಕ್ಕುತ್ತಿರುವ ಧ್ವನಿಗಳು ಕೇಳಿ ಬರುತ್ತವೆ. ಮೆಲ್ಲಮೆಲ್ಲಗೆ ಬೆಳಕುಬರುತ್ತದೆ. ಏಳೆಂಟು ವರ್ಷಗಳ ಅಶ್ವತ್ಥಾಮನು ನೆಲದ ಮೇಲೆ ಕಾಲು ಮಸೆಯುತ್ತ ಹಠಮಾಡುತ್ತಿದ್ದಾನೆ]

ಅಶ್ವತ್ಥಾಮ: ಇಲ್ಲ ಇಲ್ಲ! ನನಗೆ ಈಗಲೇ ಬೇಕು. ಕೊಡದೆ ಇದ್ದರೆ ನಿನ್ನ ಹತ್ತಿರ ಯಾವತ್ತೂ ಮಾತಾಡಲ್ಲ. ಅಪ್ಪನ ಹತ್ತಿರಾ ಮಾತಾಡೊಲ್ಲ.

ಕಪೀ : (ಗದ್ದರಿಸುತ್ತ) ನಾನು ಹೇಳಿದ್ದನ್ನು ಕೇಳೋದಿಲ್ಲವೆ?

ಅಶ್ವತ್ಥಾಮ: (ಚೀರುತ್ತ) ನಿಂದೇನು, ಯಾರು ಹೇಳಿದ್ರೂ ನಾನು ಕೇಳೋದಿಲ್ಲ, ತೊಗೊಂಡು ಬಾ, ಹಾಲು ತೊಗೊಂಡು ಬಾ ಈಗಲೇ ತೊಗೊಂಡು ಬಾ. ಇಲ್ಲದೆ ಇದ್ದರೆ ತಲೆ ಚಚ್ಚಿಕೊಂಡು ಪ್ರಾಣ ಬಿಟ್ಟು ಬಿಡ್ತೀನಿ. ಹಾಲು ಕೊಡ್ತೀಯೋ ಇಲ್ಲವೋ! ತೊಗೊಂಡು ಬಾ.... (ತಲೆ ಚಚ್ಚಿ ಕೊಳ್ಳುತ್ತಾನೆ). ಕೊಡ್ತೀಯೋ ಇಲ್ಲವೋ..... ತೊಗೊಂಡು ಬಾ... (ತಲೆಚಚ್ಚಿಕೊಳ್ಳುವನು) ಕೊಡ್ತೀಯೋ ಇಲ್ಲವೋ! ತೊಗೊಂಡು ಬಾ. ತೊಗೊಂಡು ಬಾ. (ತಲೆಚಚ್ಚಿಕೊಳ್ಳುತ್ತಾ ಹೋಗುತ್ತಾನೆ)

ಕೃಪೀ: ಹಾಗಾದರೆ ಸತ್ತು ಹೋಗು. ಹಾಲಿದ್ದರೆ ತಾನೆ ತರೋದು. ನಿಮ್ಮ ಅಪ್ಪನಂತೂ ಹಸು ಕಟ್ಟಿಲ್ಲ.

ಅಶ್ವತ್ಥಾಮ: ಎಲ್ಲಿಂದಲಾದರೂ ತೊಗೊಂಡು ಬಾ. ತರದೆ ಇದ್ದರೆ ನೋಡು. ತಂದು ಕೊಡು– ತಂದು ಕೊಡು (ತಲೆಚಚ್ಚಿಕೊಳ್ಳುತ್ತಾನೆ). [ಕೃಪಿ ವ್ಯಾಕುಲಳಾಗಿದ್ದಾಳೆ ಅವನನ್ನು ಎತ್ತಿಕೊಳ್ಳುತ್ತಾಳೆ. ಮುದ್ದು ಮಾಡುತ್ತಾಳೆ]

ಕೃಪೀ: ಇರು, ತರ್ತೀನಿ... ಈಗಲೇ ತರ್ತೀನಿ. [ಅಶ್ವತ್ಥಾಮನ ಬಿಕ್ಕುವಿಕೆ ನಿಲ್ಲುವುದಿಲ್ಲ. ದ್ರೋಣಾಚಾರ್ಯನ ಪ್ರವೇಶ. ಅಶ್ವತ್ಥಾಮನು ಅಳುತ್ತಿರುವುದನ್ನು ನೋಡಿ ಚಿಂತಿತನಾಗುತ್ತಾನೆ]

ದ್ರೋಣ: (ಅಶ್ವತ್ಥಾಮನನ್ನು ಮುದ್ದಿಸುತ್ತ) ಏನಾಯ್ತಪ್ಪ? ಯಾಕೆ ಅಳುತ್ತಾ ಇದ್ದಿ? ಅಮ್ಮ ತಿರುಗ ಹೊಡೆದಳೆ?

ಅಶ್ವತ್ಥಾಮ: ಇಲ್ಲ.... ಇಲ್ಲ. ಹೊಡೀಲಿಲ್ಲ.

ದ್ರೋಣ: ಹಾಗಾದರೆ ಏನಾಯಿತು?

ಅಶ್ವತ್ಥಾಮ: ಹಾಲು ಕುಡೀತಿನಿ, ಹಾಲು ಕುಡೀತಿನಿ,

ದ್ರೋಣ: ಆದರೆ ನಮ್ಮನೇಲಿ ಹಸು ಎಲ್ಲಿದೆ?

ಅಶ್ವತ್ಥಾಮ: ಇಲ್ಲದೆ ಇದ್ದರೇನಂತೆ, ಅಮ್ಮ ಕೊಡ್ತಿದ್ದಾಳೆ.

ದ್ರೋಣ: ಆದರೆ..... ಹೊರಗಡೆ ಹೋಗಿದ್ದಾಳೇನು?

ಅಶ್ವತ್ಥಾಮ: ಇಲ್ಲ ಒಳಗಿದ್ದಾಳೆ [ಕೃಪಿ ಮಣ್ಣಿನ ಕುಡಿಕೆ ತೆಗೆದುಕೊಂಡು ಬರುತ್ತಾಳೆ]

ಕೃಪೀ: ನೀವು ಬಂದು ಬಿಟ್ಟಿರಾ! ನೋಡಿ ಇವನನ್ನು. ಹಾಲು ಕೊಡು ಅಂತ ಹಠಮಾಡ್ತಾ ಇದ್ದ. ತಲೆ ಚಚ್ಚಿಕೊಂಡು ಚಚ್ಚಿಕೊಂಡು ಪ್ರಾಣ ಒಪ್ಪಿಸುತ್ತಾ ಇದ್ದ. (ಅಶ್ವತ್ಥಾಮನೊಂದಿಗೆ) ತೊಗೋ ಕುಡಿ. ಈಗ ಅತ್ತರೆ ನೋಡ್ತಾ ಇರು. ಹಠಮಾರಿ ಮುಂಡೇದು ಎಲ್ಲೋ! [ಅಶ್ವತ್ಥಾಮ ಹಾಲು ಕುಡಿಯುತ್ತಾನೆ ಕೃಪಿ ಅವನ ಕಡೆಗೆ ಕರುಣೆಯ ನೋಟದಿಂದ ನೋಡುತ್ತಾಳೆ] ಹಸುವಿನ ಹಾಲು ಹೇಗಿತ್ತು ಮಗು?

ಅಶ್ವತ್ಥಾಮ: ತುಂಬಾ ಚೆನ್ನಾಗಿತ್ತಮ್ಮ. [ಹೊರಕ್ಕೆ ಹೊರಡುತ್ತಾನೆ]

ದ್ರೋಣ: ಎಲ್ಲಿಗೆ ಹೋಗ್ತಾ ಇದ್ದೀ?

ಅಶ್ವತ್ಥಾಮ: ಆ ಕ್ಷತ್ರಿಯ ಪುತ್ರನ ಹತ್ತಿರ. ಅವನ ಹತ್ತಿರ ಹೋಗಿ ನಮ್ಮ ಮನೆಯಲ್ಲೂ ಹಸುವಿನ ಹಾಲಿದೆ ಅಂತ ಹೇಳ್ತೀನಿ. ಮಹಾಜಂಬದೋನು! ನಿಮ್ಮನ್ನು ದರಿದ್ರದವನು ಭಿಕ್ಷೆ ಬೇಡೋ ಬ್ರಾಹ್ಮಣ ಅಂತ ಹೇಳ್ತಾ ಇದ್ದ. (ಕುಣಿದುಕೊಂಡು ಹೋಗುತ್ತಾನೆ) [ಕೆಲವು ಕ್ಷಣಗಳವರೆಗೆ ಅಶಾಂತ ಸಮಯ]

ಕೃಪೀ: ಹ್ಞೂ ಹೇಳಿ, ದ್ರುಪದ ಏನು ಹೇಳಿದ, ಇಷ್ಟೊಂದು ದಿನಗಳ ನಂತರ ನಿಮ್ಮನ್ನು ನೋಡಿ ಬಹಳ ಸಂತೋಷ ಗೊಂಡಿರಬೇಕಲ್ಲವೆ? (ಕುಡಿಕೆ ತೆಗೆದುಕೊಳ್ಳಹೋಗುತ್ತಾಳೆ)

ದ್ರೋಣ: ಆ ಕುಡಿಕೆಯನ್ನು ನನಗೆ ಕೊಡು (ಆ ಕುಡಿಕೆಯನ್ನು ತೆಗೆದುಕೊಂಡು ನೋಡುತ್ತಾನೆ)

ಕೃಪೀ: ಏನೇನೆಲ್ಲ ಕೊಟ್ಟ? ನೂರಕ್ಕಿಂತ ಕಡಿಮೆ ಹಸುಗಳನ್ನು ಕೊಟ್ಟಿರ್ತಾನೇನು?

ದ್ರೋಣ: (ಕಟುವಾಗಿ) ನೂರು ಯಾಕೆ, ಸಾವಿರ ಕೊಟ್ಟಿದ್ದಾನೆ.

ಕೃಪೀ: ಎಷ್ಟು ವರಹಗಳನ್ನು ಕೊಟ್ಟ? ಹೀಗೇ ಒಂದಿಷ್ಟು ಕೊಟ್ಟು ಬೀಳ್ಕೊಟ್ಟಿರಬಹುದು! (ಬಿಡುವು) ಹಠ ಬಿಟ್ಟುಬಿಡಿ ಅಂತ ಹೇಳ್ತಿರಲಿಲ್ಲವೇನು ನಾನು? ನೀವೆಲ್ಲಿ ಕೇಳ್ತಾ ಇದ್ರಿ!

ದ್ರೋಣ: ಈ ಕುಡಿಕೆಯಲ್ಲಿ ಹಾಲು ಇತ್ತ? ಸುಳ್ಳು ಯಾಕೆ ಹೇಳ್ತೀಯ?

ಕೃಪೀ: ಈಗ ಹೋಗಲಿ ಬಿಡಿ, ಹೌದು, ಹಾಗಾದರೆ ದ್ರುಪದ ಏನು ಹೇಳಿದ? ನಿಮಗೆ ಯಾವ ರೀತಿಯ ಸ್ವಾಗತ ನೀಡಿದ? ನಿಮ್ಮ ಗೌರವಾರ್ಥ ಆಸ್ಥಾನದ ಸಭೆ ಕರೆದಿರಬಹುದು?

ದ್ರೋಣ: ಈ ಕುಡಿಕೆಯಲ್ಲಿ ಏನಿತ್ತು?

ಕೃಪೀ: ಕೇಳುವ ಶಕ್ತಿ ಇದೆಯಾ?

ದ್ರೋಣ: ದ್ರುಪದನ ಆಸ್ಥಾನದಿಂದ ಬಂದ ಮೇಲೆ ಈಗ ಯಾವ ಮಾತೂ ಭಾರಿ ಆಗುವುದಿಲ್ಲ

ಕೃಪೀ: ಈ ಕುಡಿಕೆಯಲ್ಲಿ ಹಾಲಿನ ಹೆಸರು ಹೇಳಿ ಹಿಟ್ಟನ್ನು ನೀರಿನಲ್ಲಿ ಕದರಿ ಕೊಟ್ಟಿದ್ದೆ.

ಅಶ್ವತ್ಥಾಮ: ಆ ಚಿಕ್ಕ ಮಗುವಿಗೆ ವಂಚನೆ ಮಾಡ್ತಾ ನಿನಗೆ ನಾಚಿಕೆ ಆಗಲಿಲ್ಲವೆ?

ಕೃಪೀ: ನಾಚಿಕೊಂಡಿದ್ದರೆ ಇಷ್ಟು ಹೊತ್ತಿಗೆ ತಲೆಚಚ್ಚಿಕೊಂಡು ಚಚ್ಚಿಕೊಂಡು ಸತ್ತುಹೋಗಿರ್ತಿದ್ದ.

ದ್ರೋಣ: ಆದರೆ ಹಿಟ್ಟನ್ನು ಕದರಿ ಕೊಟ್ಟಿದ್ದನ್ನು ಅವನು ಕುಡಿದದ್ದಾರೂ ಹೇಗೆ?

ಕೃಪೀ: ಕುಡಿಯದೆ ಇದ್ದರೆ ಎಲ್ಲಿ ಹೋಗ್ತಾನೆ? ಹಾಲು ಕುಡಿಯುವುದು ನಿಲ್ಲಿಸಿದ ಮೇಲೆ ಎಂದಾದರೂ ಹಾಲುಕುಡಿದಿದ್ದರೆ, ಹಾಲಿನ ರುಚಿ ಜ್ಞಾಪಕ ಇರುತ್ತಿತ್ತು. (ಬಿಡುವು) ಹಾಲು ಅಂತ ಹೇಳಿ ವಿಷ ಕೊಟ್ಟಿದ್ದರೂ ಕುಡಿದುಬಿಡ್ತಿದ್ದ.

ದ್ರೋಣ: ನಿಜವಾಗಿಯೂ ಅವನು ಯವತ್ತೂ ಹಾಲು ಕುಡಿಯಲಿಲ್ಲವೇ?

ಕೃಪೀ: ಈ ವಿಷಯದ ಬಗ್ಗೆ ಈ ಹೊತ್ತು ನಿಮ್ಮ ದೃಷ್ಟಿ ಬಿತ್ತೋ. ನಾನು ಹೇಳಿದ್ದರೆ ನೀವು ನಂಬ್ತಿದ್ರಾ? ನನ್ನನ್ನು ಜಗಳಗಂಟ ಸ್ವಭಾವದವಳು, ದರಿದ್ರದವಳು, ಎಂದೆಲ್ಲ ಬಯ್ಯುತ್ತಿದ್ದಿರಿ.

ದ್ರೋಣ: ನನಗೆ ಈಗಲೂ ನಂಬಿಕೆ ಬರ್ತಾ ಇಲ್ಲ.

ಕೃಪೀ: ನಂಬಿಕೆ ಯಾಕೆ ಬರುತ್ತೆ! ಯಾವತ್ತಾದರೂ ನಿಮ್ಮ ಮಗನ ಮೂಳೆಗಳನ್ನು ಎಣಿಸಿದ್ದೀರಾ? ಭಿಕ್ಷುಕನ ಮಗ ಅಂತ ಕರೀತಾರೆ ನಿಮ್ಮ ಮಗನನ್ನು. (ಬಿಡುವು) ಎರಡು ಹೊತ್ತಿನ ಅನ್ನ ಹೇಗೆ ಹೊಂದಿಸ್ತೀನಿ ಅಂತ ನನ್ನನ್ನು ಕೇಳಿ.

ದ್ರೋಣ: ಇಂಥಾ ನರಕದ ಜೀವನ!

ಕೃಪೀ: ನರಕವಮಾಡಿದವರು ಯಾರು? ನಾನೋ ನೀವೋ? (ದ್ರೋಣಚಾರ್ಯ ಮೌನ) ಯಾಕೆ ಮಾತಾಡಲ್ಲ? ನಿಮ್ಮ ಹಠ ಎಲ್ಲಿ ಸತ್ತುಹೋಯಿತು?(ಬಿಡುವು) ನೀವು ದೊಡ್ಡ ಆಚಾರ್ಯರಾಗಿರ ಬಹುದು. ಆದರೆ ಅದರಿಂದ ಅನ್ನ ಬರುವುದಿಲ್ಲ. ಬಟ್ಟೆ ಬರೋದಿಲ್ಲ.

ದ್ರೋಣ: ನೀನು ಏನು ಹೇಳಬೇಕು ಅಂತಿದ್ದೀ?

ಕೃಪೀ: ಅದೇ ದ್ರುಪದನ ಹತ್ತಿರಕ್ಕೆ ನಿಮ್ಮನ್ನು ಕಳಿಸುವಾಗ ಹೇಳಿದ್ದೆನಲ್ಲ. ಅದು.

ದ್ರೋಣ: ಆದರೆ ದ್ರುಪದ ಏನು ಮಾಡಿದ ಅಂತ ಗೊತ್ತೇನು ನಿನಗೆ?

ಕೃಪೀ: ಅವನು ನಿಮಗೆ ಏನಾದರೂ ಸ್ವಲ್ಪ ಕೊಟ್ಟಿರಬಹುದು.

ದ್ರೋಣ: ಕೊಟ್ಟನಲ್ಲ, ನನ್ನ ಹಣೆಮೇಲೆ ಸರಿಯಾಗಿ ಒಂದು ಲಾತ! (ಬಿಡುವು) ಅವನ ಸೇವಕರು ಏಟು ಕೊಟ್ಟು ಅಲ್ಲಿಂದ ನನ್ನನ್ನು ಅಟ್ಟಿದರು.

ಕೃಪೀ: ಹಾಗೆ ಆಗಿರೋದಕ್ಕೆ ಸಾಧ್ಯವೇ ಇಲ್ಲ.

ದ್ರೋಣ: ನಾನು ಸುಳ್ಳು ಹೇಳ್ತಿದ್ದೀನೇನು? ಆ ಅಪಮಾನವನ್ನು ನೀನು ಕಲ್ಪಿಸಿಕೊಳ್ಳಲೂ ಆರೆ. ಅದು ನನ್ನ ಅವಮಾನ. ನನ್ನ ತಂದೆಯ ಅವಮಾನ.

ಕೃಪೀ: ಅಂಥದ್ದೇನು ಹೇಳಿದ ಅವನು ನಿಮಗೆ?

ದ್ರೋಣ: ಅವನು ನನಗೆ ಅಹಂಕಾರಿ ಅಂತ ಹೇಳಿದ, ಹಠಮಾರಿ ಅಂತ ಹೇಳಿದ ನಿರ್ಗತಿಕ ಅಂತ ಹೇಳಿದ.

ಕೃಪೀ: ಹಾಗಾದರೆ ಏನು ತಪ್ಪು ಹೇಳಿದ?

ದ್ರೋಣ: ಅವನು ನನ್ನನ್ನು ಧೂರ್ತ ಅಂತ ಹೇಳಿದ, ಕಪಟಿ ಅಂತ ಹೇಳಿದ, ಅವನ ಒಂದೊಂದು ಶಬ್ದವೂ ಭರ್ಜಿಯ ಹಾಗೆ ನನ್ನ ಆತ್ಮವನ್ನು ಇರಿಯುತ್ತಾ ಇದೆ.

ಕೃಪೀ: ಈ ಅಪಮಾನದ ಸಂದರ್ಭ ತಾನೆ ಯಾತಕ್ಕೆ ಬರುವ ಹಾಗೆ ಮಾಡಿಕೊಂಡಿರಿ ನೀವು?

ದ್ರೋಣ: ನಾನೆ ಕೃಪೀ!

ಕೃಪೀ: ಇನ್ಯಾರು, ನಾನೆ? ನೀವು ಖಂಡಿತವಾಗಿಯೂ ನಿಮ್ಮ ಒರಟುತನ ತೋರಿಸಿರಬೇಕು. ನಿಮ್ಮ ವಿದ್ವತ್ತು ಮತ್ತು ಆಚಾರ್ಯತ್ವವನ್ನು ಕುರಿತಂತೆ ಅವನೆದುರಿಗೆ ಬಂದು ದೀರ್ಘ ಭಾಷಣ ಮಾಡಿರಬಹುದು.

ದ್ರೋಣ: ಇಲ್ಲ ಕೃಪೀ! ನಾನು ಹಾಗೆಲ್ಲ ಏನೂ ಹೇಳಲಿಲ್ಲ. ಜೀವನದಲ್ಲಿ ಇಷ್ಟೊಂದು ತಕ್ಕುನಾದ ಭಾಷೆ ನನ್ನ ಬಾಯಿಂದ ಯಾವೊತ್ತೂ ಬಂದಿರಲಿಲ್ಲ. ಇದಾದ ಮೇಲೂ ಅಪಮಾನ! ಕೃಪೀ ನನ್ನ ರೋಮ ರೋಮವೂ ಹತ್ತಿ ಉರೀತಾ ಇದೆ. ಒಂದೇ ಒಂದು ಬಾಣದಿಂದ ಅವನ ತಲೆ ಕತ್ತರಿಸಿ ಹಾಕಿಬಿಡಲೆ ಅಂತ ಅನ್ನಿಸುತ್ತೆ.

ಕೃಪೀ: ಸೇಡು ತೀರಿಸಿಕೊಂಡು ಬಿಟ್ಟಿರಿ! ತಮ್ಮ ಏಕಮಾತ್ರ ಪುತ್ರನಿಗೆ ಹಾಲಿನ ಒಂದು ತೊಟ್ಟೂ ಕೊಡಿಸೋದಕ್ಕೆ ಆಗದೆ ಇರೋರ ಬಾಯಿಂದ ಇಂಥ ಸೇಡಿನ ಭಾಷೆಯ ವಾಚಾಳತ್ವ!

ದ್ರೋಣ: ನಿನಗೆ ನನ್ನ ಶಕ್ತಿ ಗೊತ್ತಿಲ್ಲ.

ಕೃಪೀ: ಹಾಗಾದರೆ ಬೇರೆ ಯಾರಿಗೆ ಗೊತ್ತಿದೆ?

ದ್ರೋಣ: ಈಗ ನಾನು ಕೇವಲ ಯುದ್ಧದ ಭಾಷೇನೇ ಮಾತಾಡುವಂಥ ಒಂದು ಪೀಳಿಗೆ ತಯಾರುಮಾಡ್ತೀನಿ.

ಕೃಪೀ: ಆದರೆ ಯಾರಿಗೆ ಹೇಳಿಕೊಡ್ತೀರಿ? ಯಾರಾದರೂ ವಿದ್ಯಾರ್ಥಿ ಇದ್ದಾನಾ? ರಾಜ ಪ್ರಭುತ್ವವನ್ನು ಹಾಗೇ ಸುಮ್ಮನೆ ನಾಶಮಾಡುವುದಕ್ಕಾಗೋದಿಲ್ಲ.

ದ್ರೋಣ: ನೀನು ಏನು ಹೇಳಬೇಕೂಂತಿದ್ದೀಯ?

ಕೃಪೀ: ಅಪಮಾನದ ಗುಟುಕನ್ನು ನುಂಗಿಕೊಂಡಿರಿ ಅಂತ ನಾನೆಲ್ಲಿ ಹೇಳ್ತೀನಿ. ದ್ರುಪದನ ವಿರುದ್ಧ ಖಂಡಿತವಾಗಿಯೂ ಸೇಡು ತೀರಿಸಿಕೊಳ್ಳಿ. ಆದರೆ ಆತುರದಲ್ಲಿ ಅಲ್ಲ. ಯೋಜನೆ ತಯಾರಿಸಿ. ಅವನ ಜಾತಿಯ ಜನಗಳಿಂದಲೇ ಅವನನ್ನು ನಾಶಮಾಡಿಸಿ. [ಹೊರಗಡೆ ಕೋಲಾಹಲ. ರಥ ನಿಂತ ಶಬ್ದ. ಕುದುರೆಗಳ ಹೇಷಾರವ].

ದ್ರೋಣ: ಯಾರು ನೋಡು ಸ್ವಲ್ಪ...

ಕೃಪೀ: (ನೋಡುವುದನ್ನು ಅಭಿನಯಿಸಿ) ಯಾರೋ ರಾಜಪುರುಷನಂತೆ ಕಾಣುತ್ತಾನೆ.

ದ್ರೋಣ: ಹೌದು. ಅಯ್ಯೋ; ಇದೋ ಭೀಷ್ಮರು ಬರುತ್ತಿದ್ದಾರೆ.

ಕೃಪೀ: ಭೀಷ್ಮರು ನಮ್ಮ ಮನೆಗೆ?

ದ್ರೋಣ: ಆಶ್ಚರ್ಯ !

ಕೃಪೀ: ನೋಡಿ, ಎಂಥಾ ಒಂದು ಯೋಗಾ ಯೋಗ! ಪ್ರಭುತ್ವದೊಂದಿಗೆ ಕೈಜೋಡಿಸುವಂತೆ ಹೇಳ್ತಾ ಇದ್ದೆ. ಈಗ ಸ್ವಯಂ ಪ್ರಭುತ್ವವೇ ನಡೆದು ಬರುತ್ತಿದೆ. ವಿವೇಕದಿಂದ ನಡೆದುಕೊಳ್ಳಿ. ಬಹುಶಃ ನಿಮ್ಮ ಪ್ರತಿಜ್ಞೆ ಈಡೇರ...... [ಭೀಷ್ಮನ ಪ್ರವೇಶ. ದ್ರೋಣನಿಗೆ ಬಾಗಿ ನಮಸ್ಕರಿಸುತ್ತಾನೆ].

ದ್ರೋಣ: ತಾವು ಇಲ್ಲಿ!

ಭೀಷ್ಮ: ತಮ್ಮಂಥ ಆಚಾರ್ಯರ ದರ್ಶನದ ಲಾಭವನ್ನು ನಾನು ಪಡೆಯಬಾರದೆ?

ದ್ರೋಣ: ಆದರೂ......

ಭೀಷ್ಮ: ಆಚಾರ್ಯದ್ರೋಣರೆ! ಈ ಹೊತ್ತಿನ ವರೆಗೂ ತಮ್ಮ ಧುನುರ್ವಿದ್ಯೆಯ ಬಗ್ಗೆ ಬರೀ ಕೇಳಿದ್ದೆ, ಆದರೆ ಈ ದಿನ ನನ್ನ ಕಣ್ಣಾರೆ ನೋಡಿದೆ. ತಾವು ಧನ್ಯರು!

ದ್ರೋಣ: ಅಂಥದ್ದೇನನ್ನು ನೋಡಿದಿರಿ ತಾವು?

ಭೀಷ್ಮ: ಧನುರ್ವಿದ್ಯೆಯ ಇಂಥ ಚಮತ್ಕಾರ! ಅದರ ಕಲ್ಪನೆಯನ್ನೂ ನಾನು ಮಾಡಿರಲಿಲ್ಲ.

ಕೃಪೀ: ಎಂಥ ಚಮತ್ಕಾರ ?

ಭೀಷ್ಮ: ಬಾವಿಯಲ್ಲಿ ಬಿದ್ದಿದ ಚೆಂಡನ್ನು ಆಚಾರ್ಯರು ಬಾಣಗಳ ಸಹಾಯದಿಂದ ಹೊರ ತೆಗೆದರು. ಪಾಂಡು ಮತ್ತು ಧೃತರಾಷ್ಟ್ರನ ಮಕ್ಕಳು ಈ ಘಟನೆಯ ವಿಷಯ ತಿಳಿಸಿದಾಗ, ನಾನು ತುಂಬ ಪ್ರಭಾವಿತಗೊಂಡೆ.

ದ್ರೋಣ: ಆದರೆ ಇದು ಅತ್ಯಂತ ಸಾಧಾರಣವಾದ ಸಂಗತಿ.

ಭೀಷ್ಮ: ಈ ಚಮತ್ಕಾರ ನನ್ನನ್ನು ಬಹಳ ಮರುಳುಗೊಳಿಸಿದೆ.

ದ್ರೋಣ: ನನ್ನಿಂದ ತಮಗೇನಾಗಬೇಕಾಗಿದೆ?

ಭೀಷ್ಮ: ತಾವು ದಯಮಾಡಿಸಿ ರಾಜಕುಮಾರರ ಆಚಾರ್ಯ ಸ್ಥಾನವನ್ನಲಂಕರಿಸಬೇಕು.

ದ್ರೋಣ: ನಾನು ರಾಜಕುಮಾರರ ಆಚಾರ್ಯ!

ಭೀಷ್ಮ: ಇದರಲ್ಲಿ ತೊಂದರೆ ಏನಿದೆ?

ದ್ರೋಣ: ನನಗೆ ಸ್ವಲ್ಪ ಯೋಚನೆ ಮಾಡುವುದಕ್ಕೆ ಅವಕಾಶ ಕೊಡಿ.

ಕೃಪೀ: (ಮಧ್ಯದಲ್ಲಿಯೇ) ಇವರು ವಿನಯಕ್ಕೆ ಹಾಗೆ ಹೇಳ್ತಿದ್ದಾರೆ. ತಾವು ಹೇಳಿದ್ದು ಇವರಿಗೆ ಒಪ್ಪಿಗೆ ಇದೆ.

ಭೀಷ್ಮ: ಹಾಗಾದರೆ ನಾನೀಗ ನಿಶ್ಚಿಂತನಾದೆ, ಆಚಾರ್ಯ. ಹೋಗಿ ತಮ್ಮ ಸ್ವಾಗತಕ್ಕೆ ವ್ಯವಸ್ಥೆ ಮಾಡುವೆ.

ದ್ರೋಣ: ಆದರೆ ಭೀಷ್ಮರೆ....

ಕೃಪೀ: (ಮಧ್ಯದಲ್ಲೇ) ಇವರ ವಿಷಯ ನನಗೆ ಬಿಡಿ. ಇವರು ನಾಡಿದ್ದು ಗುರುಪೂರ್ಣಿಮೆಯ ಹೊತ್ತಿಗೆ ಖಂಡಿತಾ ರಾಜಧಾನಿಯಲ್ಲಿರುತ್ತಾರೆ.

ಭೀಷ್ಮ: ತಾವು ಒಳ್ಳೆಮಾತು ಹೇಳಿದಿರಿ. ದೀಕ್ಷೆ ನೀಡಲು ಗುರುಪೂರ್ಣಿಮೆಗಿಂತ ಒಳ್ಳೆಯ ದಿನ ಎಲ್ಲಿ ಸಿಗುತ್ತೆ. ಹಾಗಾದರೆ ಆಚಾರ್ಯ ತಮ್ಮನ್ನು ಕರೆತರಲು ರಥ ಬರುತ್ತದೆ. ನಾನು ತಮ್ಮ ನಿರೀಕ್ಷೆಯಲ್ಲಿರುತ್ತೇನೆ. [ಭೀಷ್ಮ ಹೊರಟು ನಿಲ್ಲುತ್ತಾನೆ. ದ್ರೋಣ ಮುಂದೆ ಬಂದು ಏನನ್ನೋ ಹೇಳ ಬಯಸುತ್ತಾನೆ. ಆದರೆ ಕೃಪೀ ತಡೆಯುತ್ತಾಳೆ].

ದ್ರೋಣ: ಕೃಪೀ ನೀನು ನನಗೆ ಸ್ವಲ್ಪ ಯೋಚನೆ ಮಾಡೊದಕ್ಕೂ ಅವಕಾಶ ಕೊಡಲಿಲ್ಲ.

ಕೃಪೀ: ಯಾಕೆ ಅಂದರೆ, ನೀವು ಯೋಚನೆ ಮಾಡಿದ ಮೇಲೆ ಒಪ್ಪಿಕೊಳ್ಳುತ್ತಿರಲಿಲ್ಲ.

ದ್ರೋಣ: ಆದರೆ ನಿನಗೆ ಇದರ ಪರಿಣಾಮ ಏನು ಅಂತ ಗೊತ್ತಿದೆಯೆ?

ಕೃಪೀ: ಗೊತ್ತಿದೆ ದವಸ, ಧಾನ್ಯಗಳ ಮತ್ತು ಬಟ್ಟೆಯ ಸಮಸ್ಯೆ ಶಾಶ್ವತವಾಗಿ ಇಲ್ಲದ ಹಾಗೆ ಆಗುತ್ತೆ. ಸ್ವಲ್ಪ ಮರ್ಯಾದೆಯಿಂದ ಬದುಕ ಬಹುದು. (ಬಿಡುವು) ನೀವು ದ್ರುಪದನ ವಿರುದ್ಧ ಸೇಡೂ ತೀರಿಸಿಕೊಳ್ಳಬಹುದು.

ದ್ರೋಣ : ಹೌದು, ದ್ರುಪದನ ವಿರುದ್ಧ ಸೇಡು. ದ್ರುಪದನನ್ನು ನಾಶ ಮಾಡಿದ ಹೊರತು ನಾನು ಶಾಂತಿಯಿಂದ ಜೀವಿಸಿರುವುದಕ್ಕೆ ಸಾಧ್ಯವಿಲ್ಲ.

ಕೃಪಿ: ಈಗ ನಿಮ್ಮ ಶಿಷ್ಯರಾಗುವವರು ಈ ದೇಶದ ಭಾವೀ ಶಾಸಕರು, ಪ್ರಭುಗಳು. ಅವರ ಸೈನ್ಯವನ್ನು ಸಿದ್ಧಪಡಿಸಿ ದ್ರುಪದನನ್ನು ನೀವು ಧೂಳೀಪಟ ಮಾಡಬಹುದು.

ದ್ರೋಣ: ಹೂಂ. ನನ್ನ ವಿಧಿ ಅದೇ ಆಗಿದ್ದರೆ ನಾನು ತಾನೆ ಏನು ಮಾಡಲಿ. (ಬಿಡುವು) ಕೃಪೀ ನಾನು ಸಿದ್ಧ. [ನಿಧ-ನಿಧಾನವಾಗಿ ಕತ್ತಲೆ ಆವರಿಸುತ್ತದೆ ಕೆಲವು ಕ್ಷಣಗಳಲ್ಲಿ ನಾಯಿಗಳು ಬೊಗಳುವ ಶಬ್ದ ಸಮೀಪಿಸುತ್ತದೆ. ಕಾಡಿನಲ್ಲಿ ಕೆಲವು ಮಂದಿ ಓಡುತ್ತಿರುವ ಸದ್ದು].

ಅರ್ಜುನ ದನಿ: ಗುರುದೇವ, ಅಲ್ಲಿ ನೋಡಿ, ನಾಯಿಗಳು ಬೊಗಳುತ್ತಿವೆ, ಆ ಕಡೆ ಜಿಂಕೆಗಳ ಹಿಂಡು ನೋಡಿ.

ದ್ರೋಣರ ದನಿ: ಎಚ್ಚರಿಕೆಯಿಂದ ಗುರಿಯಿಡು ಅರ್ಜುನ್. ಒಂದೂ ಜಿಂಕೆ ತಪ್ಪಿಸಿಕೊಂಡು ಓಡಿಹೋಗಕೂಡದು.

ಅರ್ಜುನ ದನಿ: ಗುರುದೇವ, ನಮ್ಮ ಬೇಟೆ ನಾಯಿಗಳ ಮೇಲೆ ಎಲ್ಲಿಂದಲ್ಲೋ ಬಾಣಗಳು ಬಂದು ತಾಗುತ್ತಿವೆ.

ದ್ರೋಣರದನಿ: ಯಾರಾಗಿರಬಹುದು?

ಅರ್ಜುನ ದನಿ: ಯಾರೋ ಗೊತ್ತಿಲ್ಲ... [ನಾಯಿಗಳು ಬೊಗಳುವುದು ನಿಂತು ಹೋಗುತ್ತದೆ] ಗುರುದೇವ, ನಾಯಿಗಳು ಬೊಗಳುವುದು ನಿಂತು ಹೋಯಿತು. ಅವುಗಳ ಬಾಯಿ ಹೇಗಿದೆ ಅಂದರೆ ಯಾರಾದರೂ ಬಾಣಗಳಿಂದ ಅವುಗಳ ಬಾಯನ್ನು ಹೊಲೀತಾ ಇದ್ದಾರೇನೋ ಎನ್ನುವ ಹಾಗೆ

ದ್ರೋಣರ ದನಿ: ಆದರೆ, ಧನುರ್ವಿದ್ಯೆಯ ಇಂಥಾ ದೊಡ್ಡ ಚಮತ್ಕಾರ ಮಾಡೋಂಥೋರು ಇಲ್ಲಿ ಯಾರಿದ್ದಾರು? ನಡಿ ಮುಂದೆ ಹೋಗಿ ನೋಡೋಣ. [ಕಾಡಿನಲ್ಲಿ ಓಡುವ ಶಬ್ದ, ಗಲಾಟೆ, ನಿಧಾನವಾಗಿ ರಂಗದ ಮಧ್ಯಭಾಗದ ಮೇಲೆ ಬೆಳಕು ವಿಸ್ತರಿಸುತ್ತಾ ಹೋಗುತ್ತದೆ. ಏಕಲವ್ಯ ಬಿಲ್ಲಿಗೆ ಬಾಣವನ್ನು ಹೂಡಿದ್ದಾನೆ. ದ್ರೋಣಾಚಾರ್ಯ ಮತ್ತು ಅರ್ಜುನ ಬರುತ್ತಾರೆ]

ದ್ರೋಣ: ಯಾರು ನೀನು?

ಏಕಲವ್ಯ: (ಬಾಣವನ್ನು ಇಳಿಸಿ ಅವರಿಗೆ ನಮಸ್ಕರಿಸುತ್ತಾನೆ) ಗುರುದೇವ, ತಾವು!

ದ್ರೋಣ: (ಆಶ್ಚರ್ಯದಿಂದ) ನನ್ನನ್ನು ಗುರುದೇವ ಅಂತ ಏಕೆ ಕರೀತೀಯ?

ಏಕಲವ್ಯ: ತಾವು ನನ್ನ ಗುರುದೇವ, ಅದಕ್ಕಾಗಿ.

ದ್ರೋಣ: ಆದರೆ ನಾನು ನಿನ್ನನ್ನು ನೋಡ್ತಾ ಇರೋದು ಇದೇ ಮೊದಲನೇ ಸಲ.

ಏಕಲವ್ಯ: ಮೊದಲನೇ ಸಲ ಅಲ್ಲ ಗುರುದೇವ, ಎರಡನೇ ಸಲ.

ದ್ರೋಣ: ಸುಳ್ಳು ಹೇಳ್ತಿದ್ದಿ.

ಏಕಲವ್ಯ: ನಾನು ಯಾತಕ್ಕೆ ಸುಳ್ಳು ಹೇಳಲಿ. ಹತ್ತು ವರ್ಷದ ಹಿಂದೆ ನಾನು ನಿಮ್ಮನ್ನು ಭೇಟಿ ಮಾಡಿರಲಿಲ್ಲವೆ? ನಾನು ನಿಮ್ಮ ಶಿಷ್ಯನಾಗಬೇಕೂಂತ ಬಯಸಿದ್ದೆ.

ದ್ರೋಣ: ಮತ್ತೆ?

ಏಕಲವ್ಯ: ತಾವು ನನ್ನ ಕೋರಿಕೆಯನ್ನು ತಿರಸ್ಕರಿಸಿ ಬಿಟ್ಟಿರಿ.

ದ್ರೋಣ: ಸರಿಯಾದದ್ದನ್ನೇ ಮಾಡಿದ್ದೆ. ನನ್ನ ವಿದ್ಯೆ ಇರುವುದು ಕೇವಲ ಬ್ರಾಹ್ಮಣರು ಮತ್ತು ಕ್ಷತ್ರಿಯರಿಗೆ ಮಾತ್ರ.

ಏಕಲವ್ಯ: ಆದರೆ ಯೋಗ್ಯತೆ ಮತ್ತು ಪ್ರತಿಭೆ?

ದ್ರೋಣ: ಇವೆರಡಕ್ಕಿಂತಲೂ ವ್ಯವಸ್ಥೆ ದೊಡ್ಡದು.

ಏಕಲವ್ಯ: ಇದು ನಿಜವೆ?

ದ್ರೋಣ: ಹೌದು, ನನ್ನ ವೈಯಕ್ತಿಕ ಅನುಭವವೂ ಇದನ್ನೇ ಹೇಳುತ್ತದೆ.

ಏಕಲವ್ಯ: ಆದರೆ ಹುಟ್ಟಿನ ಮೇಲೆ ನನ್ನದೇನೂ ಅಧಿಕಾರವಿರಲಿಲ್ಲ. ಹುಟ್ಟುವ ಮುನ್ನವೇ ನಮ್ಮ ತಂದೆ–ತಾಯಿಗಳನ್ನು ನಿರ್ಧರಿಸುವ ಅನುಕೂಲವನ್ನು ನಿಯತಿ ನೀಡುತ್ತದೆಯೆ?

ದ್ರೋಣ: ಆದರೆ ಮನುಷ್ಯನ ಹುಟ್ಟು ಒಂದು ಅನಪೇಕ್ಷಿತ ವ್ಯವಸ್ಥೆಯಲ್ಲಿ ಅಗುತ್ತದಾದರೆ ನಾನೇನು ಮಾಡಲಿ?

ಏಕಲವ್ಯ: ತಾವು ಅಂತರಂಗದಲ್ಲಿ ಈ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟಿದ್ದೀರಿ?

ದ್ರೋಣ: ಯಾವ ವ್ಯವಸ್ಥೆಯನ್ನು ಮುರಿಯಲಾಗುವುದಿಲ್ಲವೋ ಆ ವ್ಯವಸ್ಥೆಯಲ್ಲಿ ನಂಬಿಕೆಯಿಟ್ಟುಕೊಂಡೇ ಬದುಕಲು ಸಾಧ್ಯ. (ಬಿಡುವು) ಆದರೆ ಇಷ್ಟೊಂದು ವಿದ್ಯೆಯನ್ನು ಕಲಿತದ್ದಾದರೂ ಎಲ್ಲಿಂದ? ಇಷ್ಟೊಂದು ವಿದ್ಯೆ ನನ್ನ ಪ್ರಿಯ ಶಿಷ್ಯ ಅರ್ಜುನನಿಗೂ ತಿಳಿಯದು.

ಏಕಲವ್ಯ: ಇದೆಲ್ಲವೂ ತಮ್ಮ ಕೃಪೆ, ಗುರುದೇವ!

ದ್ರೋಣ: ನನಗೆ ವ್ಯರ್ಥವಾಗಿ ಮಹತ್ವ ಕೊಡುತ್ತಿದ್ದೀ.

ಏಕಲವ್ಯ: ಇಲ್ಲ ಗುರುದೇವ! ನಾನು ತಮ್ಮ ಒಂದು ಮೂರ್ತಿಯನ್ನು ಮಾಡಿದೆ. ಆ ಮೂರ್ತಿಯ ಚರಣತಲದಲ್ಲಿ ಕುಳಿತು ಅಭ್ಯಾಸ ಮಾಡುತ್ತಿದ್ದೆ.

ದ್ರೋಣ: ಗುರು ಇಲ್ಲದೆಯೂ ಇಷ್ಟೊಂದು ಜ್ಞಾನ! ನೀನು ಧನ್ಯ ಏಕಲವ್ಯ!

ಅರ್ಜುನ: ಇದು ಸಾಧ್ಯವೆ ಗುರುದೇವ?

ದ್ರೋಣ: ಯಾವುದನ್ನು ಕಣ್ಣಾರೆ ನೋಡ್ತಾ ಇದ್ದೀನಿ, ಅದನ್ನು ಸುಳ್ಳು ಅಂತ ಹೇಗೆ ಹೇಳೋದಕ್ಕೆ ಸಾಧ್ಯ?

ಏಕಲವ್ಯ: ತಮ್ಮ ಆಶೀರ್ವಾದದಿಂದ ನನ್ನ ವಿದ್ಯೆ ಸಾರ್ಥಕವಾಯಿತು. ತಾವು ಈ ವನವಾಸಿ ಶಿಷ್ಯನಿಂದ ಗುರುದಕ್ಷಣೆ ಕೇಳಿ.

ದ್ರೋಣ: ಆದರೆ ಯಾವ ಆಧಾರದ ಮೇಲೆ? ನಾನು ನಿನಗೆ ಕೊಟ್ಟಿರುವುದಾದರೂ ಏನನ್ನು?

ಏಕಲವ್ಯ: ಪ್ರೇರಣೆ.

ದ್ರೋಣ: ಇದು ನಿನ್ನ ವಿಷಯ.

ಏಕಲವ್ಯ: ಏನಾದರೂ ಸರಿ, ನಾನು ತಮ್ಮನ್ನು ಗುರುವೆಂದು ಅಂಗೀಕರಿಸಿದ್ದೇನೆ. ನಾನು ಬಹಳ ನಾಲಾಯಕ್ ಶಿಷ್ಯನಲ್ಲ ಎಂದು ಸಿದ್ಧಪಡಿಸಿದ್ದೇನೆ. [ದ್ರೋಣ ಯೋಚಿಸುತ್ತಿದ್ದಾನೆ. ಅರ್ಜುನನ ಕಡೆ ಅರ್ಥಪೂರ್ಣ ನೋಟದಿಂದ ನೋಡುತ್ತಾನೆ. ನಿಧ-ನಿಧಾನವಾಗಿ ಅವನ ಮುಖ ಕಠೋರ ಭಾವ ತಾಳುತ್ತದೆ]

ಏಕಲವ್ಯ: (ದ್ರೋಣ ಸುಮ್ಮನಿದ್ದುದನ್ನು ನೋಡಿ) ಏನು ನನ್ನ ಗುರುದಕ್ಷಿಣೆಯನ್ನೂ ಸ್ವೀಕರಿಸುವುದಿಲ್ಲವೆ?

ದ್ರೋಣ: ಏಕಿಲ್ಲ, ಏಕಿಲ್ಲ! ಈಗ ನೀನು ಹಠ ಹಿಡಿಯುತ್ತ ಇದ್ದೀಯ ಅಂದಮೇಲೆ (ಬಿಡುವು) ಆದರೆ ನಿನಗೆ ಕೊಡಲು ಸಾಧ್ಯವೆ?

ಏಕಲವ್ಯ: ತಾವು ಕೇಳಿ ಮತ್ತೆ.

ದ್ರೋಣ: ಇರಲಿ ಬಿಡು, ನಿನಗೆ ಕೊಡಲಿಕ್ಕೆ ಆಗುವುದಿಲ್ಲ.

ಏಕಲವ್ಯ: ಯಾಕೆ ಕೊಡಲಿಕ್ಕೆ ಆಗುವುದಿಲ್ಲ? ನಾನು ಪಾಂಡು ಅಥವಾ ಕೌರವರ ಮಗ ಆಗದೆ ಇರಬಹುದು, ಆದರೆ ವ್ಯಾಧರಾಜನ ಮಗನಂತೂ ಹೌದು. ತಾವು ಹೇಳಿಬಿಟ್ಟರೆ, ಅವರ ಪೂರ್ತಿ ರಾಜ್ಯವನ್ನು ತಮ್ಮ ಚರಣಗಳಲ್ಲಿ ಇಟ್ಟು ಬಿಡುತ್ತೇನೆ.

ದ್ರೋಣ: ನನಗೆ ಹಣ ಬೇಕಿಲ್ಲ.

ಏಕಲವ್ಯ: ಹಾಗಾದರೆ?

ದ್ರೋಣ: ನನ್ನ ಗುರುದಕ್ಷಿಣೆ ನಿನಗೆ ಬಹಳ ದುಃಖವನ್ನುಂಟು ಮಾಡಲಿದೆ.

ಏಕಲವ್ಯ: ಪ್ರಾಣಕ್ಕಿಂತ ಹೆಚ್ಚಿನದನ್ನಂತೂ ತೆಗೆದುಕೊಳ್ಳಲ್ಲ!

ದ್ರೋಣ: ಹಾಗಾದರೆ ಕೇಳು, ನನಗೆ ನಿನ್ನ ಬಲಗೈ ಹೆಬ್ಬೆರಳು ಬೇಕು.

ಏಕಲವ್ಯ : ತಾವು ಇದೇನನ್ನು ಕೇಳಿದಿರಿ? ಹೆಬ್ಬೆರಳನ್ನು ಕೊಟ್ಟ ಮೇಲೆ ನಾನು ಏನಂತ ಉಳಿದಿರುತ್ತೇನೆ?

ದ್ರೋಣ: ಮತ್ತೆ ಗುರುದಕ್ಷಿಣೆ ಕೇಳಿ ಎಂದು ಏಕೆ ಹೇಳಿದೆ? ನಾನು ನಿನಗೆ ಎಚ್ಚರಿಕೆ ಕೊಟ್ಟಿರಲಿಲ್ಲವೇನು?

ಏಕಲವ್ಯ: ಗುರುದಕ್ಷಿಣೆಯನ್ನಂತೂ ನಾನು ಕೊಟ್ಟೇ ಕೊಡುತ್ತೇನೆ ಆಚಾರ್ಯ. ಆದರೆ ಒಂದು ಪ್ರಶ್ನೆ ಕೇಳಲೆ?

ದ್ರೋಣ: ಎಂಥ ಪ್ರಶ್ನೆ?

ಏಕಲವ್ಯ: ಈ ಅರ್ಜುನನನ್ನು ಅವನ ಬಲಗೈಯನ್ನು ನೀಡುವಂತೆ ಎಂದಾದರೂ ತಾವು ಕೇಳಲು ಸಾಧ್ಯವೆ? ಭೀಮನನ್ನು ಅವನ ಭುಜ ನೀಡುವಂತೆ

ಕೇಳಲು ಸಾಧ್ಯವೆ? (ದ್ರೋಣಚಾರ್ಯರು ಮೌನ) ಒಂದು ವೇಳೆ ತಾವು ಕೇಳಿದರೂ ಸಿಕ್ಕುವುದಿಲ್ಲ. (ಬಿಡುವು) ಹಾಗಿದ್ದ ಮೇಲೆ ನನ್ನನ್ನು ಮಾತ್ರ ಯಾತಕ್ಕೆ ತಾವು ಹೆಬ್ಬೆರಳು ಕೇಳಿದಿರಿ? ತಾವು ತಮ್ಮ ಶಿಷ್ಯನ ಕೊಲೆ ಮಾಡ್ತಾ ಇಲ್ಲವೆ?

ದ್ರೋಣ: ಹಾಗಾದರೆ ನೀನು ಕೊಡಬೇಡ. ನಾನು ಯಾವುದೇ ರೀತಿಯ ಒತ್ತಾಯ ಮಾಡ್ತಾಯಿಲ್ಲ.

ಏಕಲವ್ಯ: ಅಂಥದ್ದೇನಿಲ್ಲ. ಗುರುದಕ್ಷಿಣೆಯನ್ನಂತೂ ನಾನು ಕೊಟ್ಟೇ ತೀರುತ್ತೇನೆ. (ಬಿಡುವು) ಪೂಜಾಸಾಮಗ್ರಿ ತೆಗೆದುಕೊಂಡು ಈಗಲೇ ಬರುತ್ತೇನೆ. [ಏಕಲವ್ಯ ಬಹಳ ವೇಗವಾಗಿ ಹೋಗುತ್ತಾನೆ. ಸ್ವಲ್ಪ ಹೊತ್ತಿನ ತನಕ ಅರ್ಜುನ ಮತ್ತು ದ್ರೋಣ ಇಬ್ಬರೂ ಮೌನ]

ಅರ್ಜುನ: ಗುರುದೇವ ತಮ್ಮ ಈ ಕ್ರೌರ್ಯ ನನಗೆ ಅರ್ಥವಾಗುತ್ತಿಲ್ಲ.

ದ್ರೋಣ: ಏಕೆ?

ಅರ್ಜುನ: ಏಕಲವ್ಯವನ್ನು ಹೆಬ್ಬೆರಳು ಕೊಡುವಂತೆ ಏಕೆ ಕೇಳಿದಿರಿ?

ದ್ರೋಣ: ಧರ್ಮದ ವ್ಯವಸ್ಥೆಗಾಗಿ. ಶೂದ್ರರು ಮತ್ತು ವನವಾಸಿಗಳಿಗೆ ಧನುರ್ವಿದ್ಯೆಯ ಶಿಕ್ಷಣ ಕೊಡಲಾಗುವುದಿಲ್ಲ.

ಅರ್ಜುನ: ಆದರೆ ತಾವು ಶಿಕ್ಷಣ ಎಲ್ಲಿ ನೀಡಿದಿರಿ? ತಮಗೆ ಗುರುದಕ್ಷಿಣೆ ಕೊಡುವುದೇ ಒಂದು ಅಪರಾಧವಾಯಿತೇನು?

ದ್ರೋಣ: ಏಕಲವ್ಯನ ಹೆಬ್ಬೆರಳನ್ನು ಹಾಗೆಯೇ ಉಳಿಸುವುದರ ಅರ್ಥ ಗೊತ್ತಿದೆಯೇನು ನಿನಗೆ? ಧನುರ್ವಿದ್ಯೆಯ ಮೇಲೆ ಅವನಿಗೆ ಅಧಿಕಾರ ಬಂದುಬಿಡುತ್ತೆ. ಕ್ರಮೇಣ ಅಧಿಕಾರ ಅವನ ಜಾತಿಯದಾಗಿಬಿಡುತ್ತದೆ. (ಬಿಡುವು) ಪ್ರಬಲರಾದ ಮೇಲೆ ಇವರು ಕ್ಷತ್ರಿಯರೊಂದಿಗೆ ಸ್ಪರ್ಧಿಸುವರು. ಮತ್ತು ಅದರ ಪರಿಣಾಮ ವರ್ಣಾಶ್ರಮ ಧರ್ಮಕ್ಕೆ ವಿಪತ್ತು. (ಬಿಡುವು) ಅವನ ಹೆಬ್ಬೆರಳನ್ನು ಕಿತ್ತುಕೊಂಡು ಈ ಎಲ್ಲ ಸಂಭಾವ್ಯತೆಗಳನ್ನು ಶಾಶ್ವತವಾಗಿ ಕೊನೆಗೊಳಿಸುತ್ತಿದ್ದೇನೆ ಗೊತ್ತಾಯಿತೆ?

ಅರ್ಜುನ: ಆದರೆ ಇದು ಅನ್ಯಾಯ ಗುರುದೇವ. [ಬಿಡುವು] ತಾವು ನೋಡಲಿಲ್ಲವೇನು ಅವನ ಕಣ್ಣುಗಳಲ್ಲಿ ಕ್ಷತಿಯರ ವಿಷಯಕ್ಕೆ ಎಷ್ಟೊಂದು ತಿರಸ್ಕಾರ ತುಂಬಿತ್ತು ಅಂತ! (ಬಿಡುವು) ತಾವು ಒಂದು ಮಹಾನ್ ಪ್ರತಿಭೆ ಅರಳುವುದಕ್ಕೆ ಮುನ್ನವೇ ತುಳಿದು ಹಾಕಿ ಬಿಟ್ಟಿರಿ.

ದ್ರೋಣ: ಹೌದು ತುಳಿದು ಹಾಕಿ ಬಿಟ್ಟೆ. ಅವನು ನನ್ನ ಅಹಂಕಾರಕ್ಕೆ ಏಕೆ ಸವಾಲು ಹಾಕಬೇಕಿತ್ತು?

ಅರ್ಜುನ: ಎಂಥ ಸವಾಲು?

ದ್ರೋಣ: ನನ್ನ ಸಹಾಯವಿಲ್ಲದೆಯೂ ತಾನೊಬ್ಬ ಮಹಾನ್ ಬಿಲ್ಗಾರನಾಗಬಲ್ಲೆ ಎಂಬುದನ್ನು ಸಾಧಿಸಲು ಹೊರಟಿದ್ದ. (ಬಿಡುವು) ನಾಳೆ ಇತಿಹಾಸ ನನ್ನ ಅಪೂರ್ಣತೆಗೆ ನಗುತ್ತಿತ್ತು...

ಅರ್ಜುನ: ಈಗಲಾದರೂ ನಾಳೆ ಇತಿಹಾಸ ನಿಮ್ಮ ವಿಚಾರದಲ್ಲಿ ನಗಲಿದೆ. ಎಲ್ಲಿ ಜಾತಿ ಮತ್ತು ವ್ಯವಸ್ಥೆಯ ಹೆಸರಿನಲ್ಲಿ ಪ್ರತಿಭೆಯನ್ನು ತುಳಿಯಲಾಗುತ್ತದೋ ಅಲ್ಲೆಲ್ಲಾ ಜನ ನಿಮ್ಮನ್ನೇ ನೆನಪಿಸಿಕೊಳ್ಳುತ್ತಾರೆ. ಇತಿಹಾಸ ನಿಮ್ಮನ್ನೆಂದಿಗೂ ಕ್ಷಮಿಸುವುದಿಲ್ಲ.

ದ್ರೋಣ: (ಆಶ್ಚರ್ಯದಿಂದ) ಇದನ್ನು ನೀನು ಹೇಳ್ತಾ ಇದ್ದೀಯಾ? ಕೊನೇಪಕ್ಷ ನೀನಂತೂ ಹೇಳಬಾರದು.

ಅರ್ಜುನ: ಆದರೆ ಏಕೆ?

ದ್ರೋಣ: ಏಕೆಂದರೆ ಇದೇ ಕಾಡ ಮನುಷ್ಯ ಮುಂದೆ ನಿನ್ನ ದಾರಿಗೆ ಬಹಳ ದೊಡ್ಡ ಕಂಟಕನಾಗುತ್ತಾನೆ.

ಅರ್ಜುನ: ಕಂಟಕನಾಗಲು ಬಿಡಬೇಕಿತ್ತು. ಆಗ ಅವನನ್ನು ಗೆಲ್ಲಲು ಇನ್ನೂ ಹೆಚ್ಚಿನ ವಿದ್ಯೆಯನ್ನು ಕಲಿಯುತ್ತಿದ್ದೆ.

ದ್ರೋಣ: ಇಲ್ಲ ಅರ್ಜುನ! ಅವನ ಪ್ರತಿಭೆ ಸ್ವಯಂಭು. ಅದರ ಮುಂದೆ ನೀನು ನಿಲ್ಲಲಾರೆ.

ಅರ್ಜುನ: ತಾವು ಇರಬೇಕಾದರೆ...

ದ್ರೋಣ: ಹೌದು. ನಾನು ಇರುತ್ತಲೇ ಏಕಲವ್ಯನು ನನಗೂ ನನ್ನ ಮಿತಿ ಏನು ಅಂತ ಪರಿಚಯ ಮಾಡಿಕೊಟ್ಟಿದ್ದಾನೆ.

ಅರ್ಜುನ: ಇದೇ ಕಾರಣಕ್ಕಾಗಿಯೇ ತಾವು....

ದ್ರೋಣ: ನೆನಪಿದೆ. ನಾನು ಒಂದು ದಿನ ಬಹಳ ಸಂತೋಷಗೊಂಡು, ನಿನಗಿಂತ ದೊಡ್ಡ ಬಿಲ್ಗಾರ ಬೇರೆ ಯಾರೂ ಆಗುವುದಿಲ್ಲ ಎಂದು ನಿನಗೆ ಆಶೀರ್ವದಿಸಿದ್ದೆ. ಈ ಹೊತ್ತು ನಾನು ಕೊಟ್ಟ ಮಾತನ್ನು ಈಡೇರಿಸುತ್ತಿದ್ದೇನೆ.

ಅರ್ಜುನ: ಆದರೆ ಇದು ಅನ್ಯಾಯ ಗುರುದೇವ! ಅವನಿಗೂ ಮತ್ತು ನನಗೂ.

ದ್ರೋಣ: ನಿನಗೆ ಏಕೆ?

ಅರ್ಜುನ: ಏಕೆಂದರೆ ನಾನು ಜಗತ್ತಿನ ಅತಿದೊಡ್ಡ ಬಿಲ್ಗಾರನನ್ನು ನನ್ನ ಕಣ್ಣಾರೆ ನೋಡಿ ಬಿಟ್ಟಿದ್ದೇನೆ. (ಬಿಡುವು) ಮುಂದೆಂದಾದರೂ ಯಾರಾದರೂ ನನ್ನನ್ನು ಜಗತ್ತಿನ ಅತಿದೊಡ್ಡ ಬಿಲ್ಗಾರ ಎಂದು ಹೇಳಿದರೆ ಆಗ, ಏಕಲವ್ಯನ ಬಿಸಿರಕ್ತ ತೊಟ್ಟಿಕ್ಕುತ್ತಿರುವ ಅಂಗೈ ನನ್ನನ್ನು ಅಪಹಾಸ್ಯ ಮಾಡುತ್ತದೆ. ಗುರುದೇವ ನಾನು ನನ್ನ ಅಪರಾಧಿ ಪ್ರಜ್ಞೆಯನ್ನು ಎಂದಿಗೂ ಗೆಲ್ಲಲಾರೆ.

ದ್ರೋಣ: ಈ ಮೂರ್ಖ ಮಾತುಗಳನ್ನು ನಿಲ್ಲಿಸು.

ಅರ್ಜುನ: ಗುರುದೇವ ಈಗಲೂ ಕಾಲ ಮಿಂಚಿಲ್ಲ. ಹೋಗಿ ಏಕಲವ್ಯನನ್ನು ತಡೆಯಿರಿ. ನಾನು ಈ ಪಾಪದಲ್ಲಿ ಭಾಗಿಯಾಗಲಾರೆ.

ದ್ರೋಣ: ಸುಮ್ಮನಿರು. ನನಗೆ ನಾನು ಕೊಟ್ಟ ಮಾತನ್ನು ಪೂರ್ಣಗೊಳಿಸಲು ಬಿಡು. ನನ್ನ ರಾಜಕೀಯ ಕರ್ತವ್ಯವನ್ನು ಪಾಲಿಸಲು ಬಿಡು.

ಅರ್ಜುನ: ಬೇಡಿ ಗುರುದೇವ!

ದ್ರೋಣ: ಅಲ್ಲಿ ನೋಡು. ಏಕಲವ್ಯ ಬರುತ್ತಿದ್ದಾನೆ. [ಏಕಲವ್ಯ ಪೂಜಾಸಾಮಗ್ರಿಗಳನ್ನು ತೆಗೆದುಕೊಂಡು ಬರುತ್ತಾನೆ. ಅವನ ಹೆಬ್ಬೆರಳು ಕತ್ತರಿಸಿದ ಅಂಗೈ ರಕ್ತದಿಂದ ಕೆಂಪಾಗಿದೆ. ದ್ರೋಣಾಚಾರ್ಯನಿಗೆ ಅವನು ರಕ್ತದ ತಿಲಕವನ್ನಿಡುತ್ತಾನೆ]

ಏಕಲವ್ಯ: (ಚರಣಗಳ ಮೇಲೆ ಹಣೆಯಿಟ್ಟು) ಇದೋ ತಮ್ಮ ಗುರು ದಕ್ಷಿಣೆ, ಗುರುದೇವ! ಇದೋ ತಮ್ಮ ಗುರುದಕ್ಷಿಣೆ! [ದ್ರೋಣನು ಎರಡೂ ಕೈ ಎತ್ತಿ ಆಶೀರ್ವಾದ ಮಾಡುತ್ತಾನೆ. ಅರ್ಜುನನು ಕರುಣೆಯ ನೋಟದಿಂದ ಏಕಲವ್ಯನ ಕಡೆ ನೋಡುತ್ತಾನೆ. ಕ್ರಮೇಣ ಕತ್ತಲೆ]

ಉತ್ತರಾರ್ಧ

[ರಂಗ ಖಾಲಿ ಇದೆ. ಫೋನ್ ರಿಂಗ್ ಆಗುತ್ತಿದೆ. ಲೀಲಾ ಬಂದು ಫೋನ್ ಎತ್ತಿಕೊಳ್ಳೂತ್ತಾಳೆ]

ಲೀಲಾ: ಹಲ್ಲೋ.....ಯಾರು?... ಮಿಸೆಸ್ ಶುಕ್ಲಾ? ನಾನು ಲೀಲಾ ಮಾತನಾಡ್ತಿದ್ದೇನೆ.. ಇಲ್ಲ ಇಲ್ಲ, ಪ್ರಿನ್ಸಿಪಾಲ್ ಸಾಹೇಬರು ಇನ್ನೂ ಬಂದಿಲ್ಲ. ಏನು ಹೇಳಿದಿರಿ? ಸ್ಯಾರೀಹೌಸ್‌ನಲ್ಲಿ ಹೊಸ ಸ್ಟಾಕ್ ಬಂದಿದೆಯಾ? ಆದರೆ ನಾನು ಮೊನ್ನೆನೇ ಷಾಪಿಂಗ್ ಮಾಡಿ ಬಂದೆ... ಒಳ್ಳೆಯದು, ಹಾಗಾದರೆ ನೈನಿತಾಲ್ ತಯಾರಿ ನಡೆದಿದೆ ತಾನೆ? ಬಹಳ ಒಳ್ಳೆಯದು, ಮಿ.ಶುಕ್ಲಾ ಟೂರ್ ಮೇಲೆ ಹೋಗ್ತಾ ಇದ್ದಾರೆ... ಹೋಗಿ ಬನ್ನಿ, ನಿಮ್ಮಗಾಡಿ ತೆಗೆದುಕೊಂಡು ಹೋಗುತ್ತಿದ್ದೀರೋ, ಅಥವಾ ಸರ್ಕಾರಿ ಗಾಡೀನೋ?.... ನಿಮ್ಮಗಳ ಉತ್ಸಾಹ ಬಹಳ ದೊಡ್ಡದು.... ಯಾಕೆ ಬರದೆ ಇರಲಿ? ಪೋಲೀಸಿನವನ ಹೆಂಡತಿ ಆಗಿದ್ದರೇನಂತೆ?..... ಹ್ಞೂ ಹ್ಞೂ ಸುದೀಪ್ ಪಾಸಾಗಿದ್ದಾನೆ. ಫಸ್ಟ್ ಬಂದಿದ್ದಾನೆ.... ನೂರು ಮಾವಿನ ಉಪ್ಪಿನಕಾಯಿಗೆ ಮಸಾಲೆ ಎಷ್ಟು ಹಾಕಿದಿರಿ ನೀವು? ನೂರು ಗ್ರಾಮ್. ನಾನಂತೂ ನೂರಿಪ್ಪತ್ತೈದು ಗ್ರಾಂ ಹಾಕ್ತೀನಿ. ಬೇಡ, ಬೇಡ, ನೀವು ಯಾಕೆ ತೊಂದರೆ ತೊಗೊಳ್ತೀರಿ, ನಮ್ಮ ಆಳನ್ನು ಕಳಿಸಿಕೊಡ್ತೀನಿ... ಒಳ್ಳೇದು ನಮಸ್ಕಾರ. [ಅರವಿಂದ ಬರುತ್ತಾನೆ. ಆಯಾಸಗೊಂಡವನಂತೆ, ಚಿಂತಿತನಂತೆ, ಕಾಣುತ್ತಾನೆ ಲೀಲಾ ರಿಸೀವರ್ ಇಡುತ್ತಾಳೆ]

ಲೀಲಾ: [ಫೋನ್ ಇಟ್ಟಿದ್ದ ಟೀಪಾಯಿ ಮೇಲಿದ್ದ ಪತ್ರವನ್ನು ತೆಗೆದುಕೊಡುತ್ತ] ಸುದೀಪನ ಪತ್ರ ಬಂದಿದೆ.

ಅರವಿಂದ: (ಅನ್ಯಮನಸ್ಕಭಾವದಿಂದ) ಇಟ್ಟು ಬಿಡು, ಓದ್ತೀನಿ,

ಲೀಲಾ: ಅಯ್ಯೋ ಓದಿ ಅಂದ್ರೆ. ಮೆರಿಟ್‌ನಲ್ಲಿ ಮೊದಲು ಬಂದಿದ್ದಾನೆ. ನನ್ನ ಮಗ

ಅರವಿಂದ: ಹಾಗಾದರೆ ನಾನೇನು ಮಾಡಬೇಕು?

ಲೀಲಾ: ಫಸ್ಟ್ ಬರೋದು ಅಂದರೆ ಏನೂ ಅಲ್ಲವೇನು?

ಅರವಿಂದ: ಏನಾದರೂ ಆಗಿದ್ದರೆ ಊರಿಗೆಲ್ಲ ಮಿಠಾಯಿ ಹಂಚು.

ಲೀಲಾ: ಈ ರೀತಿ ಯಾಕೆ ಚುಚ್ಚುತ್ತಾ ಇದ್ದೀರಿ?

ಅರವಿಂದ: ಚುಚ್ಚದೆ ಇನ್ನೇನು ಮಾಡಲಿ? ನಿಮ್ಮಂಥವರ ಕೃಪೆಯಿಂದ ಪ್ರಿನ್ಸಿಪಾಲ್ ಆಗಿಬಿಟ್ಟಿದ್ದೀನಲ್ಲ.

ಲೀಲಾ: ಅದರಿಂದ ಕೆಟ್ಟದ್ದೇನಾಯಿತು.

ಅರವಿಂದ: ಬಹಳದೊಡ್ಡ ರಾಜಸಿಂಹಾಸನ ಸಿಕ್ಕಿಬಿಟ್ಟಿದೆ ಅಲ್ಲವೆ! ಒಂದು ದಿನವಾದರೂ ನೆಮ್ಮದಿಯಾಗಿ ಉಸಿರಾಡೋ ಹಾಗಿಲ್ಲ. ಪ್ರತಿದಿನ ಒಂದಲ್ಲ ಒಂದು ಟೆನ್ಷನ್.....

ಲೀಲಾ: ಇಷ್ಟೊಂದು ಯೋಚನೆ ಮಾಡ್ತಾ ಕೂತರೆ ಹೇಗಾಗುತ್ತೆ?

ಅರವಿಂದ: ಹಾಗಾದರೇನು ಸಾಯಲೆ?

ಲೀಲಾ: ಹಾಗಾದರೆ ಪ್ರಿನ್ಸಿಪಾಲ್ ಆಗಿ ನೀವು ಸುಖವಾಗಿಲ್ಲವೇನು?

ಅರವಿಂದ: ಪ್ರತಿಯೊಬ್ಬನೂ ನನ್ನನ್ನು ಅಪ್ರಾಮಾಣಿಕ ಮತ್ತು ಅವಕಾಶವಾದಿ ಅಂತ ತಿಳಿದುಕೊಂಡಿದ್ದಾನೆ. ಯಾರಿಗೂ ನನ್ನ ಮೇಲೆ ವಿಶ್ವಾಸವಿಲ್ಲ.

ಯದೂ: [ಪ್ರವೇಶ]ಏನಯ್ಯಾ ಗೆಳೆಯ, ಪ್ರಿನ್ಸಿಪಾಲ್ ಆದ ಮೇಲೆ ನಿನಗೆ ಅದೇನಾಗಿ ಬಿಟ್ಟಿದೆ?

ಅರವಿಂದ: ಏನಾಗಿದೆ ನನಗೆ?

ಯದೂ: ಯಾವುದಕ್ಕೂ ಪ್ರಯೋಜನಕ್ಕೆ ಬರದವನ ಹಾಗೆ ಆಗಿ ಬಿಟ್ಟಿದ್ದೀ. ಯಾವಾಗ ನೋಡಿದರೂ ಮುಖ ಇಳೀಬಿಟ್ಟುಕೊಂಡು ಇರ್ತೀಯ.

ಅರವಿಂದ: ಇನ್ನೇನು ಮತ್ತೆ, ಪ್ರಿನ್ಸಿಪಾಲ್ ಮಾಡಿ ಬಿಡು! ನನ್ನನ್ನು ಎಲ್ಲಿಗೂ ಸಲ್ಲದವನನ್ನಾಗಿ ಮಾಡಿದೆ.

ಯದೂ:	ಹೋಗಲಿ ಏನಾಯಿತು ಈಗ?
ಅರವಿಂದ:	ಏನೂ ಇಲ್ಲ.
ಯದೂ:	ಏನೋ ಅಂತೂ ಆಗಿದೆ. ನನಗೆ ನಿನ್ನ ನರನರವೂ ತಿಳಿದಿದೆ. (ಅರವಿಂದ ಮೌನ). ಈಗ ಹೇಳ್ತಿಯೋ ಇಲ್ಲ ಬಾವಲಿಗಳ ಹಾಗೆ ಮುಖ ಇಳಿಬಿಟ್ಟುಕೊಂಡಿರ್ತಿಯೋ...
ಅರವಿಂದ:	ನನ್ನ ಬುದ್ಧೀನೇ ಕೆಲಸ ಮಾಡ್ತಾಯಿಲ್ಲ.
ಯದೂ:	ಪ್ರೆಸಿಡೆಂಟ್ ಏನಾದರೂ ಕೆಟ್ಟ ಮಾತು ಆಡಿದನೆ?
ಅರವಿಂದ:	ಅದು ಅಭ್ಯಾಸ ಆಗಿಬಿಟ್ಟಿದೆ.
ಯದೂ:	ಯಾರಾದರೂ ಲೆಕ್ಚರರ್ ಕೆಟ್ಟದಾಗಿ ನಡೆದುಕೊಂಡನೆ?
ಅರವಿಂದ:	ನನ್ನ ಹತ್ತಿರ ಮಾತು ತಾನೆ ಯಾರು ಆಡ್ತಾರೆ?
ಯದೂ:	ಹಾಗಾದರೆ ಏನು ಆಯಿತು?
ಅರವಿಂದ:	ಈಗ ಹೇಗೆ ಹೇಳಲಿ? ಮುಳುಗಿ ಸಾಯುವಂಥ ವಿಷಯ.
ಯದೂ:	ಆದರೆ ಏನು ಅಂತ ಹೇಳಲ್ಲ.
ಅರವಿಂದ:	ಕೇಳ್ತಿಯಾ? ರಾಜ್‌ಕುಮಾರನು ಒಂದು ಹುಡುಗಿಯ ಮೇಲೆ ಬಲಾತ್ಕಾರ ಮಾಡಲು ಯತ್ನಿಸಿದ್ದಾನೆ.
ಯದೂ:	ಬಲಾತ್ಕಾರ! ಯಾವ ಹುಡುಗಿಯ ಮೇಲೆ?
ಅರವಿಂದ:	ಅನುರಾಧಾಳ ಮೇಲೆ.
ಲೀಲಾ:	ಇಷ್ಟೊಂದು ನೀಚತನವೆ!
ಅರವಿಂದ:	(ಗಟ್ಟಿಯಾಗಿ) ನೀನು ಮಾತಾಡಬೇಡ. ನಿನ್ನಿಂದಾಗಿ ರಾಜಕುಮಾರ ಈ ಹೊತ್ತು ಕಾಲೇಜಿನಲ್ಲಿದ್ದಾನೆ.
ಯದೂ:	ಆದರೆ ಈ ಘಟನೆ ನಡೆದದ್ದಾರೂ ಎಲ್ಲಿ?
ಅರವಿಂದ:	ಇನ್ನೆಲ್ಲಿ? ಕಾಲೇಜಿನಲ್ಲಿ
ಯದೂ:	ಆದರೆ ಈ ಘಟನೆ ಹೇಗೆ ಆಯಿತು? ಅದೂ ನೀನು ಇರೋವಾಗ.

ಅರವಿಂದ: ಅದೃಷ್ಟವೇ ಖೋಟಾ ಆದ ಮೇಲೆ ಏನು ಮಾಡಲಿ? ನನಗೇ ಇನ್ನೂ ನಂಬಿಕೆ ಬರ್ತಾ ಇಲ್ಲ. ಆದರೆ ನಡೆದದ್ದು ಏನಿದೆ ಅದು ಎಷ್ಟು ಸತ್ಯ ಅಂದರೆ.....

ಯದೂ: ಆದರೆ ಇದು ಆದದ್ದು ಹೇಗೆ? ಐಕಾಂಟ್ ಬಿಲೀವ್.

ಅರವಿಂದ: ಕಾಲೇಜ್ ಬಿಲ್ಡಿಂಗ್‌ನ ಹಿಂದುಗಡೆ ಇರುವ ಪಾರ್ಕ್‌ಅನ್ನು ನೀನು ನೋಡಿದ್ದೀಯಲ್ಲ, ಅಲ್ಲೇ. ನಾಲ್ಕು ಗಂಟೆ ಆಗಿತ್ತು. ಕಾಲೇಜಿನಿಂದ ಹುಡುಗರೆಲ್ಲ ಹೊರಟುಹೋಗಿದ್ದರು. (ಬಿಡುವು) ಹೊಸದಾಗಿ ಕಸಿ ಮಾಡಿದ ಗುಲಾಬಿ ಕಡ್ಡಿಗಳನ್ನು ನೋಡಿಕೊಂಡು ಬರೋಣ ಅಂತ ಅಂದುಕೊಂಡೆ.

ಯದೂ: ಆಮೇಲೆ?

ಅರವಿಂದ: ಲೇಡೀಸ್ ರೂಂ ಕಡೆ ಹೋಗುತ್ತಿದ್ದ ಹಾಗೆ ಹುಡುಗಿಯ ಭಯಂಕರ ಕಿರುಚಾಟ ಕೇಳಿಸಿತು. ನೋಡಿದರೆ ರಾಜ್‌ಕುಮಾರ್ ಅನುರಾಧಾಳ ಮೇಲೆ.... ಆ ಹುಡುಗಿ ಒದ್ದಾಡುತ್ತಿದ್ದಳು. ಇಟ್‌ವಾಸ್ ಹಾರಿಬಲ್. (ಬಿಡುವು) ನಾನು ರಾಜಕುಮಾರನನ್ನು ಜೋರಾಗಿ ಕೂಗಿದೆ. ಓಡಿ ಹೋಗಿಬಿಟ್ಟ ಬಡ್ಡೀಮಗ. ಅನುರಾಧಾ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಗೊತ್ತಾಯಿತೆ. ಇಮ್ಯಾಜಿನ್ ಮೈ ಸ್ಟೇಟ್ ಆಫ್ ಮೈಂಡ್...[ಒಂದು ಕ್ಷಣ ಅಸಹನೀಯ ಮೌನ]

ಯದೂ: ಖಂಡಿತವಾಗಿಯೂ ಅತ್ಯಂತ ದುಃಖದ ವಿಷಯ. ಆದರೆ ಈ ಹುಡುಗಿ ಒಬ್ಬಳೇ ಪಾರ್ಕ್‌ನಲ್ಲಿ ಏನು ಮಾಡುತ್ತಿದ್ದಳು?

ಅರವಿಂದ: ಯಾರಿಗೋ ಕಾಯ್ತಾ ಇದ್ದಳು.

ಯದೂ: ಯಾರಿಗೆ?

ಅರವಿಂದ: ಕೇಳಿದರೂ ಹೇಳಲಿಲ್ಲ.

ಯದೂ: ಬಹುಶಃ ಯಾರೋ ಪ್ರೇಮಿಗೆ ಕಾಯ್ತಾ ಇದ್ದಿರಬಹುದು.

ಅರವಿಂದ: ಆದರೇನಂತೆ ಏನು ಪಾಪ ಮಾಡಿದ ಹಾಗಾಯ್ತು! ಇದರರ್ಥ ಅವಳನ್ನು ರೇಪ್‌ಮಾಡು ಅಂತ ಅಲ್ಲ.

ಲೀಲಾ: ನೀವು ತಡೆದರೂ ಹೇಳ್ತೀನಿ. ಇಡೀ ಘಟನೆಗೆ ನೀವು ಹೇಗೆ ಜವಾಬ್ದಾರರು? ಯಾಕೆ ಅರ್ಥ ಮಾಡಿಕೊಳ್ಳೋ ಪ್ರಯತ್ನ ಮಾಡ್ತಿಲ್ಲ?

ಅರವಿಂದ: ನಾನೊಂದು ಮರದ ಬೊಂಬೆ ಥರದ ಪ್ರಿನ್ಸಿಪಾಲ್ ಆಗಿಲ್ಲದೆ ಹೋಗಿದ್ದರೆ ಆ ಬದ್ಮಾಶ್‌ಗೆ ಧೈರ್ಯ ಬರುತ್ತಿತ್ತೆ?

ಯದೂ: ಆದರೂ..... ಇದರಲ್ಲಿ ನಿನ್ನದೇನು ತಪ್ಪಿದೆ? ಯಾರು ಮಾಡಿದ್ದಾರೋ ಅವರು ಅನುಭವಿಸ್ತಾರೆ.

ಅರವಿಂದ: ಯೂ ಡೋಂಟ್ ಅಂಡರ್ ಸ್ಟ್ಯಾಂಡ್ ದಿ ಟ್ರಾಜೆಡಿ, ಈ ಘಟನೆಯ ಏಕೈಕ ಸಾಕ್ಷಿ ನಾನು. (ಬಿಡುವು) ನಾಳೆ. ನಾನೇ ವಿಚಾರಣಾ ನ್ಯಾಯಾಧೀಶನಾಗಿಯೂ ಕೂತುಕೊಳ್ಳಬೇಕು.

ಯದೂ: ಹಾಗಾದರೇನು ಅವಳು ಲಿಖಿತವಾಗಿ ದೂರುಕೊಟ್ಟಿದ್ದಾಳೇನು?

ಅರವಿಂದ: ಯಾಕೆ ಕೊಡೋದಿಲ್ಲ? ಮತ್ತೆ, ಒಂದು ವೇಳೆ ಕೊಡದೆ ಹೋದರೆ ನಾನು ನಾಮರ್ದನ ಹಾಗೆ ಬಾಯಿ ಮುಚ್ಚಿಕೊಂಡು ಕೂತಿರಬೇಕೇನು?

ಲೀಲಾ: ಹಾಗಾದರೇನು ಈ ಪ್ರಕರಣ ತುಂಬ ದೀರ್ಘವಾಗಿ ಎಳೆಯುತ್ತೇನು?

ಅರವಿಂದ: ಈ ಸರ್ತಿ ಬಿರುಗಾಳಿ ಏಳುತ್ತೆ. ನಾಳೆ ಹೊತ್ತಿಗೆ ವಿಷಯ ವಿದ್ಯಾರ್ಥಿಗಳಿಗೆಲ್ಲ ಹರಡುತ್ತೆ. ಹುಡುಗರು ರಾಜಕುಮಾರನಿಗೆ ಅತ್ಯಂತ ಕಠಿಣವಾದ ಶಿಕ್ಷೆ ಕೊಡಬೇಕು ಅಂತ ಹೇಳ್ತಾರೆ. ಪೋಲೀಸ್ ಕೇಸ್ ಆದರೂ ಆಗಬಹುದು. (ಬಿಡುವು) ಒಂದು ವೇಳೆ ಚಂದೂನೂ ಪಟ್ಟಣದಲ್ಲೇ ಇದ್ದ ಅಂದರೆ, ಹಿಂದಿನ ಸಲದ ಸೇಡು ತೀರಿಸಿಕೊಳ್ತಾನೆ.

ಯದೂ: ಆದರೆ ಅವನು ಕಾಲೇಜಿನಲ್ಲಿ ಎಲ್ಲಿದ್ದಾನೆ?

ಅರವಿಂದ: ಕಾಲೇಜಿನಲ್ಲಿ ಅವನಿಲ್ಲದೆ ಇದ್ದರೆ ಏನಂತೆ! ಅವನ ಜೊತೆಗಾರರಿದ್ದಾರಲ್ಲ. ಈ ಹುಡುಗರ ಮೇಲೆ ನಾವು ಲಾಠಿಛಾರ್ಜ್ ಮಾಡಿಸಿದ್ದು ನೆನಪಿದೆಯಾ? ಅವರ ಲೀಡರ್‌ಗಳನ್ನು ಕಾಲೇಜಿನಿಂದ ತೆಗೆದುಹಾಕಿದ್ದೆವು. ಏನವರು ಸುಮ್ಮನೆ ಕೂತುಬಿಡ್ತಾರಾ? ನಾನು ಎಲ್ಲರ ಎದುರು ಸುಳ್ಳು ಹೇಳಿದ್ದೆ. ಅವರು ನನ್ನನ್ನು ಕ್ಷಮಿಸಿ ಬಿಡ್ತಾರಾ?

ಯದೂ: ರಿಪೋರ್ಟನ್ನು ಹತ್ತಿಕ್ಕಿ ಬಿಡು.

ಅರವಿಂದ: ಅದು ಅಸಾಧ್ಯ. ಇಡೀ ಘಟನೆ ನನ್ನೆದುರುಗಡೆ ನಡೆದಿದೆ. ಎಲ್ಲವೂ ಸತ್ಯ ಹಾಗೂ ಎಷ್ಟೊಂದು ಭಯಂಕರವಾದ ರೀತಿಯಲ್ಲಿ ಸತ್ಯವಾಗಿದೆ ಅಂದರೆ ನಾನು ಸುಳ್ಳು ಹೇಳಕ್ಕಾಗಲ್ಲ.

ಲೀಲಾ: ಆದರೆ ನಿಜ ಹೇಳುವುದರ ಅರ್ಥ ಗೊತ್ತಿದೆ ತಾನೆ?

ಅರವಿಂದ: ಹೇಳಿದೆನಲ್ಲ, ನೀನು ಸುಮ್ಮನೆ ಇರು, ಬಲಾತ್ಕಾರದ ವಿಚಾರ ಕೇಳಿ ನೀನು ಕೆಂಡಾಮಂಡಲ ಆಗ್ತೀಯಾ ಅಂದು ಕೊಂಡಿದ್ದೆ, ರಾಜಕುಮಾರ್‌ಗೆ ಅತ್ಯಂತ ಉಗ್ರವಾದ ಶಿಕ್ಷೆಕೊಡಬೇಕು ಅಂತ ಹೇಳಿ ನನ್ನನ್ನು ಒತ್ತಾಯಿಸುತ್ತೀಯಾ ಅಂದು ಕೊಂಡಿದ್ದೆ. ಆದರೆ ನೀನು ಅದಕ್ಕೆ ತದ್ವಿರುದ್ಧವಾಗಿದ್ದಿ..... ಯಾಕೆ ಅನುಕೂಲಗಳು ನಿನ್ನ ಸಂವೇದನೆಯನ್ನು ಇಷ್ಟೊಂದು ಸಾಯಿಸಿಬಿಟ್ಟಿವೆಯೆ?

ಲೀಲಾ: ಆಮೇಲೆ ಪ್ರೆಸಿಡೆಂಟ್ ನಿಮ್ಮನ್ನು. ಕೆಲಸದಿಂದ ತೆಗೆದುಹಾಕಿ ಬಿಡ್ತಾನೆ ಆಗ?

ಅರವಿಂದ: ತೆಗೆಯಲಿ ಬಿಡು. ಕೆಲಸ! ಕೆಲಸಾ!

ಯದೂ: ಸ್ವಲ್ಪ ಪ್ರಾಕ್ಟಿಕಲ್ ಆಗಿ ಯೋಚನೆ ಮಾಡು ಅರವಿಂದ!

ಅರವಿಂದ: ಇನ್ನೇನು ಸುಡುಗಾಡು ಪ್ರಾಕ್ಟಿಕಲ್ ಆಗಿ!

ಯದೂ: ಆ ಹುಡುಗಿಗೆ ತಿಳಿಸಿ ಹೇಳು.. ವಿಷಯ ಎಲ್ಲ ಕಡೆ ಹಬ್ಬಿದರೆ ಕೆಟ್ಟ ಹೆಸರೂ ಅವಳಿಗೇ ಬರುತ್ತೇ ಅಂತ ಹೇಳು, ಬಾಯಿ ಮುಚ್ಚಿಕೊಂಡು ಸುಮ್ಮನೆ ಕುಳಿತಿರೋದು ತುಂಬಾ ಒಳ್ಳೆಯದು. ತಿಳಿಸಿ ಹೇಳುವುದರಿಂದ ಕೆಲಸ ಆಗುತ್ತೆ ಅನ್ನುವುದಾದರೆ, ಅಳೋದು ಕರೆಯೋದರಿಂದ ಏನು ಪ್ರಯೋಜನ?

ಲೀಲಾ: ಯದೂ ಅಣ್ಣ ಸರಿಯಾಗೇ ಹೇಳ್ತಿದ್ದಾರೆ. ನೀವೂ ಸುಳ್ಳು ಹೇಳಬೇಕಾಗಿ ಬರಲ್ಲ ಮತ್ತು ಈಗ ಬಂದಿರೋ ಸಮಸ್ಯೆಯೂ ಪರಿಹಾರವಾಗಿ ಬಿಡುತ್ತೆ.

ಅರವಿಂದ: ನಾನು ಹೇಳ್ತಾ ಇದ್ದೀನಿ, ನೀನು ಸುಮ್ಮನೆ ಇರು. [ಬಾಗಿಲ ಹತ್ತಿರ ಶಬ್ದ. ಪ್ರೆಸಿಡೆಂಟ್ ಬರುತ್ತಾನೆ]

ಅರವಿಂದ: (ಆಶ್ಚರ್ಯದಿಂದ) ತಾವು?

ಪ್ರೆಸಿಡೆಂಟ್: (ಯದೂನ ಕಡೆನೋಡುತ್ತ) ನಿಮ್ಮ ಹತ್ತಿರ ಸ್ವಲ್ಪ ಏಕಾಂತದಲ್ಲಿ ಮಾತಾಡಬೇಕಾಗಿದೆ. (ಸೂಚನೆಯನ್ನು ತಿಳಿದು ಯದೂ ಹೊರಟು ಹೋಗುತ್ತಾನೆ). ಮಿಸ್ಟರ್ ಅರವಿಂದ ಕಾಲೇಜಿನಲ್ಲಿ ಇಂಥ ದೊಡ್ಡ ಘಟನೆ ನಡೆದಿದೆ. ನೀವು ನನಗೆ inform ಮಾಡುವ ಅಗತ್ಯ ಇದೆ ಅಂತ ತಿಳಿಯಲಿಲ್ಲವಲ್ಲ.

ಲೀಲಾ: (ಮಧ್ಯದಲ್ಲೇ) ಇವರಿನ್ನೇನು ನಿಮ್ಮ ಕಡೇನೇ ಬರ್ತಾ ಇದ್ದರು. ಆಗಿನಿಂದ ಎಷ್ಟೊಂದು ಚಿಂತಿತರಾಗಿದ್ದಾರೆ. ಪ್ರೆಸಿಡೆಂಟ್ ಸಾಹೇಬರೂ ಬಹಳ ಚಿಂತೆ ಮಾಡ್ತಾರೆ ಅಂತ ಹೇಳ್ತಾ ಇದ್ದರು

ಪ್ರೆಸಿಡೆಂಟ್: (ಲೀಲಾಳ ಮಾತಿನ ಮೇಲೆ ಗಮನವಿಟ್ಟು ಅರವಿಂದನನ್ನು ಕುರಿತು) ನೀವು ಕಾಲೇಜಿನಿಂದ ನೇರವಾಗಿ ನಮ್ಮ ಮನೆಗೆ ಬರಬೇಕಾಗಿತ್ತಲ್ಲವೆ? (ಬಿಡುವು) ಆದರೆ ನಿಮಗೆ ಪುರಸತ್ತು ಎಲ್ಲಿತ್ತು? ನಿವಂತೂ ಆ ಹುಡುಗಿಯ ಕಡೆಯಿಂದ ರಿಪೋರ್ಟ್ ಬರೆಸುವುದರಲ್ಲಿ ಮಗ್ನರಾಗಿದ್ದೀರಿ.

ಅರವಿಂದ: ಆಕೆ ರಿಪೋರ್ಟ್ ಸ್ವತಃ ತಾನೇ ಬರೆದಳು.

ಪ್ರೆಸಿಡೆಂಟ್: ಆದರೆ ನೀವು ತಡೆಯಲೂ ಇಲ್ಲವಲ್ಲ

ಅರವಿಂದ: ಇದು ಆಕೆಯ ಅಧಿಕಾರ ಆಗಿರಲಿಲ್ಲವೇನು?

ಪ್ರೆಸಿಡೆಂಟ್: ಆಕೆಗೆ ತಿಳಿಸಿ ಹೇಳುವುದು ನಿಮ್ಮ ಕರ್ತವ್ಯವಾಗಿತ್ತು.

ಅರವಿಂದ: (ಆವೇಶಭರಿತನಾಗಿ) ನಿಮ್ಮ ಮಗಳ ಮೇಲೆ ಒಂದು ವೇಳೆ ಅತ್ಯಾಚಾರದ ಪ್ರಯತ್ನ ನಡೆದಿದ್ದರೆ ನೀವು ಸುಮ್ಮನೆ ಇರುತ್ತಿದ್ದಿರೇನು?

ಪ್ರೆಸಿಡೆಂಟ್: (ಕೋಪದಿಂದ) ಮಿಸ್ಟರ್ ಅರವಿಂದ್!

ಅರವಿಂದ: (ಲೀಲಾಳಿಗೆ) ನೀನು ಒಳಕ್ಕೆ ಹೋಗು.

ಪ್ರೆಸಿಡೆಂಟ್: ನೀವು ಆ ಹುಡುಗಿಯ ಪರವಾಗಿ ಮಾತಾಡ್ತಿದ್ದೀರಿ ಅನ್ನುವುದು ಸ್ಪಷ್ಟವೇ ಇದೆ.

ಅರವಿಂದ: ನೀವು ಏನು ಬೇಕಾದರೂ ತಿಳಿದುಕೊಳ್ಳಿ.

ಪ್ರೆಸಿಡೆಂಟ್: ರಾಜ್‌ಕುಮಾರ್ ಮೇಲೆ Action ತೆಗೆದುಕೊಳ್ಳಬೇಕು ಅಂತ ಯೋಚನೆ ಮಾಡ್ತಿದ್ದೀರೇನು?

ಅರವಿಂದ: Of course, ತೆಗೆದುಕೊಳ್ಳದೆ ಇದ್ದರೆ ಹುಡುಗರಂತೂ ನನ್ನನ್ನು ಹರಿದು ತಿಂದುಬಿಡ್ತಾರೆ.

ಪ್ರೆಸಿಡೆಂಟ್: ಮಿಸ್ಟರ್ ಅರವಿಂದ್, ನನ್ನ ಮಗನ ಹಗರಣದ ಕಾರಣದಿಂದ ನಾನೆಷ್ಟು ದುಃಖಿತನಾಗಿದ್ದೇನೆ ಅಂತ ನಿಮಗೆ ಗೊತ್ತಿಲ್ಲವೇನು? (ಬಿಡುವು) ಯಾವ ತಂದೆಯಾದರೂ ಆಗ್ತಾನೆ.

ಅರವಿಂದ: ಅಂದ ಮೇಲೆ ಅವನು ತಾನು ಮಾಡಿದ್ದಕ್ಕೆ ಶಿಕ್ಷೆ ಅನುಭವಿಸುವುದಕ್ಕೆ ಬಿಟ್ಟುಬಿಡಿ.

ಪ್ರೆಸಿಡೆಂಟ್: ಬೇರೆ ಯಾವುದಾದರೂ ಸಂದರ್ಭ ಆಗಿದ್ದರೆ, ನಿಮ್ಮ ಮಾತನ್ನು ಒಪ್ಪುತ್ತಾ ಇದ್ದೆ. ಆದರೆ ಈಗಿನ ಸಂದರ್ಭದಲ್ಲಿ ಅಲ್ಲ.

ಅರವಿಂದ: ಏಕೆ?

ಪ್ರೆಸಿಡೆಂಟ್: ಈಗ ನಿಮ್ಮಿಂದ ಏನನ್ನು ತಾನೆ ಮುಚ್ಚಿಡಲಿ? ನನ್ನನ್ನು ಮಂತ್ರಿಮಂಡಲಕ್ಕೆ ತೆಗೆದು ಕೊಳ್ಳುವ ಬಗ್ಗೆ ಮಾತುಕತೆ ನಡೀತಾ ಇದೆ. ನನ್ನ ಇಮೇಜ್ ಹಾಳಾಗಬಾರದು.

ಅರವಿಂದ: ಹಾಗಿದ್ದರೆ ರಾಜ್‌ಕುಮಾರನನ್ನು ರಸ್ಟಿಕೇಟ್ ಮಾಡಿಸಿ ಬಿಡಿ. ನಿಮ್ಮ ಇಮೇಜ್ ಇನ್ನಷ್ಟು ಮೇಲೆ ಬರುತ್ತದೆ.

ಪ್ರೆಸಿಡೆಂಟ್: ಆದರ್ಶ ರಾಜಕಾರಣದ ದಿನಗಳು ಆಗಿ ಹೋದುವು ಮಿಸ್ಟರ್ ಅರವಿಂದ್.

ಅರವಿಂದ: ಹಾಗಾದರೆ ನೀವು ಏನನ್ನು ಬಯಸುತ್ತೀರಿ?

ಪ್ರೆಸಿಡೆಂಟ್: ಹುಡುಗನಿಗೆ ಕಳಂಕ ಬರದ ಹಾಗೆ ಕಾಪಾಡಬೇಕಾಗಿದೆ. ಜೊತೆಗೆ ನಾನು ಮಂತ್ರಿ ಕೂಡ ಆಗಬೇಕು. (ಬಿಡುವು) ನಿಮಗೆ ಗೊತ್ತಿಲ್ಲ, ಅಪರಾಧವನ್ನು ಸಾರ್ವಜನಿಕವಾಗಿ ಒಪ್ಪಿಕೊಳ್ಳುವುದೆಂದರೆ ರಾಜಕೀಯದಲ್ಲಿ ಆತ್ಮಹತ್ಯೆ ಎನಿಸಿಕೊಳ್ಳುತ್ತದೆ.

ಅರವಿಂದ: ಸಾರ್ವಜನಿಕವಾಗಿ ಸುಳ್ಳು ಹೇಳುವುದು ಅಂದರೆ ನನ್ನ ಪಾಲಿಗೆ ಆತ್ಮಹತ್ಯೆ ಆಗುವುದಿಲ್ಲವೇನು?

ಪ್ರೆಸಿಡೆಂಟ್: ಆದರೆ ಇಂಥಾ ಸಂದರ್ಭ ಬರೋ ಹಾಗೆ ಯಾಕೆ ಮಾಡಿಕೊಳ್ತೀರಿ? ನಿಮಗಾಗಲಿ ಬೇರೆಯವರಿಗೇ ಆಗಲಿ ಸುಳ್ಳು ಹೇಳಬೇಕಾಗದೆ ಇರುವಂಥದ್ದೇನಾದರೂ ಯೋಚಿಸಿ.

ಅರವಿಂದ: ಇಲ್ಲ, ಈ ಬಾರಿ ಯಾವುದು ಸತ್ಯವೋ ಅದನ್ನೇ ನಾನು ಹೇಳ್ತೀನಿ.

ಪ್ರೆಸಿಡೆಂಟ್: ನಿಮ್ಮಲ್ಲಿನ ಧರ್ಮರಾಜ ಮತ್ತೆ ಎಚ್ಚತ್ತುಬಿಟ್ಟ ಅಂತ ಕಾಣಿಸುತ್ತೆ. ಆದರೆ ನಾನು ಏನನ್ನು ಬಯಸುತ್ತೀನಿ ಅದನ್ನೇ ನೀವು ಮಾಡ್ತೀರಿ

ಅರವಿಂದ: ನೀವು ತಪ್ಪು ತಿಳಿದುಕೊಂಡಿದ್ದೀರಿ.

ಪ್ರೆಸಿಡೆಂಟ್: ನಾನೆ.... ಆದರೆ ನಾಳೆ ನೀವೇನು ಹೇಳ್ತೀರಿ, ಅದನ್ನು ಯಾರು ನಂಬುತ್ತಾರೆ?

ಅರವಿಂದ: ಯಾಕೆ?

ಪ್ರೆಸಿಡೆಂಟ್: ಯಾಕೆ ಅಂದರೆ ಅಷ್ಟು ಹೊತ್ತಿಗೆ ನೀವು ಪೋಲೀಸ್ ಕಸ್ಟಡಿಯಲ್ಲಿರುತ್ತೀರಿ. [ಅದೇ ಸಮಯಕ್ಕೆ ಲೀಲಾ ಬರುತ್ತಾಳೆ] ನಾನು ಹೋಗ್ತಾಇದ್ದೀನಿ.

ಲೀಲಾ: ಆದರೆ ಇವರದ್ದೇನು ತಪ್ಪು?

ಪ್ರೆಸಿಡೆಂಟ್: ವಿರೋಧ, ಕೇವಲ ವಿರೋಧ. (ಏಳುತ್ತ) ಒಳ್ಳೆಯದು, ಮಿಸ್ಟರ್ ಅರವಿಂದ್! ಸ್ವಲ್ಪ ಹೊತ್ತು ಆದ ಮೇಲೆ ನಾನು ಟೆಲಿಫೋನು ಮಾಡ್ತೀನಿ, ಈ ಮಧ್ಯೆ ನೀವು ನಾನು ಹೇಳಿದ್ದನ್ನು ಒಪ್ಪಿಕೊಂಡರೆ ಒಳ್ಳೆಯದೇ (ಹೋಗುತ್ತಾನೆ) [ಲೀಲಾ ಅರವಿಂದನ ಕಡೆ ವ್ಯಾಕುಲದಿಂದ ನೋಡುತ್ತಾಳೆ. ಸ್ವಲ್ಪ ಹೊತ್ತು ನಿಶ್ಶಬ್ದತೆ]

ಲೀಲಾ: ಕೊನೆಗೆ ನೀವು ಜೈಲಿಗೆ ಹೋಗುವಂಥ ಗತಿಬರುವ ಹಾಗೆ ಏನು ಮಾಡಿದಿರಿ?

ಅರವಿಂದ: ನನ್ನ ಮೇಲೆ ನಂಬಿಕೆ. ಇಲ್ಲವೇನು?

ಲೀಲಾ: ಆದರೂ?

ಅರವಿಂದ: ನಾನು ಯಾವ ತಪ್ಪನ್ನೂ ಮಾಡಿಲ್ಲ.

ಲೀಲಾ: ಹಾಗಿದ್ದ ಮೇಲೆ ಆ ಪ್ರೆಸಿಡೆಂಟ್ ಯಾತಕ್ಕೆ ಧಮಕಿ ಹಾಕ್ತಿದ್ದ?

ಅರವಿಂದ: ಅವನ ಗುಪ್ತ ತಂತ್ರಗಳು ನಿನಗೆ ಗೊತ್ತಿಲ್ಲ.

ಲೀಲಾ: ನಿಮ್ಮಿಂದ ಯಾವ ತಪ್ಪೂ ಆಗುವುದಕ್ಕೆ ಸಾಧ್ಯವಿಲ್ಲವೆ?

ಅರವಿಂದ: ಇಲ್ಲ, ನಾನು ನನ್ನ ಕೆಲಸವನ್ನು ಪ್ರಾಮಾಣಿಕವಾಗಿ ಮಾಡ್ತಾ ಇದ್ದೇನೆ.

ಲೀಲಾ: ನಿಮ್ಮನ್ನು ಜೈಲಿಗೆ ಕಳಿಸುವ ಮಟ್ಟಿಗೆ ಪ್ರೆಸಿಡೆಂಟರಿಗೆ ಕೋಪಬರುವ ಹಾಗೆ ಮಾಡ್ತೀರೇನು?

ಅರವಿಂದ: ಅವರ ಅಪ್ಪನೂ ಜೈಲಿಗೆ ಕಳಿಸುವುದಕ್ಕಾಗಲ್ಲ, ಕೆಲಸ ಬೇಕಾದರೆ ಕಿತ್ತುಕೊಳ್ಳಬಹುದು.

ಲೀಲಾ: ಕೆಲಸ ಹೋಗುವುದರ ಅರ್ಥ ನಿಮಗೆ ಗೊತ್ತಿದೆಯಾ?

ಅರವಿಂದ: ಹೌದು ಗೊತ್ತಿದೆ... ನಿನ್ನ ಈ ಬಂಗಲೆಯನ್ನು ಕಿತ್ತುಕೊಳ್ತಾರೆ. ಟೆಲಿಫೋನ್ ಕಟ್ ಆಗುತ್ತೆ. ಬಿಟ್ಟಿ ಆಳುಕಾಳುಗಳು ಇರುವುದಿಲ್ಲ, ಪ್ರಿನ್ಸಿಪಾಲರ ಹೆಂಡತಿ ಅಂತ ನಿನ್ನನ್ನು ಜನ ಕರೆಯಲ್ಲ. (ಒಳಗಡೆ ಪಾತ್ರೆ ಬಿದ್ದ ಶಬ್ದ) ಈ ಹೊತ್ತು ನಾನು, ನೀನು ಹೇಳಿದ್ದು ಏನನ್ನೂ ಕೇಳುವುದಿಲ್ಲ. [ಲೀಲಾ ಒಳಗೆ ಹೋಗುತ್ತಾಳೆ, ಅರವಿಂದನು ವ್ಯಾಕುಲಗೊಂಡ ಸ್ಥಿತಿಯಲ್ಲಿ ಟೆಲಿಫೋನ್ ತನಕ ಹೋಗುತ್ತಾನೆ ನಂಬರ್ ಡಯಲ್ ಮಾಡುತ್ತಾನೆ. ಆ ಕಡೆಯ ನಂಬರ್ ಎಂಗೇಜ್ ಆಗಿರುತ್ತೆ. ರಿಸೀವರ್ ಇಟ್ಟುಬಿಡುತ್ತಾನೆ. ಕೆಲಕ್ಷಣಗಳ ನಂತರ ಮತ್ತೆ ನಂಬರ್ ಡಯಲ್ ಮಾಡುತ್ತಾನೆ. ಬಹುಶಃ ನಂಬರ್ ಮತ್ತೆಯೂ ಎಂಗೇಜ್ ಆಗಿದೆ. ಅನೂರಾಧ ಬರುತ್ತಾಳೆ. ವಯಸ್ಸು ಇಪ್ಪತ್ತರ ಹಿಂದೆ ಮುಂದೆ. ನೋಡಲು ಠೀಕ್‌ಠಾಕ್ ಆಗಿದ್ದಾಳೆ. ಅರವಿಂದನಿಗೆ ಅವಳು ಬಂದದ್ದು ನೋಡಿ ಆಶ್ಚರ್ಯ]

ಅರವಿಂದ: ನೀನು! ಈ ಹೊತ್ತಿನಲ್ಲಿ, ಇಲ್ಲಿ?

ಅನುರಾಧ: ಯಸ್‌ಸರ್.

ಅರವಿಂದ: ಆದರೆ ಇಲ್ಲಿಗೆ ಬರೋ ಅಗತ್ಯ?

ಅನುರಾಧ: ನಾನೊಂದು ತಿಳಿದುಕೊಳ್ಳ ಬೇಕಾಗಿತ್ತು.

ಅರವಿಂದ: ಏನು?

ಅನುರಾಧ: ನೀವು ಖಂಡಿತವಾಗಿಯೂ Action ತೆಗೆದುಕೊಳ್ತೀರಾ ಅಥವಾ ಇಲ್ಲವಾ?

ಅರವಿಂದ: Action ಖಂಡಿತ ತೆಗೆದುಕೊಳ್ಳಬೇಕು ಅಂತ ನೀನು ಬಯಸ್ತೀಯಾ?

ಅನುರಾಧ: ಹಾಗೆ ಬಯಸದೆ ಇದ್ದರೆ ರಿಪೋರ್ಟ್ ಯಾಕೆ ಮಾಡ್ತಿದ್ದೆ?

ಅರವಿಂದ: ನಿಮ್ಮ ತಂದೆ ತಾಯಿಗಳಿಗೆ ಎಲ್ಲ ವಿಷಯವನ್ನೂ ಹೇಳಿದೆಯಾ?

ಅನುರಾಧ: ಹೌದು.

ಅರವಿಂದ: ಏನು ಹೇಳ್ತಾರೆ?

ಅನುರಾಧ: ಸುಮ್ಮನೆ ಕೂತುಕೋ, ಕಾಲೇಜ್ ಬಿಟ್ಟು ಬಿಡು ಅಂತ ಹೇಳ್ತಾರೆ.

ಅರವಿಂದ: ಯಾತಕ್ಕೆ?

ಅನುರಾಧ: ಬಡವರು ಜಂಜಾಟದಲ್ಲಿ ಸಿಕ್ಕಿಕೊಳ್ಳೋದು ಸರಿಯಲ್ಲ ಅಂತ ಅವರ ಆಲೋಚನೆ

ಅರವಿಂದ: ಹೆದರಿಬಿಟ್ಟಿದ್ದಾರೆ ಅಂತ ಕಾಣುತ್ತೆ.

ಅನುರಾಧ: ಅವರು ಹೆದರುವುದು ಸಹಜತಾನೆ? (ಬಿಡುವು) ಯೋಚನೆ ಏನಂದರೆ, ನಾಳೆ ಪೇಪರ್‌ನೋರಿಗೆಲ್ಲಾ ಗೊತ್ತಾಗಿ ಬಿಡುತ್ತೆ ಅಂತ. ಅವರು ಅದಕ್ಕೆಲ್ಲಾ ಮಸಾಲೆಹಚ್ಚಿ ಸುದ್ದಿಯನ್ನು ಮುದ್ರಿಸುತ್ತಾರೆ. ಜನರು ತಿರಸ್ಕಾರದ ಧಾಟಿಯಲ್ಲಿ ಅದರ ಮಜಾ ತಗೊಳ್ತಾರೆ (ಬಿಡುವು), ಏನು ನಡೆದಿಲ್ಲ ಅದನ್ನು ನನ್ನ ತಲೆಗೆ ಕಟ್ತಾರೆ.

ಅರವಿಂದ: ಏನು ಅವರು ಇದನ್ನು ತಮ್ಮ ಗೌರವದ ಮೇಲಾದ ದಾಳಿ ಅಂತ ತಿಳಿದು ಕೊಳ್ಳುವುದಿಲ್ಲವೆ? ಅವರ ಆತ್ಮ ಸಿಡಿದೇಳಲಿಲ್ಲವೆ?

ಅನುರಾಧ: ಅವರೇನು ಮನುಷ್ಯರಲ್ಲವೆ? ಆದರೆ ಏನು ತಾನೆ ಮಾಡಬಲ್ಲರು? ಪ್ರೆಸಿಡೆಂಟರ ಜೊತೆಯಲ್ಲಿ ಹೇಗೆ ತಾನೆ ಘರ್ಷಣೆಗೆ ಇಳಿಯುವರು? (ಬಿಡುವು) ಅವರು ಹೇಳುವುದೆಂದರೆ, ಇಂಥ ವಿಷಯಗಳಲ್ಲಿ ಜನರ ಕಲ್ಪನಾಶಕ್ತಿ ಬಹಳ ಫಲವತ್ತಾಗಿರುತ್ತದೆ. ಬಲಾತ್ಕಾರದ ಪ್ರಯತ್ನ ಮುಂದುವರೆದು ಗರ್ಭಪಾತದವರೆಗೂ ತಲುಪಿಬಿಡುತ್ತದೆ.

ಅರವಿಂದ: ಹಾಗಾದರೆ ನಿನಗೇನು ಬೇಕಾಗಿದೆ?

ಅನುರಾಧ: ಆಕ್ಷನ್.

ಅರವಿಂದ: ಅಪ್ಪ-ಅಮ್ಮನ ಇಷ್ಟಕ್ಕೆ ವಿರುದ್ಧವಾಗಿ?

ಅನುರಾಧ: ಹೌದು, ನನ್ನ ಇಷ್ಟಕ್ಕೆ ವಿರುದ್ಧವಾಗಿ ಬದುಕಿ ಏನು ಮಾಡಲಿ?

ಅರವಿಂದ: ಒಬ್ಬಳೇ ಹೋರಾಡಬಲ್ಲೆಯಾ?

ಅನುರಾಧ: ನೀವು ಬೆಂಬಲ ಕೊಡೋದಿಲ್ವೆ?

ಅರವಿಂದ: (ಬೆಚ್ಚಿದವನಂತೆ) ಹೂಂ; ಹೂಂ ಯಾಕೆ ಕೊಡದೆ ಇರಲಿ?

ಅನುರಾಧ: ನಮ್ಮ ತಂದೆಯವರಿಗೆ ಬೆದರಿಕೆ ಹಾಕ್ತಿದ್ದಾರೆ ಅಂತ ನಿಮಗೆ ಗೊತ್ತಿದೆಯೆ?

ಅರವಿಂದ: ಯಾರು ಬೆದರಿಸ್ತಾ ಇರೋದು?

ಅನುರಾಧ: ರಾಜ್‌ಕುಮಾರ್ ಮತ್ತು ಅವನ ಜೊತೆಗಾರರು.

ಅರವಿಂದ : ಏನಂತ ಬೆದರಿಕೆ ಹಾಕಿದ್ದಾರೆ?

ಅನುರಾಧ: ನನ್ನ ಹಿಂದೆ ಗೂಂಡಾಗಳನ್ನು ಬಿಡುವ ಬೆದರಿಕೆ. ರಾಜ್‌ಕುಮಾರ್‌ಗೆ ಯಾವುದನ್ನು ಪೂರ್ತಿ ಮಾಡೋದಕ್ಕೆ ಆಗಿರಲಿಲ್ಲ, ಅದನ್ನು ಪೂರ್ತಿ ಮಾಡಿಸುವ ಬೆದರಿಕೆ. ನಮ್ಮ ತಂದೆಯನ್ನು ಕೊಲ್ಲಿಸುವ ಬೆದರಿಕೆ.

ಅರವಿಂದ: ನೀವುಗಳು ಪೋಲೀಸ್‌ಗೆ ಯಾಕೆ ರಿಪೋರ್ಟ್ ಮಾಡಬಾರದು?

ಅನುರಾಧ: ನಮ್ಮ ತಂದೆ ತಾಯಿಗೆ ಈ ವಿಷಯವನ್ನು ಮುಂದುವರಿಸುವುದೇ ಇಷ್ಟವಿಲ್ಲದೆ ಇರುವಾಗ, ಇನ್ನು ರಿಪೋರ್ಟ್ ಏನು ಮಾಡೋದು?

(ಬಿಡುವು) ನಾನೇನಾದರೂ ರಿಪೋರ್ಟ್ ಮಾಡಲೇಬೇಕು ಅಂತ ಒತ್ತಾಯ ಮಾಡಿದರೆ ನನ್ನನ್ನು ಮನೆಯಿಂದ ಹೊರಗೆ ಹಾಕುತ್ತೇವೆ ಎಂದು ನನಗೂ ಸ್ಪಷ್ಟವಾಗಿ ಹೇಳಿಬಿಟ್ಟಿದ್ದಾರೆ.

ಅರವಿಂದ: ಇದರ ಮೇಲೂ ಆಕ್ಷನ್‌ತಗೊಳ್ಳಬೇಕೂ ಅನ್ತೀಯಾ?

ಅನುರಾಧ: ಹೌದು.. ಏನಾದರೂ ಆಗಲಿ, ಆಕ್ಷನ್ ತೆಗೆದುಕೊಳ್ಳಲೇ ಬೇಕು.

ಅರವಿಂದ: ನಿಮ್ಮ ತಂದೆ ಮನೆಯಿಂದ ಹೊರಕ್ಕೆ ಹಾಕಿದರೆ ಎಲ್ಲಿರ್ತೀಯಾ?

ಅನುರಾಧ: ಅದು ಆಮೇಲಿನ ಪ್ರಶ್ನೆ. ಆದರೆ ರಾಜ್‌ಕುಮಾರ್ ಈಸಲ ತಪ್ಪಿಸಿ ಕೊಳ್ಳ ಕೂಡದು. ನಾನೇನು ಅವನು ಇಟ್ಟುಕೊಂಡವಳೆ? ಅಥವಾ ಅವರ ಅಪ್ಪನ ಆಸ್ತಿಯೇ?

ಅರವಿಂದ: ಆದರೆ ಹೆಸರು ಕೆಟ್ಟ ಮೇಲೆ ನಿನ್ನನ್ನು ಯಾರು ಸ್ವೀಕರಿಸುತ್ತಾರೆ?

ಅನುರಾಧ: ಎಲ್ಲ ಗಂಡಸರೂ ನಾಮರ್ದರಾಗಿಬಿಟ್ಟಿಲ್ಲ ಸರ್! ನನ್ನನ್ನು ಸ್ವೀಕರಿಸುವವರೂ ಯಾರೋ ಇದ್ದಾರೆ. ಅವರ ಪ್ರೇಮವೇ ನನಗೆ ಹೋರಾಡುವ ಶಕ್ತಿ ತಂದು ಕೊಡುತ್ತೆ.

ಅರವಿಂದ: ಯಾರವನು?

ಅನುರಾಧ: ಅವನೇ, ಆ ಹೊತ್ತು ನಾನು ಪಾರ್ಕ್‌ನಲ್ಲಿ ಯಾರಿಗೋ ಕಾಯ್ತಾ ಇದ್ದೆನಲ್ಲ ಅವನು

ಅರವಿಂದ: ಹಾಗಾದರೆ ಅವನು ಯಾಕೆ ಬರಲಿಲ್ಲ?

ಅನುರಾಧ: ಬರುವುದಕ್ಕಾಗಲಿಲ್ಲ. ಇದ್ದಕ್ಕಿದ್ದ ಹಾಗೆ ನಗರದಿಂದ ಹೊರಗಡೆ ಹೋಗಬೇಕಾಗಿ ಬಂತು (ಬಿಡುವು) ಅವನೊಂದು ವೇಳೆ ಬಂದಿದ್ದರೆ..

ಅರವಿಂದ: ಬಂದಿದ್ದರೆ ಏನ್ಮಾಡ್ತಿದ್ದ?

ಅನುರಾಧ: ಅವನ ಹೊಟ್ಟೆಯ ಕರುಳನ್ನು ಬಗೆದು ಹೊರಗೆ ಹಾಕ್ತಿದ್ದ.

ಅರವಿಂದ: ನೀನು ಅವನ ಹೆಸರನ್ನು ಯಾತಕ್ಕೆ ಹೇಳ್ತಿಲ್ಲ?

ಅನುರಾಧ: ಆ ಹೆಸರು ನಿಮಗೇನೂ ಪ್ರಯೋಜನಕ್ಕೆ ಬರಲ್ಲ ಬಿಡಿ.

ಅರವಿಂದ: ಹಾಗಿದ್ದರೆ ನೀನು ಇದರ ಪರಿಣಾಮಗಳ ಬಗ್ಗೆ ಸರಿಯಾಗಿ ಯೋಚನೆ ಮಾಡಿದ್ದೀಯಾ?

ಅನುರಾಧ: ಹೌದು, ಮಾಡಿದ್ದೀನಿ, ಹಾಗೆಲ್ಲ ಪರಿಣಾಮಗಳ; ಲೆಕ್ಕ–ಗಿಕ್ಕ ಹಾಕುವ ಜಂಜಾಟದಲ್ಲಿ ಸಿಕ್ಕಿಕೊಳ್ಳಲು ಬಯಸುವುದೂ ಇಲ್ಲ.

ಅರವಿಂದ: ಸರಿ ಹಾಗಾದರೆ, ನಾನು ನಾಳೆ ರಾಜ್‌ಕುಮಾರ್‌ನನ್ನು ಕಾಲೇಜಿನಿಂದ ರಸ್ಟಿಕೇಟ್ ಮಾಡಿಬಿಡ್ತೇನೆ.

ಅನುರಾಧ: ಆದರೆ ನೀವು ಎಲ್ಲ ಪರಿಣಾಮಗಳ ಲೆಕ್ಕಾಚಾರ ಹಾಕಿದ್ದೀರೋ ಇಲ್ಲವೋ?

ಅರವಿಂದ: ಅವನನ್ನು ನಾನು ರಸ್ಟಿಕೇಟ್ ಮಾಡಲಿಕ್ಕೆ ಆಗಲ್ಲ ಅಂತ ಯೋಚನೆ ಮಾಡ್ತಿದ್ದೀಯೇನು? ಹೀಗೆ ಯಾಕೆ ಯೋಚಿಸುತ್ತಿದ್ದೀ?

ಅನುರಾಧ: ಯಾಕೆ ಅಂದರೆ, ನೀವು ಆಡೋದು ಬಹಳ; ಆದರೆ ಏನೂ ಮಾಡೋಲ್ಲ.

ಅರವಿಂದ: ಇದರರ್ಥ, ನಿನಗೆ ನನ್ನ ಮೇಲೂ ನಂಬಿಕೆ ಇಲ್ಲ, ನಿನ್ನ ಕಡೆಯಿಂದ ನಾನೇರಿಪೋರ್ಟ್ ಬರೆಸಲಿಲ್ಲವೇನು? ವಿರೋಧಿಸಲಿಕ್ಕೆ ನಾನೇ ನಿನಗೆ ಹೇಳಲಿಲ್ಲವೇನು?

ಅನುರಾಧ: ಹೇಳಿದಿರಲ್ಲ, ನನಗೆ ಸ್ವಲ್ಪ ಆಶ್ಚರ್ಯವೂ ಆಯಿತು.

ಅರವಿಂದ: ಆದರೆ ಏಕೆ?

ಅನುರಾಧ: ಏಕೆ ಅಂದರೆ ಮೂರು ವರ್ಷದ ಹಿಂದೆ ಚಂದೂ ಹತ್ತಿರವೂ ಹೀಗೇ ಹೇಳಿದ್ದಿರಿ. ಚಂದೂಗೆ ನಿಮ್ಮ ಒಂದೊಂದು ಮಾತೂ ವೇದವಾಕ್ಯವಾಗಿತ್ತು. ಅಷ್ಟೊಂದು ನಂಬುಗೆ. ಆದರೆ ಏನಾಯಿತು?

ಅರವಿಂದ: ನಾನು ಅವನ ಹತ್ತಿರ ಯಾವತ್ತೂ ಏನೂ ಹೇಳಿರಲಿಲ್ಲ.

ಅನುರಾಧ: ಸುಳ್ಳು ಹೇಳ್ತಾ ಇದ್ದೀರಿ ನೀವು. ಅವನ ಬೆಂಬಲಕ್ಕೆ ನೀವು ನಿಲ್ತೀರಿ ಅಂತ ಆಶ್ವಾಸನೆ ಕೊಟ್ಟಿದ್ದಿರಿ. ನಿಮ್ಮ ಸಾಮರ್ಥ್ಯದ ಮೇಲೆ ಅವನು ಹೋರಾಡಿದ. ಆದರೆ ಹೊಡೆದಾಟ ಆಯಿತು. ಅವನನ್ನು

ಕಾಲೇಜಿನಿಂದ ತೆಗೆದು ಹಾಕಲಾಯಿತು. (ಬಿಡುವು) ಮತ್ತು ನಿಮಗೆ ಅದಕ್ಕೆ ಪ್ರತಿಯಾಗಿ ಪ್ರಿನ್ಸಿಪಾಲ್‌ಗಿರಿ ಸಿಕ್ಕಿತು.

ಅರವಿಂದ: ಸುಳ್ಳು ಆರೋಪ ಮಾಡೋದಕ್ಕೆ ನಿನಗೆ ನಾಚಿಕೆ ಆಗೋಲ್ಲವೆ? ಪ್ರೆಸಿಡೆಂಟಂತೂ ಚಂದೂ ಮೇಲೆ ಕೇಸ್ ಹಾಕಿ ಸಜೆ ಕೊಡಿಸಬೇಕು ಅಂತ ಇದ್ದ. ಆದರೆ ನಾನು ಅವನನ್ನು ಉಳಿಸಿದೆ

ಅನುರಾಧ: ಆದರೆ ನೀವು ಸಮಯಕ್ಕೆ ತಕ್ಕಂತೆ ಬದಲಾಗಿದ್ದೀರಿ. ಈ ವಿಷಯ ಪ್ರತಿಯೊಬ್ಬ ಹುಡುನಿಗೂಗೊತ್ತು.

ಅರವಿಂದ: ಹಾಗಾದರೆ ನಿನಗೆ ನನ್ನ ಮೇಲೆ ನಂಬಿಕೆ ಇಲ್ಲವೇನು?

ಅನುರಾಧ: ನಂಬಿಕೆ ಇಡಬೇಕು ಅಂತ ಇಷ್ಟ. ಆದರೆ ಮನಸ್ಸು ಬಹಳ ಹೆದರುತ್ತೆ. ಒಂದು ವೇಳೆ ನೀವೇನಾದರೂ ಬದಲಾಗಿ ಬಿಟ್ಟರೆ, ನಾನು ಎತ್ಲಾಗೂ ಇಲ್ಲದ ಹಾಗೆ ಆಗಿ ಬಿಡ್ತೀನಿ. ನನ್ನ ವಿರೋಧ ಒಂದು ಆಡಿಕೆಯ ವಸ್ತು ಆಗಿ ಬಿಡುತ್ತೆ. ರಾಜ್‌ಕುಮಾರ್‌ನನ್ನು ಸಿಕ್ಕಿ ಹಾಕಿಸಲು ನಾನು ಒಳಸಂಚು ಮಾಡಿದ್ದೀನಿ ಅಂತ ಜನ ತಿಳಿದುಕೊಳ್ತಾರೆ.

ಅರವಿಂದ: ಸ್ವಲ್ಪ ಯೋಚನೆ ಮಾಡು ಅನುರಾಧ! ಹೆಸರು ಹಾಳಾಗುವುದರ ಅಪಾಯವನ್ನು ಮೈ ಮೇಲೆ ಎಳೆದುಕೊಂಡೂ ನೀನು ಹೋರಾಡಬಲ್ಲೆ ಅಂತ ಆದರೆ ನಾನು ಯಾಕೆ ಹಿಂದೆ ಸರಿಯಲಿ? ನಂಬಿಕೆ ಇಡು, ನಾನು ಕೆಲಸ ಬಿಡಬೇಕಾಗಿ ಬಂದರೂ ಸರಿಯೆ, ನಿನ್ನ ಬೆಂಬಲಕ್ಕೆ ನಿಲ್ತೀನಿ.

ಅನುರಾಧ: ಹಾಗಾದರೆ, ನಾನು ನಿಮ್ಮ ಮಾತುಗಳ ಮೇಲೆ ಭರವಸೆ ಇಡ್ತೀನಿ. ಈ ಪ್ರಕರಣದಲ್ಲಿ ನೀವೇ ಏಕೈಕ ಸಾಕ್ಷಿ. ನೀವು ಬದಲಾದರೆ, ನಾನು ಎಲ್ಲೂ ಮುಖ ತೋರಿಸೋಕ್ಕೆ ಆಗೋಲ್ಲ. ಅದೂ ಅಲ್ಲದೆ ಅವನೂ ತಿರಸ್ಕಾರ ಮಾಡೋದಕ್ಕೆ ಶುರು ಮಾಡ್ತಾನೆ.

ಅರವಿಂದ: ನೀನು ನಿಶ್ಚಿಂತೆಯಿಂದ ಇರು. ಈಗ ನಿನ್ನ ಹೋರಾಟ ನನ್ನ ಹೋರಾಟ. [ಟೆಲಿಫೋನ್ ರಿಂಗಾದ ಶಬ್ದ. ಅರವಿಂದ ರಿಸೀವರ್ ಎತ್ತಿಕೊಳ್ಳುತ್ತಾನೆ. ಲೀಲಾ ಕೂಡಾ ಬರುತ್ತಾಳೆ]

ಅರವಿಂದ: (ಪೋನ್‌ನಲ್ಲಿ) ಹೌದು ಮಾತಾಡ್ತಿದ್ದೀನಿ. ನಮಸ್ಕಾರ. ಯೋಚನೆ ಮಾಡಿದ್ದೀನಿ. ಹೌದು ಸರ್ ಚೆನ್ನಾಗಿ ಯೋಚನೆ ಮಾಡಿದ್ದೀನಿ, ನೊ, ಸರ್ ಮೈ ಡಿಸಿಷನ್ ಈಸ್ ಫೈನಲ್. ಕಾಂಟ್ ಬೀ ಛೇಂಜ್ಡ್.... ನಾಳೆ ನಾನ್ ರಾಜ್ ಕುಮಾರ್‌ನನ್ನು ರಸ್ಟಿಕೇಟ್ ಮಾಡ್ತಾ ಇದ್ದೀನಿ..... ಹೌದು ಸರ್ ಇದು ನನ್ನ ಅಂತಿಮ ತೀರ್ಮಾನ.... ಸರ್. ಏನು ಹೇಳಿದಿರಿ? ರಿಪೋರ್ಟನ್ನು ಅನುರಾಧಾಳ ಮುಂದೆ ಹರಿದು ಹಾಕಿಬಿಡಲೆ... ಅಂದರೆ ಅನುರಾಧಾ ಇಲ್ಲಿದ್ದಾಳೆ ಅಂತ ತಮಗೆ ಗೊತ್ತಿದೆ? ಏನು ಅವರ ತಂದೆ ನಿಮ್ಮ ಹತ್ತಿರ ಬಂದು ಕುಳಿತಿದ್ದಾರಾ? ಇಲ್ಲ ಸರ್, ನಾನು ಆಕ್ಷನ್ ತೆಗೆದುಕೊಳ್ತೀನಿ ಸರ್... ಏನು ಏನು ಹೇಳಿದಿರಿ? ನೀವು ಪೋಲೀಸ್‌ಗೆ ಫೋನ್ ಮಾಡ್ತಾಇದ್ದೀರಾ? ಹದಿನೈದು ಸಾವಿರ ರೂಪಾಯಿ ಹಗರಣದ ವಿಷಯ? ಆದರೆ ತಾವೇ..... ಏನು ನೀವು ಪೋಲೀಸ್‌ಗೆ ಇನ್‌ಫಾರ್ಮ್ ಮಾಡ್ತಾ ಇದ್ದೀರಾ? ತಾವು ಹೇಗೆ ಹೇಳ್ತೀರೋ ಹಾಗೇ ಆಗುತ್ತೆ ಸರ್, ನೋಸರ್, ಯಸ್ ಸರ್, ಯಸ್ ಸರ್... ಯಸ್ ಸರ್. [ಅರವಿಂದನು ಫೋನ್ ಇಟ್ಟು ಬಿಡುತ್ತಾನೆ. ಗಾಬರಿಯಿಂದಾಗಿ ಅವನ ಹಣೆಯ ಮೇಲೆ ಬೆವರ ಹನಿಗಳು ಕಾಣಿಸಿಕೊಳ್ಳುತ್ತವೆ]

ಲೀಲಾ: (ಅವನ ಸ್ಥಿತಿನೋಡಿ) ಪ್ರೆಸಿಡೆಂಟ್ ಸಾಹೇಬರು ಏನು ಹೇಳ್ತಾ ಇದ್ದರು? ನೀವು ಇಷ್ಟೊಂದು ಯಾಕೆ ಗಾಬರಿ ಆಗ್ತಿದ್ದೀರಿ?

ಅರವಿಂದ: (ತನ್ನ ಗಾಬರಿಯನ್ನು ಅಡಗಿಸುತ್ತ) ಅಂಥ ವಿಶೇಷವಾದ್ದೇನಿಲ್ಲ. ಕಾಲೇಜಿನ ಕ್ಲರ್ಕ್ ಹದಿನೈದು ಸಾವಿರ ರೂಪಾಯಿಗಳನ್ನು ನುಂಗಿ ಹಾಕಿದ್ದ. ಅದಕ್ಕೋಸ್ಕರವೇ ಪೋಲೀಸು ಇತ್ಯಾದಿ ಎಲ್ಲ...

ಅನುರಾಧ: ಆದರೆ ನೀವು, ನೀವೇ ಕಳ್ಳತನ ಮಾಡಿ ಬಿಟ್ಟಿದ್ದೀರೇನೋ ಅನ್ನುವ ಹಾಗೆ ಗಾಬರಿಯಾಗಿದ್ದೀರಿ.

ಅರವಿಂದ: ಎಷ್ಟೇ ಆದರೂ ಕಾಲೇಜಿಗೆ ಸಂಬಂಧಪಟ್ಟ ವಿಷಯ ತಾನೆ. ಅನುರಾಧ ನೀನು ರಿಪೋರ್ಟ್ ಮಾಡೋದು ನಿಮ್ಮ ತಂದೆಗೆ ಇಷ್ಟ ಇಲ್ಲ.

ಅನುರಾಧ: ಈಗ ಪ್ರಶ್ನೆ ಇರೋದು ತಂದೆ ಇಷ್ಟಪಡುತ್ತಾರೋ ಇಲ್ಲವೋ ಅನ್ನುವುದಲ್ಲ. ನೀವೇನು ಇಷ್ಟಪಡ್ತೀರಿ?

ಅರವಿಂದ: ನಾನ? ನಿಮ್ಮ ತಂದೆ ಸರಿಯಾಗೇ ಹೇಳ್ತಿದ್ದಾರೆ ಅಂತ ನನಗೆ ಅನ್ನಿಸುತ್ತೆ. ಎಷ್ಟೇ ಆದರೂ ಅನುಭವ ಇರೋರು, ನಿನ್ನ ಒಳ್ಳೆಯದು, ಕೆಟ್ಟದ್ದನ್ನು ಅವರು ಎಷ್ಟು ಯೋಚಿಸುತ್ತಾರೋ, ಬಹುಶಃ ನೀನು ಕೂಡಾ ಯೋಚಿಸಲ್ಲ.

ಅನುರಾಧ: ಆದರೆ ಫೋನ್ ಬರೋದಕ್ಕಿಂತ ಮುಂಚೆ ತಾವು.....

ಲೀಲಾ: ಅನುರಾಧ, ಮಾತಿಗೆ ಮಾತು ಬೆಳೆಸುವುದರಿಂದ ಏನೂ ಪ್ರಯೋಜನ ಇಲ್ಲ ಅಂತ ನಾನು ಅಂದುಕೊಂಡಿದ್ದೀನಿ.

ಅನುರಾಧ: ಸರ್ ನಿಮ್ಮನ್ನು ನಾನು ಸ್ಪಷ್ಟವಾಗಿ ಕೇಳ್ತಾ ಇದ್ದೀನಿ– ನೀವು ನಾಳೆ ಆಕ್ಷನ್ ತೆಗೆದುಕೊಳ್ತೀರಾ, ಇಲ್ಲವಾ? ನನ್ನ ಪರವಾಗಿ ಮಾತಾಡ್ತೀರಾ ಅಥವಾ ಇಲ್ಲವಾ?

ಅರವಿಂದ: ಸ್ವಲ್ಪ ಯೋಚನೆ ಮಾಡಿನೋಡು. ಆವೇಶ ಬೇರೆ. ಬುದ್ಧಿವಂತಿಕೆಯಿಂದ ಮುಂದುವರಿ. ಕಾಲೇಜಿನಿಂದ ಉಚ್ಚಾಟನೆಯಾದ ಮೇಲೂ ರಾಜ್‌ಕುಮಾರ್ ನಿನಗೆ ತೊಂದರೆಕೊಡಬಹುದು. ಅವನನ್ನು ಹೇಗೆ ನಂಬೋದು? ಕ್ಷಮಿಸುವುದರಿಂದ ಅವನ. ಮನಸ್ಸು ಬದಲಾದರೂ ಬದಲಾಗ ಬಹುದು. ಅವನನ್ನು ಪರಿವರ್ತಿಸಬಹುದು.

ಅನುರಾಧ: ನೀವು ಮಾತನ್ನು ಯಾಕೆ ತಿರಿಚುತ್ತಿದ್ದೀರಿ. ನನಗೆ ಬೆಂಬಲ ಕೊಡ್ತೀರೋ ಇಲ್ಲವೋ ಅನ್ನುವುದನ್ನು ಸ್ಪಷ್ಟವಾಗಿ ಹೇಳಿಬಿಡಿ.

ಅರವಿಂದ: ನಿಮ್ಮ ತಂದೆಯನ್ನು ಗಮನದಲ್ಲಿಟ್ಟುಕೊಂಡರೆ, ಬಹುಶಃ ನಾನು ನಿನ್ನನ್ನು ಬೆಂಬಲಿಸುವುದಕ್ಕೆ ಸಾಧ್ಯವಿಲ್ಲ ಅಂತ ಕಾಣಿಸುತ್ತೆ

ಅನುರಾಧ: ನಿಮ್ಮ ಕೆಲಸವನ್ನು ದೃಷ್ಟಿಯಲ್ಲಿಟ್ಟುಕೊಂಡು ನನಗೆ ಬೆಂಬಲ ಕೊಡೋದಕ್ಕೆ ಆಗಲ್ಲ ಅಂತ ಯಾಕೆ ಹೇಳ್ತಾ ಇಲ್ಲ?

ಅರವಿಂದ: ಅನುರಾಧಾ.......

ಅನುರಾಧ: ಚಂದೂ ಸರಿಯಾಗೇ ಹೇಳ್ತಿದ್ದ. ಸರ್!

ಅರವಿಮದ: ಏನಂತ ಹೇಳ್ತಿದ್ದ?

ಅನುರಾಧ: ಅವನು ನಿಮ್ಮನ್ನು ದೊಡ್ಡ ದೊಡ್ಡ, ಅರ್ಥವಿಲ್ಲದ ಶಬ್ದಗಳನ್ನು ಉಗುಳುವ ನಪುಂಸಕ ಬುದ್ಧಿ ಜೀವಿ ಅಂತ ಹೇಳ್ತಾ ಇದ್ದ. ನಿಜಕ್ಕೂ ನನ್ನನ್ನು ಎಲ್ಲಿಗೂ ಸಲ್ಲದವಳನ್ನಾಗಿ ಮಾಡಿಬಿಟ್ಟರಿ. ನನ್ನ ಎಲ್ಲ ಭ್ರಮೆಗಳೂ ನಾಶವಾದವು. ಈಗ ನೀವು ಚಿಂತೆಮಾಡುವ ಕಾರಣವಿಲ್ಲ. ನಾಳೆ ಬಹುಶಃ ಏನೂ ಪ್ರಶ್ನೆನೇ ಏಳುವುದಿಲ್ಲ. (ನಿಧ-ನಿಧಾನವಾಗಿ ಹೋಗುತ್ತಾಳೆ) [ದೀರ್ಘವಾದೊಂದು ನೀರವತೆ. ಅರವಿಂದ ಹಣೆ ಹಿಡಿದುಕೊಂಡು ಕೂತುಬಿಡುತ್ತಾನೆ]

ಲೀಲಾ: (ಗಾಬರಿಯದನಿಯಿಂದ) ಏನಾಗಿದೆ ನಿಮಗೆ?

ಅರವಿಂದ: (ಕಠೋರವಾಗಿ ನಗುತ್ತ) ಆತ್ಮಜ್ಞಾನ... ಆತ್ಮಜ್ಞಾನ. ಬೋಧಿಸತ್ವನಿಂದ ಉಪದೇಶ.

ಲೀಲಾ: ಸರಿಯಾಗಿ ಯಾಕೆ ಹೇಳ್ತಾಇಲ್ಲ?

ಅರವಿಂದ: ಹೇಳ್ತಾಇದ್ದೀನಲ್ಲ; ನನಗೆ ಅತ್ಮಜ್ಞಾನ ಉಂಟಾಗಿದೆ. ನಾನು ಕ್ಷುದ್ರನಾಗುತ್ತಿದ್ದೇನೆಂಬ ಆತ್ಮಜ್ಞಾನ. ಕೊಳೆತು ಹೋಗಿರುವ ಹಿಟ್ಟಿನಲ್ಲಿ ವಿಲವಿಲ ಒದ್ದಾಡುತ್ತಿರುವ ಕ್ರಿಮಿಯಾಗಿ ಬಿಟ್ಟಿರುವುದರ ಆತ್ಮಜ್ಞಾನ. ಪ್ರೆಸಿಡೆಂಟರ ಫೋನು ನನಗೆ ನನ್ನ ಚಿತ್ರವನ್ನು ತೋರಿಸಿಕೊಟ್ಟಿತು. ಒಪ್ಪಂದದ ಉರುಳಿನ ಮೇಲೆ ಒಂದೈವತ್ತು ಸಲ ನೇತಾಡಿರೋ ನಾನು. ಇನ್ನೊಬ್ಬರ ಮುಖವಾಡವನ್ನು ಚಿತ್ರಿಸುವ ಪ್ರಯತ್ನದಲ್ಲಿ ಸ್ವತಃ ನಾನೇ ಬೆತ್ತಲೆಯಾಗಿ ಬಿಡುವ ನಾನು... ನನ್ನ ಮೇಲೆ ಉಗುಳಿ.

ಲೀಲಾ: ಇದ್ದಕ್ಕಿದ್ದ ಹಾಗೆ ಏನಾಗಿಬಿಟ್ಟಿತು ನಿಮಗೆ?

ಅರವಿಂದ: ನನಗೆ ಏನಾಗೋಕ್ಕೆ ಸಾಧ್ಯ? ನನ್ನ ಚರ್ಮ ಈಗ ಘೇಂಡಾಮೃಗದ ಚರ್ಮದ ಹಾಗೆ ದಪ್ಪ ಆಗಿಬಿಟ್ಟದೆ. ಹಾಳುಮನೆಯ ಇಟ್ಟಿಗೆ ಮಣ್ಣು ಎಲ್ಲ ಬೀಳುತ್ತೆ ಅಂತ ಗೊತ್ತಿದೆ. ಇಷ್ಟಾದರೂ ಕಣ್ಣುಮುಚ್ಚಿಕೊಂಡು ನನ್ನ ಅನ್ನ ತಿನ್ನುತ್ತಾ ಇದ್ದೀನಿ. ಕೇಳಿಸಿ ಕೊಳ್ತೀಯ? ಆ ಸೂಳೇಮಗ ಏನು ಹೇಳಿದ ಅನ್ನೋದನ್ನು ಕೇಳಿಸಿಕೊಳ್ಳೋ ಸಾಮರ್ಥ್ಯ ಇದೆಯಾ ನಿನಗೆ? "ಮಿಸ್ಟರ್ ಅರವಿಂದ್ ನಿಮ್ಮ ಮೇಲೆ ಹದಿನೈದು ಸಾವಿರ ರೂಪಾಯಿ ಗುಳುಂ ಮಾಡಿದ ಆರೋಪ ಇದೆ" ಅಂತ.

ಲೀಲಾ: ಗುಳುಂ ಮಾಡಿದ್ದು?

ಅರವಿಂದ: ಹೌದು, ಗ್ರಾಂಟ್ ಬಂದ ಹಣವನ್ನು ಗುಳುಂ ಮಾಡಿದ ಆರೋಪ. ನಿನ್ನೆಯುವರೆಗೂ ಎಲ್ಲವೂ ಅಡ್‌ಜಸ್ಟ್‌ವೆಂಟ್ ಆಗಿತ್ತು. ಅಂಡರ್‌ಸ್ಟ್ರಾಂಡಿಗ್ ಇತ್ತು. ಆದರೆ ವಿರೋಧಮಾಡಿದ ಕೂಡಲೇ ಹಣ ಗುಳುಂ ಮಾಡಿದೆ ಅಂತ ಆಗಿಹೋಯಿತು.

ಲೀಲಾ: ಎಂಥಾ ಅಂಡರ್‌ಸ್ಟಾಂಡಿಗ್? ಎಂಥಾ ಅಡ್‌ಜಸ್ಟ್ ಮೆಂಟ್ ಕೊನೆಗೆ?

ಅರವಿಂದ: ಆ ನೀಚ ಮನುಷ್ಯ ಅಂಗಡಿಗಳ ಥರ ಇಪ್ಪತ್ತು ಶಿಕ್ಷಣ ಸಂಸ್ಥೆಗಳನ್ನು ತೆರೆದಿದ್ದಾನೆ. ಸಾಲದ್ದಕ್ಕೆ ಲೇವಾದೇವಿ ವ್ಯಾಪಾರ ಮಾಡ್ತಾನೆ. ಶಿಕ್ಷಣ ಸಂಸ್ಥೆಗಳ ಲಕ್ಷಾಂತರ ರೂಪಾಯಿ ಗ್ರಾಂಟನ್ನು ಈ ಶಿಕ್ಷಣ ತಜ್ಞ ತನ್ನ ಲೇವಾದೇವಿ ವ್ಯವಹಾರದಲ್ಲಿ ಬಳಸಿಕೊಳ್ತಾನೆ. ಈ ಬಂಡವಾಳದಿಂದ ಸಾವಿರಾರು ರೂಪಾಯಿ ಸಂಪಾದಿಸಿದ ಮೇಲೆ ಕಾಲೇಜಿಗೆ ಹಿಂತಿರುಗಿಸುತ್ತಾನೆ. ಈ ಧಂಧೆ ಅದೆಷ್ಟೋ ವರ್ಷಗಳಿಂದಲೂ ನಡೀತಾ ಇದೆ. ಯಾವಾಗಲೂ ಏನೂ ಆಗಿಲ್ಲ.

ಲೀಲಾ: ಅಂದರೆ ನೀವೂ ಕೂಡಾ....

ಅರವಿಂದ: ಹೌದು ನಾನೂ ಕೂಡಾ. ಮೋರಿಗೆ ಬಿದ್ದಮೇಲೆ ಕೆಟ್ಟ ವಾಸನೆ ತಪ್ಪಿಸಿ ಕೊಳ್ಳೋಕೆ ಆಗುತ್ತದೆಯೆ? ಕಳೆದ ವಾರ, ಫರ್ನಿಚರ್ ಹೆಸರಿನಲ್ಲಿ ಇವನು ಗ್ರಾಂಟಿನ ಹನ್ನೆರಡು ಸಾವಿರ ರೂಪಾಯಿ ಎತ್ತಿಕೊಂಡ. ನಾಳೆವಾಪಸ್ ಕೊಡ್ತಾ ಇದ್ದ. ಆದರೆ ಈಗ ಈ ಘಟನೆ ಆಯ್ತಲ್ಲ. ನಾನು ವಿರೋಧಿಸಿದೆ. ಅದಕ್ಕೆ ಹಣ ಗುಳುಂ ಮಾಡಿದೆ ಅಂತ. ದಗಲ್‌ಬಾಜಿ, ವಂಚಕ.

ಲೀಲಾ: ಇಷ್ಟೊಂದು ನೀಚತನವೆ?

ಅರವಿಂದ: ಏನು ಮಾಡಲಿ ಲೀಲಾ! ಅವನು ನನ್ನ ನಾಲಿಗೆ ಕಿತ್ತುಕೊಂಡು ಬಿಟ್ಟಿದ್ದಾನೆ. ಪೋಲೀಸಿನವರ custodyಗೆ ಹೋದ ಮೇಲೆ ಈ ಸೂಳೆಮಗನ ಮಗ ಅತ್ಯಾಚಾರ ಮಾಡುವುದಕ್ಕೆ ಪ್ರಯತ್ನಿಸಿದ ಅಂತ ನಾನು ಗಂಟಲು ಹರಿದುಕೊಂಡು ಹೇಳಿದರೂ ನನ್ನ ಮಾತನ್ನು ಯಾರು ನಂಬ್ತಾರೆ?

ಲೀಲಾ: ಈಗ ಹುಡುಗಿ ಗತಿ ಏನಾಗುತ್ತೆ?

ಅರವಿಂದ: ಈಗ ಏನಾಗುತ್ತೆ? ನ್ಯಾಯಾಲಯವೇ ಕೈ ಕೊಟ್ಟ ಮೇಲೆ ಅವಳು ತಾನೆ ಏನು ಮಾಡ್ತಾಳೆ? [ಟೆಲಿಫೋನ್ ರಿಂಗ್ ಆಗುತ್ತೆ. ಅರವಿಂದ ರಿಸೀವರ್ ತೆಗೆದು ಕೊಳ್ಳುತ್ತಾನೆ]

ಅರವಿಂದ: ಹಲೋ...ಏನು ಹೇಳಿದಿರಿ... ಆಕ್ಸಿಡೆಂಟ್?.. ಏನು? ನಮ್ಮ ಕಾಲೇಜಿನ ಹುಡುಗಿ ಟ್ರಕ್ಕಿನ ಕೆಳಗಡೆ ಸಿಕ್ಕಿ ಹಾಕಿಕೊಂಡುಬಿಟ್ಟಳೆ? ಏನವಳ ಹೆಸರು? ಏನಂದಿರಿ, ಅನುರಾಧ? (ರೀಸೀವರ್ ಅವನ ಕೈಯಿಂದ ಜಾರಿ ಹೋಗುತ್ತೆ)

ಲೀಲಾ: ಏನು, ಅನುರಾಧ?

ಅರವಿಂದ: ಹೌದು ಸತ್ತುಹೋದಳು. ನನ್ನ ಹೇಡಿತನವೇ ಅವಳನ್ನು ಸಾಯಿಸಿಬಿಡ್ತು. ಲೀಲಾ, ಅವಳ 'ವಿರೋಧ' ಮಾರಾಟ ವಾಗಲಿಲ್ಲ. ಯಾರೂ ಅವಳನ್ನು ಕೊಂಡುಕೊಳ್ಳೋಕೆ ಆಗಲಿಲ್ಲ. ಅವಳು ಹೋಗ್ತಾ ಹೋಗ್ತಾ ನನ್ನ ಮೇಲೆ ಉಗುಳಿಹೋದಳು. [ಅರವಿಂದ ವೇಗವಾಗಿ ಹೊರಕ್ಕೆ ಹೋಗುತ್ತಾನೆ. ಲೀಲಾ ದಿಜ್ಮೂಢಳಂತೆ ನಿಂತಿರುತ್ತಾಳೆ. ಕ್ರಮಕ್ರಮೇಣ ಕತ್ತಲೆ. ಮತ್ತೆ ಬೆಳಕು ರಂಗದ ಮಧ್ಯಭಾಗದ ಮೇಲೆ ಬೀಳುತ್ತದೆ. ಅರವಿಂದ ತುಂಬ ಚಿಂತಿತನಾಗಿದ್ದಾನೆ. ಸೋಫಾದ ಮುಂದಿರುವ ಸಣ್ಣ ಮೇಜಿನಮೇಲೆ ಏನೋ ಬರೆಯುತ್ತಿದ್ದಾನೆ ಸುತ್ತಲೂ ನಿಶ್ಯಬ್ದ. ರಹಸ್ಯಮಯಸಂಗೀತ. ವಿಮಲೇಂದುವಿನ ದೇಹಾಕೃತಿ ಕಾಣಿಸಿಕೊಳ್ಳುತ್ತದೆ

ವಿಮಲೇಂದು: ರಾಜೀನಾಮೆ ಬರೀತಾಇದ್ದೀಯಾ?

ಅರವಿಂದ: (ಅಶ್ಚರ್ಯದಿಂದ) ನೀನು ಮತ್ತೆ ಬಂದುಬಿಟ್ಟೆ?

ವಿಮಲೇಂದು: ನಾನೆಲ್ಲಿ ಹೋಗಿದ್ದೆ? ರಾಜೀನಾಮೆ ಯಾತಕ್ಕೆ ಬರೀತಾ ಇದ್ದೀಯ?

ಅರವಿಂದ: ನಿನ್ನ ಮಾತಿನ ಅರ್ಥ?

ವಿಮಲೇಂದು: ನನ್ನ ಪ್ರಶ್ನೆಗೆ ಉತ್ತರ ಕೊಡು.

ಅರವಿಂದ: ಎಲ್ಲ ಗೊತ್ತಿದ್ದೂ ಯಾಕೆ ಕೇಳ್ತಿ? ಇಂಥ ಮನಃಸ್ಥಿತಿಯಲ್ಲಿ ಕೆಲಸ ಮಾಡೋದಕ್ಕೆ ಆಗುತ್ತೇನು?

ವಿಮಲೇಂದು: ಹಾಗಾದರೆ ಏನು ಮಾಡ್ತೀಯ?

ಅರವಿಂದ: ಇನ್ನೂ ಯೋಚನೆ ಮಾಡಿಲ್ಲ.

ವಿಮಲೇಂದು: ಕೆಲಸದ ಹೊರತು ಬೇರೆ ಏನುತಾನೆ ನೀನು ಮಾಡೋದಕ್ಕೆ ಸಾಧ್ಯ? ಪ್ರತಿ ಸಲವೂ ನೀನು ಹೊಸ ಉದ್ಯೋಗ ಮಾಡುವ ಸಲುವಾಗಿಯೇ ಹಳೇ ಉದ್ಯೋಗ ಬಿಟ್ಟೆ. ಹರಿದು ಎಸೀ ನಿನ್ನ ರಾಜನಾಮೆ.

ಅರವಿಂದ: ನೀನು ಹೀಗೆ ಹೇಳ್ತಿಯಾ?

ವಿಮಲೇಂದು: ಹೌದು ನಾನೇ ಹೇಳ್ತಾ ಇದ್ದೀನಿ. ನಾನೂ ನಿನ್ನ ಜಾಗದಲ್ಲಿ ಇದ್ದಿದ್ದರೆ, ರಾಜೀನಾಮೆ ಖಂಡಿತಾ ಬರೀತಾ ಇದ್ದೆ, ಆದರೆ ಸ್ವಲ್ಪ ಹೊತ್ತಿನ ನಂತರ ಹರಿದು ಎಸೀತಿದ್ದೆ.

ಅರವಿಂದ: ಒಬ್ಬ ನಿರಪರಾಧಿ ಹುಡುಗಿಯ ಕೊಲೆಯ ಜವಾಬ್ದಾರಿ ನನ್ನ ತಲೆ ಮೇಲಿದೆ ಎಂಬುದನ್ನು ತಿಳಿದೂ?

ವಿಮಲೇಂದು: ಹೂಂ. ಯಾಕಂದ್ರೆ ನೀನು ಆ ಹುಡುಗಿಯ ಆತ್ಮಹತ್ಯೆಗೆ ಪೂರ್ತಿಯಾಗಿ ಜವಾಬ್ದಾರನಲ್ಲ.

ಅರವಿಂದ: ಹಾಗಾದರೆ ಯಾರು?

ವಿಮಲೇಂದು: ಮೂರು ಜನ. ಪ್ರೆಸಿಡೆಂಟು, ಹುಡುಗಿಯ ತಂದೆ ಮತ್ತು ನೀನು.

ಅರವಿಂದ: ಆದರೆ ಕೈ ಕೊಟ್ಟದ್ದು ನಾನು ತಾನೆ?

ವಿಮಲೇಂದು: ಇದರಿಂದ ಏನಾಗುತ್ತೆ? ಪ್ರೆಸಿಡೆಂಟ್ ನಿನಗೆ ಪೋಲೀಸರ ಧಮಕಿ ಹಾಕದೆ ಹೋಗಿದ್ದರೆ ನೀನು ನಿನ್ನ ತೀರ್ಮಾನ ಬದಲಾಯಿಸ್ತಾ ಇದ್ದೆಯಾ? ಅನುರಾಧಾಳ ಅಪ್ಪ ತನ್ನ ವಿರೋಧವನ್ನು ಕೇವಲ ಐದು ಸಾವಿರ ರೂಪಾಯಿಗೆ ಮಾರಿಬಿಟ್ಟಿದ್ದ. ಹುಡುಗಿಯನ್ನು ರಾತ್ರಿಯೋ ರಾತ್ರಿ ಬೇರೆ ಊರಿಗೆ ಕಳಿಸಿಬಿಡುವ ಹಂಚಿಕೆಹಾಕಿದ್ದರು. ಪ್ರೆಸಿಡೆಂಟ್ ಎಲ್ಲ ಏರ್ಪಾಟು ಮಾಡಿಬಿಟ್ಟಿದ್ದ. ಹಾಗಾಗಿ ನೀನು ವ್ಯರ್ಥವಾಗಿ ಪೂರ್ತಿ ಜವಾಬ್ದಾರಿಯನ್ನು ನಿನ್ನ ಮೇಲೆ ಎಳೆದುಕೊಳ್ತಿದ್ದೀ.

ಅರವಿಂದ: ಆದರೆ ನನ್ನ ಆತ್ಮ....

ವಿಮಲೇಂದು: ಆತ್ಮ? (ನಗುತ್ತಾನೆ). ಆತ್ಮ ಹೇಗಿರುತ್ತೆ? ಶರೀರಮಾತ್ರ ಸತ್ಯ. ಆತ್ಮ-ಗೀತ್ಮ ಎಲ್ಲ ಬೊಗಳೆ. ಗೊತ್ತಿದೆಯೇನು ನನ್ನ ವಿಧವಾ ಪತ್ನಿ.

ಅರವಿಂದ: ಏನಾಯ್ತು ಆಕೆಗೆ?

ವಿಮಲೇಂದು: ಗೊತ್ತಿದ್ದೂ ಕೇಳ್ತಿದ್ದಿಯಾ? ಏನೂ ಇಲ್ಲ. ಯಾವುದೋ ಒಂದು ಸಣ್ಣ ನೌಕರಿ ಮಾಡಿಕೊಂಡು ಹೊಟ್ಟೆ ಹೊರೀತಾ ಇದ್ದಾಳೆ. ಮಗಳನ್ನು ಸಾಕ್ತಿದ್ದಾಳೆ. ಯಾವಾಗಲಾದರೂ ಒಂದು ಸಲ ನನ್ನ ನೆನಪಿನಲ್ಲಿ ಅಳುತ್ತಾಳೆ.

ಅರವಿಂದ: ಮತ್ತೆ?

ವಿಮಲೇಂದು: ಆದರೆ ಜನ ಅವಳಿಗೆ ನೆಮ್ಮದಿಯಿಂದ ಇರೋಕೆ ಎಲ್ಲಿ ಬಿಡ್ತಾರೆ? ಅವಳಿಗೊಬ್ಬ ಹೊಸ ಆಫೀಸರ್ ಬಂದಿದ್ದಾನೆ. ಅವನಿಗೆ ಅರುವತ್ತು ವರ್ಷ. ಅವನು ನನ್ನ ಹೆಂಡ್ತಿ ಮೇಲೆ ಕಣ್ಣು ಹಾಕ್ತಾ ಇದ್ದಾನೆ. ಪ್ರಮೋಷನ್ನಿನ ಆಮಿಷ ತೋರಿಸ್ತಾ ಇದ್ದಾನೆ. ಈಗ ಹೇಳು ಎಲ್ಲಿದೆ ಆತ್ಮ? ಶರೀರ, ಕೇವಲ ಶರೀರ.

ಅರವಿಂದ: ಅಂದರೆ ನೀನು ಏನು ಹೇಳೋದಕ್ಕೆ ಇಷ್ಟಪಡ್ತೀಯಾ?

ವಿಮಲೇಂದು: ಹರಿದು ಎಸಿ ನಿನ್ನ ರಾಜೀನಾಮೆಯನ್ನು. ಠೀವಿಯಿಂದ ನಿನ್ನ ಉದ್ಯೋಗಮಾಡು. ಇದುವರೆಗೂ ನೀನು ಹಣ ಗುಳುಂ ಮಾಡಿಲ್ಲ. ಆದರೆ ಈಗ ನೀನು ಮಾಡು. ಪ್ರೆಸೆಡೆಂಟ್‌ಗೆ ಬೆಂಬಲ ಕೊಡು.

ಅರವಿಂದ: ಆ ನೀಚನಿಗೆ?

ವಿಮಲೇಂದು: ಅವನನ್ನು ಬಯ್ಯಬೇಡ. ನಿನಗೆ ಅವನು ಬಹಳ ಪ್ರಯೋಜನಕ್ಕೆ ಬರ್ತಾನೆ. ಗೊತ್ತಿದೆಯಾ, ಅವನು ಒಂದೆರಡು ದಿನದಲ್ಲಿ ಮಂತ್ರಿ ಆಗ್ತಾ ಇದ್ದಾನೆ. ಎಜುಕೇಶನ್ ಅವನಿಗೇ ಸಿಕ್ಕಿದರೂ ಸಿಕ್ಕಬಹುದು.

ಅರವಿಂದ: ಅದರಿಂದ ಏನಾಗುತ್ತೆ?

ವಿಮಲೇಂದು: ನಿನಗೆ ಅವನು ಏನಾದರೂ ಮಾಡೋದಿಲ್ಲವೇನು? ಏನಾದರೂ ಮಾಡ್ತಾನೆ ನೋಡ್ತಾ ಇರು, ಅವನು ನಿನಗೆ ಏನಾದರೂ ಒಂದು ಮಾಡ್ತಾನೆ ಏಳು. ಹರಿದು ಹಾಕು ನಿನ್ನ ರಾಜೀನಾಮೇ ಹರಿ....

ಅರವಿಂದ: ಇಲ್ಲ. ಆ ಹುಡುಗಿಗೆ ನಾನು ಮೋಸ ಮಾಡಿದ್ದೀನಿ. ನನ್ನಿಂದಾಗಿಯೇ ಅವಳು ಆತ್ಮಹತ್ಯೆ ಮಾಡಿಕೊಂಡಳು. ನನಗೆ ನನ್ನ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಬಿಡು.

ವಿಮಲೇಂದು: ಪ್ರಾಯಶ್ಚಿತ್ತವನ್ನೇ ಮಾಡಿಕೊಳ್ಳುವುದಾದರೆ, ನೀನೂ ಆತ್ಮಹತ್ಯೆ ಮಾಡಿಕೊಂಡು ಬಿಡು. ಆದರೆ ಅದರ ಅಗತ್ಯವಿಲ್ಲ. ಹೆಣ್ಣಿಗೆ ಅಪಮಾನ ಹೊಸದೇನಲ್ಲ. ಅದಂತೂ ಆಗುತ್ತಲೇ ಇದೆ. ಏನು ನಿನ್ನ ದ್ರೋಣಾಚಾರ್ಯ ಕೌರವರ ದಾಸ್ಯವನ್ನು ಬಿಟ್ಟು ಹೊರಟು ಹೋದನೇನು? ಅವನೇನು ಕತ್ತಿಯನ್ನು ಕೈಗೆತ್ತಿಕೊಂಡನೆ? ನನ್ನ ನಾಟಕವನ್ನು ನೀನು ಯಾಕೆ ಜ್ಞಾಪಿಸಿಕೊಳ್ಳಬಾರದು? ದ್ರೌಪದಿಗೆ ಸಾರ್ವಜನಿಕವಾಗಿ ಅಪಮಾನ ಆಯಿತು. ದ್ರೋಣಾಚಾರ್ಯ ಅಲ್ಲೇ ನಿಂತಿದ್ದ. ಅವನು ಸುಮ್ಮನೆ ಯಾಕಿದ್ದ? ಹೇಳು! ಸುಮ್ಮನೆ ಯಾಕಿದ್ದ? ನನ್ನ ನಾಟಕ ನೆನಪಿಸಿಕೋ, ನೆನಪಿಸಿಕೋ... [ನಿಧಾನವಾಗಿ ಬೆಳಕು ಕ್ಷೀಣಿಸುತ್ತದೆ. ವೇದನೆಯನ್ನುಂಟುಮಾಡುವಂಥ ಸಂಗೀತ. ಸ್ವಲ್ಪ ಹೊತ್ತಿನಲ್ಲೇ ರಂಗದ ಮೇಲೆ ಬೆಳಕು. ಅಶ್ವತ್ಥಾಮನು ಒಂದು ಸಣ್ಣ ಪೀಠದ ಮೇಲೆ ಕುಳಿತಿದ್ದಾನೆ. ದುಃಖಿತನಾಗಿದ್ದಾನೆ. ಕೃಪೀ ಬರುತ್ತಾಳೆ. ಕಸ ಗುಡಿಸುತ್ತಾ ಇದ್ದಾಳೆ. ಅಶ್ವತ್ಥಾಮನು ಯೋಚನೆಯಲ್ಲಿ ಮುಳುಗಿರುವುದನ್ನು ನೋಡುತ್ತಾಳೆ. ಅವನು ಕುಳಿತೇ ಕೋಪ ಗೊಳ್ಳುತ್ತಿದ್ದಾನೆ]

ಕೃಪೀ: ಏನು ಯೋಚನೆ ಮಾಡ್ತಾ ಇದ್ದೀಯಾ?

ಅಶ್ವತ್ಥಾಮ: ಏನೂ ಇಲ್ಲ.

ಕೃಪೀ: ಇಷ್ಟೊಂದು ಯಾಕೆ ಯೋಚನೆ ಮಾಡ್ತೀ? ಈ ವಯಸ್ಸಿನಲ್ಲಿ ನಿನ್ನನ್ನು ಜನ ವೇದಾಂತಿ ಅಂತ ಹೇಳೋಕೆ ಶುರು ಮಾಡಿದ್ದಾರೆ.

ಅಶ್ವತ್ಥಾಮ: ಅಮ್ಮ, ಅಪ್ಪ ಬರಲಿಲ್ಲವೆ?

ಕೃಪೀ: ಬರ್ತಾ ಇರಬೇಕು.

ಅಶ್ವತ್ಥಾಮ: ಈ ಹೊತ್ತು ಬೆಳಿಗ್ಗೆ ಪಾಂಡವರು ರಾಜಧಾನಿ ಬಿಟ್ಟು ವನವಾಸಕ್ಕೆ ಹೊರಟು ಹೋದರು, ಗೊತ್ತೇನು?

ಕೃಪೀ: ಗೊತ್ತಿದೆ.

ಅಶ್ವತ್ಥಾಮ: ಗೊತ್ತಿದ್ದೂ ನೀನು ಇಷ್ಟೊಂದು ತಣ್ಣನೆಯ ಉತ್ತರವನ್ನು ಹೇಗೆ ಕೊಡೋಕ್ಕೆ ಸಾಧ್ಯ?

ಕೃಪೀ: ಹಾಗಾದರೆ ಏನು ಮಾಡಲಿ; ಚೀರಾಡಲೆ?

ಅಶ್ವತ್ಥಾಮ: ಯಾರೂ ಚೀರಾಡ್ತಾನೇ, ಇಲ್ಲವಲ್ಲ, ಅನ್ನುವುದೇ ದುಃಖದ ಸಂಗತಿ. ಎಲ್ಲರೂ ಸುಮ್ಮನೇ ಕೂತಿರ್ತಾರೆ.

ಕೃಪೀ: ಹಾಗಾದರೆ ನೀನು ಚೀರು (ಹೊರಡಲು ತೊಡಗುತ್ತಾಳೆ)

ಅಶ್ವತ್ಥಾಮ: ಈಗ ಏನು ಚೀರಾಡಲಿ? ಯಾವಾಗ ಚೀರಬೇಕಾಗಿತ್ತೋ ಆಗ ಸುಮ್ಮನಿದ್ದು ಬಿಟ್ಟೆ, ಹೇಡಿಗಳ ಹಾಗೆ ನನ್ನ ತಂದೆಯೂ ಸುಮ್ಮನಿದ್ದು ಬಿಟ್ಟ,

ಕೃಪೀ: ಬೇರೆಯವರೂ ಸುಮ್ಮನಿದ್ದು ಬಿಟ್ಟರು.

ಅಶ್ವತ್ಥಾಮ: ಬೇರೆಯವರ ವಿಷಯ ನನಗೆ ಗೊತ್ತಿಲ್ಲ. ಆದರೆ ಅಪ್ಪ ಯಾಕೆ ಸುಮ್ಮನಿದ್ದರು? ನಾನು ಅಂದು ಕೊಳ್ಳುತ್ತಿದ್ದೆ, ಅವರ ಗರ್ಜನೆಯಿಂದ ಇಡೀ ರಾಜಸಭೆಯೇ ನಡುಗಿಹೋಗುತ್ತೆ, ಅಂತ. ದುರ್ಯೋಧನನ ರಕ್ತ ಹೆಪ್ಪುಗಟ್ಟಿಬಿಡುತ್ತೆ ಅಂತ

ಕೃಪೀ: ಆದರೆ ನೀನು ಯಾತಕ್ಕೆ ಸುಮ್ಮನಿದ್ದೆ? ನೀನಂತೂ ಗರ್ಜಿಸಬಹುದಾಗಿತ್ತು. ಹೆಚ್ಚು ಅಂದರೆ, ದುರ್ಯೋಧನನ ತಮ್ಮಂದಿರು ನಿನ್ನನ್ನು ಕೊಂದು ಹಾಕ್ತಿದ್ರು. ಆದರೆ ನೀನು ಯಾಕೆ ಸುಮ್ಮನಿದ್ದೆ?

ಅಶ್ವತ್ಥಾಮ: ಅದನ್ನೇ ನಾನೂ ಯೋಚನೆ ಮಾಡ್ತಿದ್ದೀನಿ. ನನ್ನ ಸಂಸ್ಕಾರದಲ್ಲಿ ಏನಂಥ ಹೆಚ್ಚು ಕಡಿಮೆ ಆಗಿತ್ತು ಅಂತ ನನ್ನ ರಕ್ತ ಬಿಸಿಯಾಗಲಿಲ್ಲ? ನನ್ನ ಶಬ್ದಗಳೇಕೆ ಘೂತ್ಕರಿಸುತ್ತ ಎದ್ದು ನಿಲ್ಲಲಿಲ್ಲ? ಹೇಳು ಹೀಗೇಕೆ ಆಗಲಿಲ್ಲ? ಎಲ್ಲಿ ತಪ್ಪಿದೆ ನನ್ನ ಸಂಸ್ಕಾರದಲ್ಲಿ?

ಕೃಪೀ: ಈ ಪ್ರಶ್ನೆಯನ್ನು ನೀನು ನನಗೇಕೆ ಕೇಳ್ತಿದ್ದೀ?

ಅಶ್ವತ್ಥಾಮ: ಹಾಗಾದರೆ ಯಾರನ್ನು ಕೇಳಲಿ? ನನಗೆ ಸಂಸ್ಕಾರವನ್ನು ನೀಡಿದವರು ಯಾರು? ನೀನು, ಅಥವಾ ಅಪ್ಪ ನೀಡಲಿಲ್ಲವೆ? ಹಾಗಾದರೆ ಯಾಕೆ ಹೀಗಾಯಿತು?

ಕೃಪೀ: ನಿಮ್ಮ ತಂದೆಯನ್ನು ಕೇಳು.

ಅಶ್ವತ್ಥಾಮ: ನೀನು ಯಾಕೆ ಉತ್ತರ ಹೇಳ್ತಾ ಇಲ್ಲ? ರಜಸ್ವಲೆಯೂ, ಏಕವಸ್ತ್ರಧಾರಿಣಿಯೂ ಆದ ದ್ರೌಪದಿಯನ್ನು ಸಭೆಯಲ್ಲಿ ಬೆತ್ತಲೆಗೊಳಿಸಲಾಗುತ್ತಿತ್ತು. ಆದರೂ ನಾನು ಸುಮ್ಮನೆ ಕೂತಿದ್ದೆ. ಆಕಾಶವನ್ನು ಚೂರು ಚೂರು ಮಾಡಿಬಿಡುವಂಥ ಮರ್ಮಘಾತಕವಾದ ದನಿಯಿಂದ ಅವಳು ಪುರುಷ ಜಾತಿಯನ್ನು ಕರೆಯುತ್ತಿದ್ದಳು. ಅದರ ನಂತರವೂ ನಾನು ಸುಮ್ಮನಿದ್ದೆ. ಹೇಳು ಯಾಕೆ ಹೀಗಾಯ್ತು?

ಕೃಪೀ: ಹೇಳ್ತಿದ್ದೀನಲ್ಲ, ನಿಮ್ಮ ತಂದೆಯನ್ನು ಕೇಳು.

ಅಶ್ವತ್ಥಾಮ: ಇದರರ್ಥ, ಗೊತ್ತಿದ್ದೂ ಕೂಡ ನನ್ನ ಪ್ರಶ್ನೆಯ ಉತ್ತರವನ್ನು ತಳ್ಳಿಹಾಕ್ತಿದ್ದೀಯಾ. ಅಮ್ಮ, ನೀನು ಚಿಕ್ಕಂದಿನಿಂದಲೂ ಪ್ರತಿಭಟನೆ ಮಾಡುವುದನ್ನು ಯಾತಕ್ಕೆ ಕಲಿಸಲಿಲ್ಲ? ಅನ್ಯಾಯ ಮತ್ತು ಅತ್ಯಾಚಾರವನ್ನು ನೋಡಿದ ಕೂಡಲೇ ಅನ್ಯಾಯ ಮಾಡಿದವನ ಕೊರಳು ಕತ್ತರಿಸಿ ಹಾಕುವಂಥ ಶಿಕ್ಷಣವನ್ನು ನನಗೆ ಯಾಕೆ ಕೊಡಲಿಲ್ಲ?

ಕೃಪೀ: ನನಗೆ ಗೊತ್ತಿಲ್ಲ,

ಅಶ್ವತ್ಥಾಮ: ಯಾಕೆ ಯೋಚನೆ ಮಾಡ್ತಿಲ್ಲ ನೀನು? ವನವಾಸಕ್ಕೆ ಹೋಗುವುದಕ್ಕೆ ಮುಂಚೆ ಪಾಂಡವರು ತಂದೆಯವರನ್ನು ಭೇಟಿಮಾಡೋದಕ್ಕೆ ಯಾಕೆ ಬರಲಿಲ್ಲ. ಅದೂ ಅಲ್ಲದೆ ಅವರ ನೆಚ್ಚಿನ ಶಿಷ್ಯ ಅರ್ಜುನ ಕೂಡ ಬರಲಿಲ್ಲ. ಯಾಕೆ ಯಾಕೆ ಹೀಗಾಯ್ತು?

ಕೃಪೀ: ನಾನೇನು ಹೇಳ ಬಲ್ಲೆ? ಬರಲಿಲ್ಲ, ಅದು ಅವರ ಮರ್ಜಿಗೆ ಬಿಟ್ಟದ್ದು.

ಅಶ್ವತ್ಥಾಮ: ಇಲ್ಲ, ವಿಷಯ ಇಷ್ಟು ಸರಳವಲ್ಲ, ಅಮ್ಮ. ನಿನ್ನೆಯ ಘಟನೆಯ ನಂತರ ಅವರಿಗೆ ತಂದೆಯವರ ಬಗ್ಗೆ ತಿರಸ್ಕಾರ ಬಂದಿದೆ. ಅವರ ಪಾಲಿಗೆ ತಂದೆಯವರು ಗೌರವಾನ್ವಿತ ವ್ಯಕ್ತಿ. ಅಲ್ಲ, (ದ್ರೋಣಾಚಾರ್ಯ

ಬರುತ್ತಾನೆ) ಅಪ್ಪಾ, ವನವಾಸಕ್ಕೆ ಹೋಗುವುದಕ್ಕೆ ಮುಂಚೆ, ಪಾಂಡವರು ನಿಮ್ಮನ್ನು ಯಾಕೆ ನೋಡೋಕ್ಕೆ ಬರಲಿಲ್ಲ?

ದ್ರೋಣ: ಯಾತಕ್ಕೆ ಬರ್ತಾರೆ?

ಅಶ್ವತ್ಥಾಮ: ಅವರು ನಿಮ್ಮ ಶಿಷ್ಯರಲ್ಲವೇನು?

ದ್ರೋಣ: ಆದರೆ ನಾನವರಿಗೆ ಗುರು ಯಾವಾಗ ಆಗಿದ್ದೆ?

ಅಶ್ವತ್ಥಾಮ: ಇಡೀ ಜಗತ್ತು ತಮ್ಮನ್ನು ಮಹಾನ್ ಆಚಾರ್ಯ ಅಂತ ತಿಳಿದಿದೆ.

ದ್ರೋಣ: ಜಗತ್ತನ್ನು ಒಪ್ಪಿಸಲು ಸಾಧ್ಯವಿಲ್ಲವೇನು?

ಅಶ್ವತ್ಥಾಮ: ಅಪ್ಪಾ, ನೀವು ನಿನ್ನೆ ಸಭೆಯಲ್ಲಿ ಯಾಕೆ ಸುಮ್ಮನಿದ್ದಿರಿ? ನಿನ್ನೆಯಿಂದ ಈ ಪ್ರಶ್ನೆ ನನ್ನನ್ನು ಕಿತ್ತು ತಿನ್ನುತ್ತಾ ಇದೆ. ಯಾಕೆ ಸುಮ್ಮನಿದ್ದಿರಿ ಹೇಳ್ರಲ್ಲ?

ದ್ರೋಣ: ಈಗ ಈ ಪ್ರಶ್ನೆಗೆ ಉತ್ತರ ಕೊಡುವ ಅವಶ್ಯಕತೆ ಇದೆಯಾ?

ಅಶ್ವತ್ಥಾಮ: ಹೌದು ಅಪ್ಪ, ದ್ರೌಪದಿಯ ಕೂಗನ್ನು ಯಾರೂ ಕೇಳಿಸಿಕೊಳ್ಳದೇ ಇದ್ದಾಗ, ಅವಳು ನಿಮ್ಮ ಮುಂದೆ ಬಂದು ನಿಂತು ಕೊಂಡಳು. ಜ್ಞಾಪಕ ಇದೆಯಾ, ಅವಳು ಏನು ಹೇಳಿದಳು ಅಂತ? ಅವಳು ಹೇಳಿದ್ದಳು: ಆಚಾರ್ಯ ತಾವಂತೂ ಪಾಂಡವರ ರಕ್ತ ಸಂಬಂಧಿಗಳೂ ಅಲ್ಲ, ಕೌರವರ ರಕ್ತ ಸಂಬಂಧಿಗಳೂ ಅಲ್ಲ. ತಾವು ಇಬ್ಬರಿಗೂ ಗುರುಗಳು. ಏನು, ದುರ್ಯೋಧನ ತಾವು ಹೇಳುವುದನ್ನು ಒಪ್ಪುವುದಿಲ್ಲವೆ? ತಮಗಂತೂ ಅಧಿಕಾರದ ಮೋಹ ಇಲ್ಲ. ತಮ್ಮ ಶಿಷ್ಯಂದಿರ ಪತ್ನಿಗೆ ತುಂಬಿದ ಸಭೆಯಲ್ಲಿ ಸಾರ್ವಜನಿಕವಾಗಿ ಅವಮಾನವಾಗುತ್ತಿರುವುದನ್ನು ತಾವು ನೋಡಬಲ್ಲಿರಾ? ಎತ್ತಿಕೊಳ್ಳಿ ತಮ್ಮ ಧನುಸ್ಸನ್ನು. (ಬಿಡುವು) ಆದರೆ ನೀವು ಸುಮ್ಮನಿರೋದು ಯಾಕೆ?

ದ್ರೋಣ: ಈ ಪ್ರಶ್ನೆಗೆ ಉತ್ತರವನ್ನು ನಿಮ್ಮ ಅಮ್ಮನ ಹತ್ತಿರ ಕೇಳು.

ಅಶ್ವತ್ಥಾಮ: ಅಮ್ಮನನ್ನು ಕೇಳಿದರೆ ಅವಳು ಹೇಳ್ತಾಳೆ ಅಪ್ಪನನ್ನು ಕೇಳು ಅಂತ. ಈಗ ನೀವು ನೋಡಿದರೆ ಅಮ್ಮನ ಕಡೆ ಕೈತೋರಿಸ್ತಾ ಇದ್ದೀರಿ.

ದ್ರೋಣ:	ಯಾರು ಜವಾಬ್ದಾರರೋ ಅವರನ್ನೇ ಮೊದಲು ಕೇಳಬೇಕು.
ಕೃಪೀ:	ನಿಮ್ಮ ಮೌನಕ್ಕೆ ನಾನು ಜವಾಬ್ದಾರಳೆ? ನನ್ನ ಮೇಲೆ ಆರೋಪ ಮಾಡುತ್ತಿರುವುದಕ್ಕೆ ನಿಮಗೇನೂ ಅನ್ನಿಸುವುದಿಲ್ಲವೆ?
ದ್ರೋಣ:	ಸ್ವಲ್ಪ ಆಳವಾಗಿ ಯೋಚನೆ ಮಾಡಿನೋಡು, ಹಿಂದಿನ ಸಂಗತಿಗಳ ಹಿನ್ನೆಲೆಯಲ್ಲಿ ಯೋಚಿಸು.
ಕೃಪೀ:	ನಿಮ್ಮ ನಪುಂಸಕ ನಡವಳಿಕೆಯನ್ನು ಮುಚ್ಚಿಕೊಳ್ಳಲು ನನ್ನ ಮೇಲೆ ಆರೋಪ ಹೊರಿಸುವುದಕ್ಕೆ ನಿಮಗೆ ಸ್ವಲ್ಪವಾದರೂ ನಾಚಿಕೆ ಆಗೋದಿಲ್ವೇ? ನಾನು ಕೇಳ್ತಾ ಇದ್ದೀನಿ ನಿಮ್ಮ ಆಚಾರ್ಯತ್ವ ಎಲ್ಲಿ ಸತ್ತುಹೋಯಿತು? ಅದು ಕೇವಲ ಏಕಲವ್ಯನ ಹೆಬ್ಬೆರಳನ್ನು ಕತ್ತರಿಸಿಕೊಳ್ಳುವ ಮತ್ತು ಸೂತಪುತ್ರ ಎಂದು ಹೇಳಿ ಕರ್ಣನನ್ನು ಅವಹೇಳನ ಮಾಡುವಷ್ಟಕ್ಕೆ ಸೀಮಿತವಾಗಿತ್ತೆ? ನೀವು ನಿಮ್ಮ ಶಿಷ್ಯರನ್ನು ಯಾಕೆ ತಡೆಯಲಿಲ್ಲ? ಅವರ ಮೇಲೆ ನಿಮ್ಮ ನೈತಿಕ ಅಧಿಕಾರ ಯಾವುದೂ ಇರಲಿಲ್ಲವೆ?
ದ್ರೋಣ:	ಆವೇಶ ತರ್ಕವಲ್ಲ. ಸ್ವಲ್ಪ ನಿನ್ನ ಕಡೆ ನೋಡಿಕೋ.
ಕೃಪೀ:	ಏನು ನೋಡಲಿ? ನಿಮಗೆ ನಿಮ್ಮ ಶತ್ರು ದ್ರುಪದನ ಮಗಳಿಗೆ ಅಪಮಾನ ಆಗುತ್ತಿದ್ದುದನ್ನು ನೋಡಿ ಒಂದು ಥರದ ಹಿಂಸಾ ರೂಪಿ ಆನಂದ ಆಗ್ತಾಇತ್ತು.
ದ್ರೋಣ:	ಆದರೆ ಅಲ್ಲಿ ಕೃಪಾಚಾರ್ಯ, ವಿದುರ, ಮತ್ತು ಭೀಷ್ಮರು ಕೂಡ ಇದ್ದರಲ್ಲವೆ. ಅವರು ಯಾಕೆ ಸುಮ್ಮನಿದ್ದರು? ಇದರ ಕಾರಣಗಳ ಬಗ್ಗೆ ಯಾತಕ್ಕೆ ನೀವು ವಿಚಾರ ಮಾಡಬಾರದು?
ಕೃಪೀ:	ಅವರು ಯಾರೂ ಶಿಕ್ಷರಲ್ಲ. ಆಚಾರ್ಯರಲ್ಲ. ನೀವು ಸುಮ್ಮನೆ ಇದ್ದು ಶಿಕ್ಷಕರಿಗೆ ಅನ್ಯಾಯವನ್ನು ನುಂಗಿಕೊಳ್ಳುವ ಒಂದು ಪರಂಪರೆಯನ್ನು ನೀಡಿದಿರಿ. ನಾಳಿನ ಇತಿಹಾಸ ನಿಮ್ಮನ್ನು ದೂರಲಿದೆ.
ಅಶ್ವತ್ಥಾಮ:	ಅಮ್ಮಾ!
ಕೃಪೀ:	ಸುಮ್ಮನಿರು! ನೀನು ಯಾಕೆ ಹೇಳಲಿಲ್ಲ? ದುರ್ಯೋಧನನ ತಮ್ಮ

ವಿಕರ್ಣ ಎದ್ದು ನಿಂತುಕೊಂಡು ಪ್ರತಿಭಟಿಸಬಹುದಾದರೆ, ನೀನು ಯಾಕೆ ಸುಮ್ಮನಿದ್ದೆ? ನಿನ್ನ ಆಧ್ಯಾತ್ಮ ಚಿಂತನೆ, ಬ್ರಹ್ಮಜ್ಞಾನ ಎಲ್ಲವೂ ಢೋಂಗಿ. ದ್ರೌಪದಿಯ ತೆರೆದ ಮೈಯನ್ನು ನೋಡಬೇಕೆಂಬ ಹೀನ ಬಯಕೆ ನಿನ್ನನ್ನು ಪೀಡಿಸುತ್ತಿತ್ತು ಅಂತ ಯಾಕೆ ಹೇಳಲ್ಲ,

ದ್ರೋಣ: ಕೃಪೀ!

ಕೃಪೀ: ಚೀರಬೇಡಿ. ಹೆಚ್ಚೆಂದರೆ ಏನಾಗ್ತಿತ್ತು? ಕೌರವರು ಒಟ್ಟಾಗಿ ನಿಮ್ಮಿಬ್ಬರ ಮೇಲೆ ಹಲ್ಲೆ ಮಾಡುತ್ತಿದ್ದರು. ನಿಮ್ಮನ್ನು ಕೊಲ್ಲುತ್ತಿದ್ದರು. ಆ ಸಂದರ್ಭದಲ್ಲಿ ನಾನು ಈಗಿತ್ತಿನಷ್ಟು ದುಃಖಿ ಖಂಡಿತ ಆಗ್ತಿರಲಿಲ್ಲ.

ದ್ರೋಣ: ಕೃಪೀ, ಇದೇ ಮಾತನ್ನು ನೀನು ಇಪ್ಪತ್ತು ವರ್ಷಗಳ ಹಿಂದೆ ಯಾಕೆ ಹೇಳಲಿಲ್ಲ?

ಕೃಪೀ: ಹೇಳಿದ್ದರೆ ಏನಾಗ್ತಿತ್ತು?

ದ್ರೋಣ: ಬಹುಶಃ ಈ ಘಟನೆ ನಡೆಯುತ್ತಿರಲಿಲ್ಲ.

ಕೃಪೀ: ಇಪ್ಪತ್ತು ವರ್ಷಗಳ ಹಿಂದೆ ನಾನು ಅಂಥದ್ದೇನು ಮಾಡಿದೆ?

ದ್ರೋಣ: ಜ್ಞಾಪಿಸಿಕೋ, ಅಶ್ವತ್ಥಾಮ ಆಗಿನ್ನೂ ಚಿಕ್ಕ ಹುಡುಗ. ನೀನು ನನ್ನನ್ನು ದ್ರುಪದನ ಎದುರಿಗೆ ಕೈ ಚಾಚುವುದಕ್ಕೆ ಭಿಕ್ಷೆ ಬೇಡೋದಕ್ಕೆ ಕಳಿಸಿದ್ದೆ.

ಕೃಪೀ: ಆದರೆ ಆಗ ನೀವು ದರಿದ್ರರಂತೂ ಆಗೇ ಇದ್ದಿರಲ್ಲ. ಮನೆಯಲ್ಲಿ ಎರಡು ಹಿಡಿಯಷ್ಟು ಹಿಟ್ಟು ತಾನೆ ಎಲ್ಲಿರುತ್ತಾ ಇತ್ತು? ದ್ರುಪದನ ಹತ್ತಿರ ಕಳಿಸದೆ ಇನ್ನೇನು ಮಾಡಲಿ?

ದ್ರೋಣ: ನೀನು ಒಂದು ಕ್ಷಣವೂ ನನಗೆ ನೆಮ್ಮದಿಯಿಂದ ಇರೋದಕ್ಕೆ ಬಿಡಲಿಲ್ಲ. ಹಗಲು-ರಾತ್ರಿ ಯಾವಾಗಲೂ ನನ್ನ ಬಡತನದ ಬಗ್ಗೆ ನೀನು ದೂರುತ್ತಾ ಇದ್ದೆ. ನನ್ನ ಬಿಲ್ವಿದ್ಯೆಯ ಬಗೆಗಿನ ಅಭಿಮಾನದ ಒಂದು ಮಾತನ್ನೂ ನೀನು ಹೇಳಲಿಲ್ಲ.

ಅಶ್ವತ್ಥಾಮ: ಇದು ನಿಜವೇನಮ್ಮಾ?

ಕೃಪೀ: ಯಾವ ದಿನ ನಾನು ಅಶ್ವತ್ಥಾಮನಿಗೆ ಹಾಲು ಅಂತ ಹೇಳಿ ಹಿಟ್ಟನ್ನು ಕದರಿ ಕುಡಿಸಿದ್ದೆನೋ ಆ ದಿನವನ್ನು ಯಾಕೆ ನೆನಪಿಸುತ್ತೀರಿ?

ದ್ರೋಣ: ಅದೇ ದಿನ! ಆ ದಿನ ಹಸಿವು ನನ್ನ ತತ್ತ್ವಕ್ಕಿಂತ ದೊಡ್ಡದಾಗಿ ಬಿಟ್ಟಿತು, ಸೇಡು ವಿವೇಕವನ್ನು ಗೆದ್ದು ಬಿಟ್ಟಿತು. ಆ ದಿನ ನೀನು ನನ್ನನ್ನು ಪುಸಲಾಯಿಸಿದೆ. ಆ ದಿನ ನೀನು ನನ್ನನ್ನು ರಾಜರ ಅನ್ನದ ದಾಸ್ಯತ್ವಕ್ಕೆ ತಳ್ಳಿದೆ. ನಿನಗೆ ಅಶ್ವತ್ಥಾಮನ ಸಲುವಾಗಿ ಹಾಲು ಬೇಕಾಗಿತ್ತು. ನಿನಗೆ ಸ್ವಂತಕ್ಕೆ ಬಟ್ಟೆ, ರಾಜರ ಕಡೆಯಿಂದ ಸನ್ಮಾನ ಇದೆಲ್ಲ ಬೇಕಾಗಿತ್ತು. ಆ ದಿನ ನೀನು ಯಾತಕ್ಕೆ ನನ್ನನ್ನು ತಡೆಯಲಿಲ್ಲ? ನನ್ನ ದುರ್ಬಲ ಆತ್ಮಕ್ಕೆ ಶಕ್ತಿ ಯಾತಕ್ಕೆ ತುಂಬಲಿಲ್ಲ? ಯಾಕೆ ನೀನು ಅನುಕೂಲಗಳನ್ನು ಅನುಭವಿಸುವುದಕ್ಕೆ ನನ್ನನ್ನು ಪುಸಲಾಯಿಸಿದೆ? ರಾಜರ ಅನ್ನದ ದಾಸ್ಯದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದೆ ನನಗೆ ವಿಧಿ ಇಲ್ಲ ಅನ್ನುವ ಹಾಗೆ ಯಾಕೆ ಮಾಡಿದೆ?

ಅಶ್ವತ್ಥಾಮ: ಅಮ್ಮ, ಆ ದಿನ ನೀನು ಹಿಟ್ಟನ್ನು ನೀರಿನಲ್ಲಿ ಕದಡಿಕೊಡುವ ಬದಲು ವಿಷ ಯಾಕೆ ಕುಡಿಸಲಿಲ್ಲ? ನನ್ನನ್ನು ರಾಜೀ ಸಂತಾನ ಎನ್ನುವ ಹಾಗೆ ಯಾಕೆ ಮಾಡಿದೆ ನೀನು? ಅಪ್ಪನನ್ನು ಋಷಿ ಪರಂಪರೆಯಿಂದ ಕೆಡವಿ ರಾಜಕುವರರ ದಾಸ್ಯದಲ್ಲಿ ಏಕೆ ತಳ್ಳಿಬಿಟ್ಟೆ?

ದ್ರೋಣ: ಅಲ್ಲದೆ ಆ ರಾಜರ ಅನ್ನದ ದಾಸ್ಯವು ನನ್ನ ವಿವೇಕವನ್ನು ಖರೀದಿಸಿ ಬಿಟ್ಟಿತು. ನನ್ನ ನ್ಯಾಯಬುದ್ಧಿಯನ್ನು ಖರೀದಿಸಿತು. ನಾನು ಏಕಲವ್ಯನ ಹೆಬ್ಬೆರಳನ್ನು ಕತ್ತರಿಸಬೇಕಾಯಿತು. ವ್ಯವಸ್ಥೆಯ ಮರೆಯಲ್ಲಿ ಕರ್ಣನಂಥ ಪ್ರತಿಭಾವಂತ ವಿದ್ಯಾರ್ಥಿಯನ್ನು ನಾನು ತಿರಸ್ಕರಿಸಬೇಕಾಯಿತು. ಪಕ್ಷಪಾತ, ಕ್ಷುದ್ರತೆ ನನ್ನ, ನನ್ನತನವನ್ನು ಕಸಿದುಕೊಂಡು ಬಿಟ್ಟುವು. ಅಶ್ವತ್ಥಾಮ ಆ ರಾಜಿಯು ನನ್ನನ್ನೆಂದಿಗೂ ಸರಿಯಾದ ಮನುಷ್ಯನಾಗಲು ಬಿಡಲಿಲ್ಲ. ಹಾಗಿದ್ದಾಗ ನಾನು ನಿಜವಾದ ಮನುಷ್ಯರನ್ನು ಎಲ್ಲಿಂದ ನಿರ್ಮಿಸಲಿ?

ಕೃಪೀ: ಆದರೆ ರಾಜರ ಅನ್ನದ ದಾಸ್ಯದಿಂದ ಬಿಡುಗಡೆ ಪಡೆಯುವ ಪ್ರಯತ್ನವನ್ನೇಕೆ ನೀವು ಮಾಡಲಿಲ್ಲ?

ದ್ರೋಣ: ಮಾಡುವುದಕ್ಕಾಗಲಿಲ್ಲ, ಆ ದಾಸ್ಯತೆ ನನಗೆ ಸುರಕ್ಷತೆಯನ್ನು ಕೊಟ್ಟಿತು. ಹುಸಿ ಪ್ರತಿಷ್ಠೆಯನ್ನು ಕೊಟ್ಟಿತು. ಅನುಕೂಲಗಳು ನನ್ನ ಕತ್ತಿಯ ಅಲಗನ್ನು ಮೊಂಡಾಗಿಸಿದವು. ಆ ದಾಸ್ಯತೆ, ಸೇಡು

ತೀರಿಸಿಕೊಳ್ಳಬೇಕೆಂದು ಇಚ್ಛಿಸುವಂಥ ತನ್ನ ಅಹಂಕಾರವನ್ನು ಈ ಜಗತ್ತಿಗಿಂತ ದೊಡ್ಡದೆಂದು ಭಾವಿಸುವಂಥ ನನ್ನೊಳಗಿನ ಮನುಷ್ಯನನ್ನು ಎಚ್ಚರಿಸಿತು. ದ್ರುಪದನ ವಿರುದ್ಧ ಸೇಡು ತೀರಿಸಿಕೊಳ್ಳುವ ಸಲುವಾಗಿ ನಾನು ನನ್ನ ವಿದ್ಯಾರ್ಥಿಗಳಿಗೆ ಯುದ್ಧದ ಹುಚ್ಚು ಹತ್ತಿಸಿದೆ. ನನ್ನ ಸ್ವಾರ್ಥಕ್ಕಾಗಿ ಅವರನ್ನು ಬಳಸಿಕೊಂಡೆ ಕೃಪೀ. ನಾನು ಪ್ರತಿದಿನವೂ ಸಣ್ಣಮನುಷ್ಯನಾಗುತ್ತಾ ಹೋದೆ.

ಅಶ್ವತ್ಥಾಮ: ಅಪ್ಪ ಈಗ ರಾಜಕೀಯ ದಾಸ್ಯವನ್ನೇಕೆ ಬಿಟ್ಟಬಿಡಬಾರದು ನೀವು? ಯಾವುದು ನ್ಯಾಯವೋ, ಯಾವುದು ಸತ್ಯವೋ ಅದರ ಪಕ್ಷವನ್ನೇಕೆ ವಹಿಸಬಾರದು ನೀವು?

ದ್ರೋಣ: ಇಲ್ಲ ಮಗೂ, ಈಗ ಅದು ಸಾಧ್ಯವಿಲ್ಲ. ತುಂಬ ತಡವಾಗಿ ಹೋಯಿತು. ಯಾವುದು ನನಗೆ ಅನ್ನ ಕೊಡುತ್ತೋ, ಬಟ್ಟೆ ಕೊಡುತ್ತೋ ಅದರ ಪಕ್ಷವನ್ನೇ ವಹಿಸಬೇಕು ನಾನೀಗ. ಈಗ ಈ ಸ್ಥಿತಿಯಲ್ಲಿ ಬದಲಾವಣೆ ಸಾಧ್ಯವಿಲ್ಲ.

ಅಶ್ವತ್ಥಾಮ: ದ್ರೌಪದಿಗೆ ಆದ ಈ ಅಪಮಾನದ ಪರಿಣಾಮ ಏನಾಗಬಹುದಪ್ಪಾ?

ದ್ರೋಣ: ಯುದ್ಧ, ಸರ್ವನಾಶ. ನಾನು ಕಲಿಸಿಕೊಟ್ಟ ವಿದ್ಯೆ ಸಹಸ್ರಾರು ಜನರನ್ನು ಬಲಿ ತೆಗೆದುಕೊಳ್ಳುತ್ತೆ. ಯಾಕಂದರೆ, ನಾನೇನಿದ್ದರೂ ಶಸ್ತ್ರ ಪ್ರಯೋಗಿಸುವ ಶಿಕ್ಷಣ ಕೊಟ್ಟಿದ್ದೇನೆ. ಆದರೆ ಅದಕ್ಕಿಂತ ಮುಂದೆ, ಮನುಷ್ಯನನ್ನು ಮನುಷ್ಯನನ್ನಾಗಿಸುವಂಥದ್ದೇನನ್ನೂ ನಾನು ಕಲಿಸಿಲ್ಲ. ಅಶ್ವತ್ಥಾಮ, ನನಗೆ ಉರಿಯುತ್ತಾ ಇರುವ ಭವಿಷ್ಯ ಕಣ್ಣಿಗೆ ಕಾಣುತ್ತಾ ಇದೆ. ದಿಕ್ಕುಗಳನ್ನು ಕಿವುಡಾಗಿಸುವಂಥ ಯುದ್ಧದ ಕೋಲಾಹಲ ನನಗೆ ಕೇಳಿಸ್ತಾ ಇದೆ. ನನ್ನ ದಾರಿದ್ರ್ಯದ ವಿರುದ್ಧ ಸೇಡು ತೀರಿಸಿಕೊಳ್ಳಬೇಕೆಂಬ ನನ್ನ ಹಿಂಸಕ ಪ್ರವೃತ್ತಿ ನನ್ನನ್ನೂ ನುಂಗುತ್ತಿದೆ. [ಕ್ರಮೇಣ ಕತ್ತಲೆ. ಜೇಲ್‌ಕೊಠಡಿಯಂತೆ ತೋರುವ ದೃಶ್ಯ. ಸ್ಪಾಟ್ ಕೇವಲ ಅರವಿಂದನ ಮೇಲೆ ಬೀಳುತ್ತೆ. ಗಡ್ಡ ಬೆಳೆದಿದೆ. ಜರ್ಜರಿತನಾಗಿದ್ದಾನೆ. ಕ್ರಮ ಕ್ರಮವಾಗಿ ವಿಮಲೇಂದುವಿನ ದೇಹಾಕೃತಿ ಮೂಡಿಬರುತ್ತದೆ]

ವಿಮಲೇಂದು: ಏನು ಯೋಚನೆ ಮಾಡ್ತಿದ್ದೀಯಾ?

ಅರವಿಂದ: ಏನೂ ಇಲ್ಲ.

ವಿಮಲೇಂದು: ಸುಳ್ಳು ಹೇಳ್ತಾ ಇದ್ದಿ. ನಾಳೆ ಕೋರ್ಟ್‌ನಲ್ಲಿ ಏನಾಗುತ್ತೋ ಅಂತ ಯೋಚನೆ ಮಾಡ್ತಿದ್ದಿ.

ಅರವಿಂದ: ನಾನು ಯಾಕೆ ಯೋಚನೆ ಮಾಡಲಿ? ನಾನು ಕೊಲೆ ಮಾಡಿಲ್ಲ.

ವಿಮಲೇಂದು: ನೀನು ಕೊಲೆ ಮಾಡಿದ್ದೀ ಅಂತ ನಾನೆಲ್ಲಿ ಹೇಳಿದೆ! ಇಷ್ಟೊಂದು ಧೈರ್ಯ ನಿನಗೆಲ್ಲಿದೆ? ಕೊಲೆಯ ಮಾತಂತೂ ದೂರವೇ ಆಯಿತು, ನೀನು ಆತ್ಮಹತ್ಯೆ ಕೂಡ ಮಾಡಿಕೊಳ್ಳಲಾಗಲಿಲ್ಲ.

ಅರವಿಂದ: ನಿನಗೆ ಗೊತ್ತಿದೆ; ಕೇವಲ ಸರ್ಕಮ್‌ಸ್ಟ್ಯಾನ್ಷಿಯಲ್ ಎವಿಡೆನ್ಸ್‌ನ ಆಧಾರದಿಂದ ಕೇಸ್ ನಡೆಸುತ್ತಾ ಇದ್ದಾರೆ ಅಂತ. ಪ್ರೆಸಿಡೆಂಟ್‌ನನ್ನು ಆ ಬೆಟ್ಟದ ತುದಿಯಿಂದ ಪ್ರಪಾತಕ್ಕೆ ನಾನು ತಳ್ಳಲಿಲ್ಲ ಅಂತಲೂ ನಿನಗೆ ಗೊತ್ತಿದೆ.

ವಿಮಲೇಂದು: ಇದು ಸರಿ. ನೀನು ನಿರಪರಾಧಿ. ಆದರೆ ನಿಜ ಹೇಳು. ಕಳೆದ ಕೆಲವು ದಿನಗಳಿಂದ ಪ್ರೆಸಿಡೆಂಟ್‌ನ ವಿಷಯಕ್ಕೆ ನಿನ್ನ ಮನಸ್ಸಿನಲ್ಲಿ ಭಯಂಕರ ತಿರಸ್ಕಾರ ಇದೆ. ಹೌದೋ ಅಲ್ಲವೋ?

ಅರವಿಂದ: ಹೌದು. ಆದರೆ ನಾನು.....

ವಿಮಲೇಂದು: ಮಧ್ಯದಲ್ಲಿ ಮಾತಾಡಬೇಡ. ನನ್ನ ಪ್ರಶ್ನೆಗೆ ಉತ್ತರಕೊಡು. ಮೇಲೆ ಮೇಲೆ ನೀನು ಅವನಿಗೆ ಬೆಂಬಲ ಕೊಡುತ್ತಿದ್ದೆ, ಆದರೆ ಒಳಗೊಳಗೇ ನೀನು ಅವನನ್ನು ಇಲ್ಲವಾಗಿಸುವ ಯೋಜನೆ ಮಾಡ್ತಾ ಇದ್ದೆಯೋ ಇಲ್ಲವೋ?

ಅರವಿಂದ: ಆದರೆ ಅದು ಕೇವಲ ಒಂದು ಯೋಚನೆ ಆಗಿತ್ತು.

ವಿಮಲೇಂದು: ಮತ್ತೆ ಸುಳ್ಳು! ಅದು ಕೇವಲ ಯೋಚನೆ ಆಗಿರಲಿಲ್ಲ. ಅದರಲ್ಲಿ ಯೋಜನೆಯ ಬೀಜ ಇತ್ತು. ಕಳೆದ ವರ್ಷ ಆ ಪ್ರಪಾತದ ತುದಿಯಿಂದ ಹಾರಿ ಒಬ್ಬ ಮನುಷ್ಯ ಆತ್ಮಹತ್ಯೆ ಮಾಡಿಕೊಂಡಾಗ ನೀನು ಆ ಜಾಗ ನೋಡಲು ಹೋಗಿದ್ದೆಯಲ್ಲವೆ?

ಅರವಿಂದ: ಹೌದು, ಹೋಗಿದ್ದೆ.

ವಿಮಲೇಂದು: ಆ ಜಾಗ ನೋಡಿ ನಿನ್ನ ಮನಸ್ಸಿನಲ್ಲಿ ಯಾವ ರೀತಿ ಕಲ್ಪನೆ ಬಂದಿತ್ತು ಹೇಳು?

ಅರವಿಂದ: ಜ್ಞಾಪಕ ಬರ್ತಾ ಇಲ್ಲ.

ವಿಮಲೇಂದು: ಮತ್ತೆ ಸುಳ್ಳು! ನನ್ನ ಹತ್ತಿರ ಸುಳ್ಳು ಹೇಳಿ ಎಲ್ಲಿ ಹೋಗ್ತಿ ನೀನು? ಪ್ರೆಸಿಡೆಂಟ್‌ನನ್ನು ಅಲ್ಲಿಂದ ತಳ್ಳಿ ಅವನನ್ನು ಸಾಯಿಸುವ ಯೋಚನೆ ನಿನ್ನ ಮನಸ್ಸಿನಲ್ಲಿ ಬಂದಿರಲಿಲ್ಲವೆ?

ಅರವಿಂದ: ಬಂದಿತ್ತು.

ವಿಮಲೇಂದು: ಇದರನಂತರ, ಪ್ರೆಸಿಡೆಂಟ್ ಕಾಯಿಲೆ ಬಿದ್ದ! ಬ್ಲಡ್ ಪ್ರೆಷರ್. ಡಾಕ್ಟರುಗಳು ಅವನಿಗೆ ಬೆಳಿಗ್ಗೆ ಸಾಯಂಕಾಲ, ಸಾಕಷ್ಟು ದೂರ ತಿರುಗಾಡಿಕೊಂಡು ಬರಲು ಹೇಳಿದ್ದರು.

ಅರವಿಂದ: ಹೌದು, ಹೇಳಿದ್ದರು.

ವಿಮಲೇಂದು: ನೀನು ಅವನ ಜೊತೆ ತಿರುಗಾಡಿ ಬರಲು ಹೋಗುತ್ತಿದ್ದೆ. ಜನ ಇದನ್ನು ನೀನು ಅವನನ್ನು ಪ್ಲೀಸ್ ಮಾಡೋಕೆ ಹೋಗ್ತಿದ್ದೀ ಅಂತ ತಿಳಿದುಕೊಂಡರು. ಆದರೆ ನಿನ್ನ ಮನಸ್ಸಿನಲ್ಲಿ ಆ ಕೆಟ್ಟ ಯೋಚನೆ ಇದ್ದೇ ಇತ್ತು. ಏಕೆ; ಇತ್ತೋ ಇಲ್ಲವೋ?

ಅರವಿಂದ: ಹೌದು ಇದ್ದೇ ಇತ್ತು.

ವಿಮಲೇಂದು: ನಿಧಾನವಾಗಿ ನೀನು ಸಾಯಂಕಾಲದ ಹೊತ್ತು ಆ ಪ್ರಪಾತದ ಕಡೆಗೆ ಅವನನ್ನು ವಾಕಿಂಗ್ ಕರೆದುಕೊಂಡು ಹೋಗೋದಕ್ಕೆ ಶುರುಮಾಡಿದೆ. ಪ್ರೆಸಿಡೆಂಟ್‌ಗೆ ನಿನ್ನ ಉದ್ದೇಶದ ಬಗ್ಗೆ ಎಂದೂ ಸಂದೇಹ ಬರಲಿಲ್ಲ.

ಅರವಿಂದ: ಆದರೆ ನಾನು ಉದ್ದೇಶಪೂರ್ವಕವಾಗಿ ಹಾಗೆ ಮಾಡ್ತಿರಲಿಲ್ಲ.

ವಿಮಲೇಂದು: ಆದರೆ ನೀನು ಮಾಡ್ತಾ ಇದ್ದೆ. ಅಲ್ಲದೆ ಆ ದಿನ. ಸಂಜೆ ಪ್ರಪಾತದ ಕೆಳಗಿನ ಕಣಿವೆಯ ಹಳ್ಳಿಯಲ್ಲಿ ಉತ್ಸವ ನಡೆದಿತ್ತು. ನಗಾರಿಗಳ ಶಬ್ದ

ಕೇಳಿ ಬರತಿತ್ತು. ನೀನು ಪ್ರೆಸಿಡೆಂಟನ್ನು ಪ್ರಪಾತದ ಅಂಚಿನವರೆಗೂ ಬರುವುದಕ್ಕೆ ಹೇಳಿದೆ. ಅಲ್ಲಿಂದ ಉತ್ಸವ ನೋಡಬಹುದು ಅಂತ. ನೀನು ಹೇಳಿದೆ; ನೋಡಿ. ಪ್ರೆಸಿಡೆಂಟ್ ಸಾಹೇಬರೆ, ಜನಗಳೆಲ್ಲಾ ಹ್ಯಾಗೆ ಒಳ್ಳೆ ಇರುವೆಗಳ ಹಾಗೆ ಕಾಣಿಸ್ತಾ ಇದ್ದಾರೆ ಅಂತ. ಹೇಳಿದ್ದೆ ಅಲ್ಲವೆ?

ಅರವಿಂದ: ಹೌದು ಹೇಳಿದ್ದೆ. ಆದರೆ ಹತ್ಯೆ ಮಾಡುವ ಯೋಚನೆ ನನ್ನ ಮನಸ್ಸಿನಲ್ಲಿ ಆಗಲೂ ಇರಲಿಲ್ಲ.

ವಿಮಲೇಂದು: ಪ್ರೆಸಿಡೆಂಟ್ ಕುತೂಹಲದಿಂದ ನಿನ್ನ ಸಹಾಯ ಪಡೆದುಕೊಂಡು ಮುಂದುವರಿದ. ನೀನು ಅವನ ಹೆಗಲ ಮೇಲೆ ಕೈ ಇಟ್ಟೆ. ಹೇಳು, ಆಗಲೂ ನಿನ್ನ ಮನಸ್ಸಿನಲ್ಲಿ ಪಾಪದ ಯೋಚನೆ ಇರಲಿಲ್ಲವೆ?

ಅರವಿಂದ: ಆದರೆ ನಾನು ಅವನನ್ನು ತಳ್ಳಲಿಲ್ಲ.

ವಿಮಲೇಂದು: ಆದರೆ ಕೆಟ್ಟ ಯೋಚನೆ ನಿನ್ನ ಮನಸ್ಸಿನಲ್ಲಿ ಬಂದಿತ್ತಾ ಇಲ್ಲವಾ?

ಅರವಿಂದ: ಹೌದು ಬಂದಿತ್ತು.

ವಿಮಲೇಂದು: ಆದರೆ ಅದೃಷ್ಟ ನಿನ್ನ ಕಡೆ ಇತ್ತು. ಪ್ರೆಸಿಡೆಂಟ್‌ಗೆ ಬ್ಯಾಲೆನ್ಸ್ ಮಾಡಕ್ಕಾಗಲಿಲ್ಲ, ತಾನೇ ಬಿದ್ದು ಬಿಟ್ಟ. ಏತಕ್ಕೆ?

ಅರವಿಂದ: ಹೌದು, ಅವನು ತನ್ನ ಸಾವನ್ನು ಸತ್ತ. ನಾನು ಅಪರಾಧಿ ಅಲ್ಲ, ನನ್ನ ಶತ್ರುಗಳು ಬಲವಂತವಾಗಿ ನನ್ನನ್ನು ಸಿಕ್ಕಿಹಾಕಿಸ್ತಾ ಇದ್ದಾರೆ.

ವಿಮಲೇಂದು: ಯಾರು ನಿನ್ನ ಶತ್ರುಗಳು?

ಅರವಿಂದ: ಈಗ ಯಾರ ಹೆಸರು ಹೇಳಲಿ?

ವಿಮಲೇಂದು: ನೀನು ಪೋಲೀಸ್‌ಗೆ ರಿಪೋರ್ಟ್ ಮಾಡಿದೆ. ಆಕ್ಸಿಡೆಂಟ್ ಅಂತ ಹೇಳಿದೆ. ಎಲ್ಲ ವಿಷಯವನ್ನೂ ಹೇಳಿದೆ. ಇಷ್ಟರ ನಂತರವೂ ಯಾರಿಗೂ ನಂಬಿಕೆ ಬರಲಿಲ್ಲ. ಜನ investigation ಆಗ ಬೇಕು ಅಂದರು. ಅವರು ಯಾರು ಅಂತ ಗೊತ್ತೇನು?

ಅರವಿಂದ: ಇಲ್ಲ ನನಗೆ ಗೊತ್ತಿಲ್ಲ.

ವಿಮಲೇಂದು: ಮತ್ತೆ ಸುಳ್ಳು! ಎಷ್ಟು ಸುಳ್ಳು ಹೇಳ್ತಿಯಾ? ಆ ಜನಗಳು, ಯಾರು ಅಂದ್ರೆ ನಿನ್ನ ಸಹೋದ್ಯೋಗಿಗಳು. ಪ್ರೆಸಿಡೆಂಟ್ರು ಹೇಳಿದರು ಅಂತ ಹೇಳಿ ನೀನು ಅವರಿಗೆ ಐನೂರು ರೂಪಾಯಿಗೆ ರಸೀದಿ ಬರೆಸಿಕೊಂಡು ಮುನ್ನೂರು ಕೊಡ್ತಾಇದ್ದೆ.

ಅರವಿಂದ: ಇದು ತುಂಬಾ ಹಿಂದಿನಿಂದ ಬಂದ ಪದ್ಧತಿ.

ವಿಮಲೇಂದು: ಈ ಪದ್ಧತಿಯನ್ನು ನೀನು ಮುರೀತಿಯಾ ಅಂತ ನಿನ್ನ ಬಗ್ಗೆ ಜನಗಳಿಗೆ ಭರವಸೆ ಇತ್ತು.

ಅರವಿಂದ : ಜನ ಈ ರೀತಿ ಯೋಚನೆ ಮಾಡಿದರೆ ನಾನು ಅದಕ್ಕೆ ಹೇಗೆ ಜವಾಬ್ದಾರ?

ವಿಮಲೇಂದು: ಮತ್ತೆ ಸುಳ್ಳು! ನೇಣಿನ ಉರುಳು ಹತ್ತಿರ ಬರ್ತಾ ಇದೆ, ಆದರೂ. ನಿಜ ಹೇಳ್ತಾ ಇಲ್ಲ. ನೀನು ಯಾವಾಗಲೂ ಶೋಷಣೆ ಮತ್ತು ಅನ್ಯಾಯದ ವಿರುದ್ಧ ಲೆಕ್ಚರ್ ಕೊಡ್ತಾ ಇದ್ದೆ. ನೀನು ಸದಾ ಮಾನವೀಯ ಅಧಿಕಾರಗಳ ಬಾವುಟ ಹಿಡಿದುಕೊಂಡು ತಿರುಗಾಡ್ತಿದ್ದೆ. ತಿರುಗಾಡ್ತಿದ್ಯೋ ಇಲ್ಲವೋ? (ಬಿಡುವು) ಜನ ನಿನ್ನ ಬಗ್ಗೆ ಭರವಸೆಗಳನ್ನು ಇಟ್ಟುಕೊಳ್ತಿದ್ದರು. ಏನು ತಪ್ಪು ಅವರದ್ದು? ನೀನು ಅವರಿಗೆ ಮೋಸಮಾಡಿದೆ. ನೀನು ಯಾವಾಗ ಪ್ರೆಸಿಡೆಂಟ್ ಜೊತೇಲಿ ವಾಕಿಂಗ್ ಹೋಗೋದಕ್ಕೆ ಶುರುಮಾಡಿದೆಯೋ ಆಗ ಅವರಿಗೆ ಖಾತರಿ ಆಯ್ತು, ನೀನು ಪ್ರೆಸಿಡೆಂಟರ ಕಡೆ ಮನುಷ್ಯ, ಅವರ ಮನುಷ್ಯ ಅಲ್ಲ ಅಂತ.

ಅರವಿಂದ: ಇದು ಸುಳ್ಳು! ನಾನು ನನ್ನ ಸಹೋದ್ಯೋಗಿಗಳನ್ನು ಸತಾಯಿಸಲಿಲ್ಲ.

ವಿಮಲೇಂದು: ಆದರೆ ಅವರಿಗೋಸ್ಕರ ಏನೂ ಮಾಡಲೂ ಇಲ್ಲ. ಈಗ ನೀನು ಕೇವಲ ಒಂದು ವಿಷಯದ ಬಗ್ಗೆ ಮಾತ್ರ ತಲೆಕೆಡಿಸಿಕೊಂಡಿದ್ದೀಯಾ. ನಾಳೆ ಕೋರ್ಟ್‌ನಲ್ಲಿ ಚಂದೂ ಏನು ಹೇಳ್ತಾನೋ ಅಂತ?

ಅರವಿಂದ: ಚಂದೂ ಸತ್ಯ ಹೇಳ್ತಾನೆ. ಸತ್ಯದ ಹೊರತು ಬೇರೇನನ್ನೂ ಹೇಳಲಾರ.

ವಿಮಲೇಂದು: ಅವನು ಸತ್ಯಹೇಳಲಿ ಅಂತ ನೀನು ಬಯಸುತ್ತೀಯಾ? (ಬಿಡುವು) ಯಾಕೆ ಸುಮ್ಮನಿದ್ದೀಯಾ? ಉತ್ತರ ಯಾಕೆ ಕೊಡ್ತಾ ಇಲ್ಲ? (ಬಿಡುವು) ಅವನು ಸತ್ಯ ಹೇಳುವುದರ ಅರ್ಥ ನಿನಗೆ ಗೊತ್ತಾಗುತ್ತ? ಅದರಿಂದ ನಿನ್ನ ಅಪರಾಧ ಸಾಬೀತಾಗುತ್ತೆ.

ಅರವಿಂದ: ಅವನು ನನ್ನನ್ನು ಉಳಿಸ್ತಾನೆ ವಿಮಲೇಂದು! ಅವನೊಂದಿಗೆ ನನ್ನ ವಿರೋಧ ಇರಬಹುದು. ನಾನು ಅವನಿಗೆ ಅನ್ಯಾಯ ಮಾಡಿದ್ದೇನೆ ಎನ್ನುವುದೂ ನಿಜ. ಆದರೆ ಚಂದೂ ನನ್ನ ಶಿಷ್ಯ. ಏನೇ ಆದರೂ ಅವನೂ ಸ್ವಲ್ಪ ಯೋಚನೆ ಮಾಡ್ತಾನೆ. ಅವನು ಖಂಡಿತ ನನ್ನನ್ನು ಬಚಾವ್ ಮಾಡ್ತಾನೆ.

ವಿಮಲೇಂದು: ಶಿಷ್ಯನಾದರೆ ಸಾಲದು. ಅವನು ಮನುಷ್ಯನೂ ಹೌದು. ಅವನು ನಿನ್ನ ಕೇಸಿನ ಪ್ರತ್ಯಕ್ಷದರ್ಶಿ ಸಾಕ್ಷಿ. ಅವನು ಎಲ್ಲವನ್ನೂ ಕಣ್ಣಾರೆ ನೋಡಿದ್ದಾನೆ. ಅವನನ್ನು ಮ್ಯಾನೇಜ್ ಮಾಡು. ಅವನನ್ನು ಮ್ಯಾನೇಜ್‌ಮಾಡು ಅಂತ ಹೇಳೋದಕ್ಕೇ ನಾನು ಬಂದಿದ್ದು. [ಅವನನ್ನು 'ಮ್ಯಾನೇಜ್' ಮಾಡು ಎನ್ನುವ ಧ್ವನಿ ಪ್ರತಿಧ್ವನಿಸತೊಡಗುತ್ತದೆ. ಕ್ರಮ ಕ್ರಮೇಣ ಕತ್ತಲೆ ಆವರಿಸುತ್ತದೆ. ಬೆಳಕು ರಂಗದ ಮೇಲೆ ಕೇಂದ್ರಿತವಾಗುತ್ತದೆ. ಅರವಿಂದ ಒಂದು ಕಟಕಟೆಯಲ್ಲಿ ನಿಂತಿದ್ದಾನೆ ಸಾಕ್ಷಿಯ ಕಟಕಟೆಯಲ್ಲಿ ಚಂದೂ ಇದ್ದಾನೆ]

ಧ್ವನಿ: ಯುವರ್ ಆನರ್, ಈಗ ನಾನು ಈ ಕೇಸಿನ ಪ್ರತ್ಯಕ್ಷದರ್ಶಿ ಸಾಕ್ಷಿ ಚಂದ್ರಶೇಖರ್ ಉರುಪ್ ಚಂದೂನನ್ನು ಪ್ರಶ್ನಿಸಲು ಅನುಮತಿ ಕೋರುತ್ತೇನೆ.

ಎರಡನೇ ಧ್ವನಿ: ಅನುಮತಿ ನೀಡಲಾಗಿದೆ.

ಮೊದಲ ಧ್ವನಿ: ನೀವು ಪ್ರಿನ್ಸಿಪಾಲ್ ಅರವಿಂದ್ ಅವರನ್ನು ಯಾವಾಗಿನಿಂದ ಬಲ್ಲಿರಿ?

ಚಂದೂ: ಕಳೆದ ಎಂಟು ವರ್ಷಗಳಿಂದ.

ಮೊದಲ ಧ್ವನಿ: ಯಾವ ರೀತಿ?

ಚಂದೂ: ಅವರು ಕಾಲೇಜಿನಲ್ಲಿ ನನಗೆ ಪ್ರೊ. ಆಗಿದ್ದರು.

ಮೊದಲ ಧ್ವನಿ: ನೀವು ಕಾಲೇಜ್ ಬಿಟ್ಟು ಎಷ್ಟು ವರ್ಷ ಆಯಿತು?

ಚಂದೂ: ನಾನು ಕಾಲೇಜ್ ಬಿಡಲಿಲ್ಲ.

ಮೊದಲ ಧ್ವನಿ: ಹಾಗಿದ್ದರೆ?

ಚಂದೂ: ನನ್ನನ್ನು ಕಾಲೇಜಿನಿಂದ ತೆಗೆದು ಹಾಕಲಾಯಿತು.

ಮೊದಲ ಧ್ವನಿ: ಯಾತಕ್ಕೆ ತೆಗೆದು ಹಾಕಲಾಯಿತು?

ಚಂದೂ: ನಾನು ಕಾಲೇಜಿನ ಅಧಿಕಾರ ವರ್ಗವನ್ನು ವಿರೋಧಿಸಿದೆ.

ಮೊದಲ ಧ್ವನಿ: ಯಾವ ವಿಷಯಕ್ಕೆ?

ಚಂದೂ: ಕಾಪಿ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ. ಪ್ರೆಸಿಡೆಂಟರ ಮಗ ಎಲ್ಲರೆದುರು ಚೂರಿ ಇಟ್ಟುಕೊಂಡು. ಕಾಪಿ ಮಾಡಿದ್ದ. ಅವನನ್ನು ಹಿಡಿಯಲಾಯಿತು. ಆದರೆ ಅವನ ರಿಪೋರ್ಟ್‌ನ್ನು ಹತ್ತಿಕ್ಕಲಾಯಿತು.

ಮೊದಲ ಧ್ವನಿ: ಕೇಳಿದಷ್ಟಕ್ಕೆ ಮಾತ್ರ ಉತ್ತರ ಕೊಡಿ. ರಿಪೋರ್ಟ್ ಹತ್ತಿಕ್ಕಿದ್ದು ಯಾರು?

ಚಂದೂ: ಪ್ರೊ. ಅರವಿಂದ್ ಮತ್ತು ಪ್ರೆಸಿಡೆಂಟ್.

ಮೊದಲ ಧ್ವನಿ: ಇದಕ್ಕೇನು ಪ್ರಮಾಣ?

ಚಂದೂ: ಈ ವಿಷಯದಲ್ಲಿ ಕಾಲೇಜಿನ ಹಿಂದಿನ ಪ್ರಿನ್ಸಿಪಾಲರನ್ನು ಪ್ರಶ್ನಿಸಬಹುದು.

ಮೊದಲ ಧ್ವನಿ: ಕಾಲೇಜಿನಿಂದ ತೆಗೆದು ಹಾಕಿದಮೇಲೆ ನೀವು ಏನು ಮಾಡ್ತಾ ಇದ್ದಿರಿ?

ಚಂದೂ: ಏನೂ ಇಲ್ಲ.

ಮೊದಲ ಧ್ವನಿ: ಏನೂ ಇಲ್ಲ ಅಂದರೆ?

ಚಂದೂ: ಏನೂ ಇಲ್ಲ ಅಂದರೆ ಏನೂ ಇಲ್ಲ; ನನ್ನ ಮಾತಿನ ಅರ್ಥದ ಮೇಲೆ ನಂಬಿಕೆ ಆಗದೆ ಇದ್ದರೆ ಶಬ್ದಕೋಶ ನೋಡಬಹುದು.

ಎರಡನೇ ಧ್ವನಿ: ಸರ್ಕಾರಿ ವಕೀಲರ ಪ್ರಶ್ನೆಗಳಿಗೆ ನೇರವಾಗಿ ಉತ್ತರಕೊಡಿ. ಕೋರ್ಟು ತಮಾಷೆಮಾಡುವ ಜಾಗ ಅಲ್ಲ.

ಮೊದಲ ಧ್ವನಿ: ನೀವು ಕಾಪಿ ಮಾಡಿರಲಿಲ್ಲವೆ?

ಚಂದೂ: ಇಲ್ಲ.

ಮೊದಲ ಧ್ವನಿ: ಆದರೆ ನಿಮ್ಮನ್ನು ಹಿಡಿಯಲಾಗಿತ್ತು.

ಚಂದೂ: ಹೌದು.

ಮೊದಲ ಧ್ವನಿ: ನಿಮ್ಮ ಹತ್ತಿರ, ನೀವು ಕಾಪಿಮಾಡಿಲ್ಲ ಎಂದು ಸಾಧಿಸಲು ಯಾವ ರೀತಿಯ ಪ್ರಮಾಣ ಇದೆ.

ಚಂದೂ: ಯೂನಿವರ್ಸಿಟಿಯ ನಿರ್ಣಯ.

ಮೂರನೇಧ್ವನಿ: ಯುವರ್ ಆನರ್, ಸರ್ಕಾರಿ ವಕೀಲರ ಪ್ರಶ್ನೆಗಳಿಗೂ ಈ ಕೇಸ್‌ಗೂ ನೇರ ಸಂಬಂಧ ಇಲ್ಲ.

ಮೊದಲ ಧ್ವನಿ: ಯುವರ್ ಆನರ್, ನನ್ನ ಪ್ರತಿಯೊಂದು ಪ್ರಶ್ನೆಗೂ, ಕೇಸ್‌ಗೂ ನೇರ ಸಂಬಂಧ ಇದೆ ಪ್ರೊ. ಅರವಿಂದ್ ಅವರು ರಾಜ್‌ಕುಮಾರನ ರಿಪೋರ್ಟ್ ಅನ್ನು ಹತ್ತಿಕ್ಕಿದರು ಅನ್ನುವುದು ಚಂದೂವಿನ ಉತ್ತರದಿಂದ ಸ್ಪಷ್ಟವಾಗಿ ಗೊತ್ತಾಗುತ್ತೆ. ಇದರಿಂದ ಅರವಿಂದ್ ಅವರ Character ಬಗ್ಗೆ ಹೊಸ information ಸಿಕ್ಕಲಿಲ್ಲವೇನು?

ಎರಡನೇ ಧ್ವನಿ: ಗೋ ಅಹೆಡ್ ವಿತ್ ಯುವರ್ ಕ್ವೊಶ್ಚನ್ಸ್.

ಮೊದಲ ಧ್ವನಿ: ನೀವು ಅನುರಾಧ ಅನ್ನುವ ಯಾವುದಾದರೂ ಹುಡುಗಿ ಹೆಸರು ಕೇಳಿದ್ದೀರಾ?

ಚಂದೂ: ಹೌದು ಕೇಳಿದ್ದೀನಿ.

ಮೊದಲ ಧ್ವನಿ: ಹೇಗೆ

ಚಂದೂ: ಅವಳು ಕಾಲೇಜಿನಲ್ಲಿ ನನ್ನ ಜೊತೆ ಓದುತ್ತಾ ಇದ್ದಳು.

ಮೊದಲ ಧ್ವನಿ: ನಿಮ್ಮ ಅವಳ ಪರಿಚಯ ಇಷ್ಟೇನಾ?

ಚಂದೂ: ಇಲ್ಲ ಅವಳ ಮತ್ತು ನನ್ನ ಪರಿಚಯ ಇನ್ನೂ ಗಾಢವಾಗಿತ್ತು.

ಮೊದಲ ಧ್ವನಿ: ಗಾಢವಾದ್ದು ಅಂದರೆ ಏನರ್ಥ?

ಚಂದೂ: ಅಂದರೆ ನಮ್ಮಿಬ್ಬರಲ್ಲಿ ಪ್ರೇಮ ಇತ್ತು.

ಮೊದಲ ಧ್ವನಿ: ಕಾಲೇಜಿನಿಂದ ತೆಗೆದುಹಾಕಿದ ಮೇಲೂ ಅವಳು ನಿಮ್ಮನ್ನು ಪ್ರೇಮಿಸುತ್ತಿದ್ದಳೆ?

ಚಂದೂ: ಹೌದು, ಸಾಯುವ ಕೊನೆಯ ಉಸಿರಿರುವವರೆಗೂ ಪ್ರೀತಿಸುತ್ತಿದ್ದಳು.

ಮೊದಲ ಧ್ವನಿ: ಇದಕ್ಕೆ ನಿಮ್ಮ ಹತ್ತಿರ ಏನಾದರೂ ಪ್ರಮಾಣ ಇದೆಯಾ?

ಚಂದೂ: ಹೌದು ಇದೆ. ನನ್ನ ಹತ್ತಿರ ಆಕೆಯ ಪತ್ರಗಳಿವೆ

ಮೊದಲ ಧ್ವನಿ: ಅನುರಾಧ ಆತ್ಮಹತ್ಯೆ ಮಾಡಿಕೊಂಡಳಲ್ಲ, ಆ ದಿನ ನೀವು ಎಲ್ಲಿದ್ದಿರಿ?

ಚಂದೂ: ತಾತ ತೀರಿಕೊಂಡಿದ್ದರಿಂದ ಹೊರಗೆ ಹೋಗಿಬಿಟ್ಟಿದ್ದೆ.

ಮೊದಲ ಧ್ವನಿ: ಆಕೆಯ ಆತ್ಮಹತ್ಯೆಗೆ ಕಾರಣ ಏನು ಅಂತ ಹೇಳಕ್ಕಾಗುತ್ತ?

ಚಂದೂ: ಪ್ರೊ. ಅರವಿಂದ್

ಮೊದಲ ಧ್ವನಿ: ನೀವು ಈ ಮಾತನ್ನು ಪೂರ್ತಿ ಪ್ರಾಮಾಣಿಕವಾಗಿ ಹೇಳ್ತೀರೇನು?

ಚಂದೂ: ಕೋರ್ಟಿನ ಎದುರು, ಸತ್ಯವನ್ನೇ ಹೇಳುತ್ತೇನೆಂದು ಪ್ರಮಾಣ ಮಾಡಿದ್ದೀನಿ.

ಮೊದಲ ಧ್ವನಿ: ನೀವು ಇಷ್ಟೊಂದು ದೃಢವಾಗಿ ಪ್ರೊ. ಅರವಿಂದ್ ಅವರನ್ನು ಹೇಗೆ ತಪ್ಪಿತಸ್ಥರು ಅಂತ ತೀರ್ಮಾನಿಸುತ್ತೀರಿ?

ಚಂದೂ: ನನ್ನ ಹತ್ತಿರ ಅದಕ್ಕೆ ಪ್ರಮಾಣ ಇದೆ.

ಮೊದಲ ಧ್ವನಿ: ಎಂಥ ಪ್ರಮಾಣ?

ಚಂದೂ: ಅನುರಾಧ ಬರೆದಿರುವ ಕೊನೆಯ ಪತ್ರ.

ಮೊದಲ ಧ್ವನಿ: ಕೋರ್ಟ್‌ನ ಮುಂದೆ ಆ ಪತ್ರವನ್ನು ಹಾಜರು ಪಡಿಸಬಲ್ಲಿರಾ?

ಚಂದೂ: ಹೌದು. ನಾಳೆಯ ಹೊತ್ತಿಗೆ ಹಾಜರು ಪಡಿಸುತ್ತೀನಿ.

ಮೊದಲ ಧ್ವನಿ: ಏನು ಬರೆದಿದ್ದಳು ಆ ಪತ್ರದಲ್ಲಿ?

ಚಂದೂ: ಅವಳು ಬರೆದಿದ್ದಳು: ನಾನು ಸರಿಯಾಗಿ ನಾಲ್ಕು ಗಂಟೆಗೆ ಕಾಲೇಜಿನ ಪಾರ್ಕ್‌ನಲ್ಲಿ ನಿಮ್ಮನ್ನು ಕಾಯುತ್ತಾ ಕೂತಿದ್ದೆ. ಅಷ್ಟರಲ್ಲಿ ರಾಜ್‌ಕುಮಾರ್ ಬಂದ. ಅವನು ಮೊದಲಿಗೆ ನನ್ನನ್ನು ಛೇಡಿಸುವುದಕ್ಕೆ ಶುರು ಮಾಡಿದ. ವಿರೋಧಿಸಿದ ಮೇಲೆ, ನನ್ನ ಮೇಲೆ ಬಲಾತ್ಕಾರ ಮಾಡೋದಕ್ಕೆ ಪ್ರಯತ್ನಿಸಿದ.

ಮೊದಲ ಧ್ವನಿ: ಈ ಪತ್ರಕ್ಕೂ ಈ ಕೇಸ್‌ಗೂ ಏನೂ ಸಂಬಂಧವಿಲ್ಲ ಯುವರ್ ಆನರ್! ನ್ಯಾಯಾಲಯದ ಅಮೂಲ್ಯ ಸಮಯ ಹಾಳಾಗ್ತಾ ಇದೆ.

ಎರಡ ಧ್ವನಿ: ಅಬ್ಜೆಕ್ಷನ್ ರಿಜೆಕ್ಟೆಡ್.

ಮೊದಲ ಧ್ವನಿ: ಪತ್ರದಲ್ಲಿ ಮುಂದಕ್ಕೆ ಏನು ಬರೆದಿದ್ದಳು?

ಚಂದೂ: ಪತ್ರದಲ್ಲಿ ಮುಂದೆ ಬರೆದಿದ್ದಳು. ಅದೇ ಹೊತ್ತಿಗೆ ನನ್ನ ಅದೃಷ್ಟದಿಂದ ಪ್ರಿನ್ಸಿಪಾಲ್ ಸಾಹೇಬರು ಬಂದರು. ಅವರು ನನ್ನನ್ನು ಬಚಾವ್ ಮಾಡಿದರು ಇದರ ನಂತರ ನನ್ನ ಕಡೆಯಿಂದ ರಿಪೋರ್ಟ್ ಬರೆಸಿದರು. ಹೇಳಿದರು: ನಾನು ರಾಜ್‌ಕುಮಾರ್ ವಿರುದ್ಧ ಆಕ್ಷನ್ ತೆಗೆದುಕೊಳ್ತೇನೆ. ನನಗೆ ಅವನ ನೀಚ ಅಪ್ಪನ ಹತ್ತಿರ ಅನೇಕ ವಿಷಯಗಳ ಲೆಕ್ಕತೀರಿಸೋದಿದೆ.

ಮೊದಲ ಧ್ವನಿ: ಅಂದರೆ ನನಗೆ ಪ್ರೆಸಿಡೆಂಟರ ಹತ್ತಿರ ಅನೇಕ ವಿಷಯಗಳ ಲೆಕ್ಕತೀರಿಸೋದಿದೆ ಅಂತ ಬರೆದಿತ್ತ?

ಚಂದೂ: ಹೌದು ಸರ್.

ಮೊದಲ ಧ್ವನಿ: ಮುಂದೆ ಏನು ಬರೆದಿತ್ತು?

ಚಂದೂ: ಮುಂದೆ ನಮ್ಮ ತಾಯಿ ಮತ್ತು ತಂದೆಗೆ ನಾನು ಪ್ರಕರಣವನ್ನು ಮುದುವರಿಸುವುದು. ಇಷ್ಟವಿರಲಿಲ್ಲ. ಅವರು ನನಗೆ ಕೆಟ್ಟ ಹೆಸರು ಬರುತ್ತೆ ಅನ್ನುವುದಕ್ಕೆ ಹೆದರುತ್ತಾರೆ. ಆದರೆ ನಾನು ಹೊರಾಡುತ್ತೇನೆ ಹೋರಾಡುವುದನ್ನು ನಾನು ನಿನ್ನಿಂದ ಕಲಿತಿದ್ದೇನೆ. ಪ್ರಿನ್ಸಿಪಾಲ್ ಮೇಲೆ ಒತ್ತಡ ತರಲಾಗುತ್ತದೆಂದು ನನಗೆ ಗೊತ್ತು. ಪ್ರಿನ್ಸಿಪಾಲ್ ನನಗೆ ಬೆಂಬಲವಾಗಿ ನಿಲ್ಲುತ್ತಾನೋ ಇಲ್ಲವೋ ಎನ್ನುವುದನ್ನು ಸ್ಪಷ್ಟವಾಗಿ ಕೇಳಲೆಂದೇ ಆತನ ಹತ್ತಿರ ಹೋಗುತ್ತಿದ್ದೇನೆ. ಒಂದು

ವೇಳೆ ಆತ ಒತ್ತಡಕ್ಕೆ ಸಿಕ್ಕಿ ಬೆಂಬಲ ಕೊಡದೆ ಹೋದರೆ ಬಹುಶಃ ನಾನು ಜೀವಂತ ಉಳಿಯುವುದಿಲ್ಲ.

ಮೊದಲ ಧ್ವನಿ: ಇದರ ನಂತರ ಏನು ಬರೆದಿತ್ತು.?

ಚಂದೂ: ನನಗೆ ಬೇಗ ಬರಲಿಕ್ಕೆ ಹೇಳಿದ್ದಳು.

ಮೊದಲ ಧ್ವನಿ: ನೀವು ವಾಪಸ್ ಬಂದು ಪೋಲಿಸ್‌ರಿಗೆ ಆ ಪತ್ರವನ್ನೇಕೆ ತೋರಿಸಲಿಲ್ಲ.

ಚಂದೂ: ಪ್ರಿನ್ಸಿಪಾಲ್ ಬದಲಾದ್ದರಿಂದ ಏನಾಗುತ್ತೆ? ಅದೂ ಅಲ್ಲದೆ ಅನುರಾಧಾಳ ಸಾವು ನನಗೆ ಬಹಳ ದೊಡ್ಡ ಆಘಾತವನ್ನುಂಟು ಮಾಡಿತ್ತು. ನನ್ನ ಬದುಕೇ ಮುಗಿದು ಹೋಗಿತ್ತು. ನಾನು ಹೆಚ್ಚು ಕಡಿಮೆ ಹುಚ್ಚನಾಗಿಬಿಟ್ಟಿದ್ದೆ. ಈ ಹೊತ್ತು ಕೂಡ ನನಗೆ ಬದುಕು ವ್ಯರ್ಥ ಅನಿಸುತ್ತೆ. ಜೀವಿಸಿರುವುದರಲ್ಲಿ ನನಗೆ ಏನೂ ನಂಬಿಕೆ ಉಳಿಯಲಿಲ್ಲ.

ಮೊದಲ ಧ್ವನಿ: ಯುವರ್ ಆನರ್! ಅನುರಾಧಾಳ ಪತ್ರದ ಒಂದು ವಾಕ್ಯ ಬಹಳ ಮಹತ್ವಪೂರ್ಣವಾದ್ದು. ಪ್ರೊ. ಅರವಿಂದ್ ರಿಪೋರ್ಟ್ ಬರೆಯುತ್ತಾ ಇರುವ ಹೊತ್ತಿನಲ್ಲಿ ಹೇಳಿದ್ದರು. ನನಗೆ ರಾಜಕುಮಾರ್‌ನ ನೀಚ ತಂದೆಯ ಜೊತೆ ಬಹಳಷ್ಟು ಲೆಕ್ಕ ತೀರಿಸುವುದಿದೆ ಎಂದು. ಇದರರ್ಥ ಸ್ಪಷ್ಟವಿದೆ. ಅರವಿಂದನ ಮನಸ್ಸಿನಲ್ಲಿ ಆ ಪ್ರೆಸಿಡೆಂಟ್ ಬಗ್ಗೆ ಮೊದಲಿನಿಂದಲೂ ಬಹಳ ತಿರಸ್ಕಾರ ಇತ್ತು. ಅವನ ವಿರುದ್ಧ ಪ್ರತಿಯೊಂದು ಸಂದರ್ಭದ ಲಾಭ ಮಾಡಿಕೊಳ್ಳ ಬೇಕೆಂದಿದ್ದ (ಬಿಡುವು) ನೀವು ಆ ದಿನ ಬೆಟ್ಟದ ಪ್ರಪಾತದ ಕಡೆ ಯಾತಕ್ಕೆ ಹೋಗಿದ್ದಿರಿ?

ಚಂದೂ: ಆತ್ಮಹತ್ಯೆ ಮಾಡಿಕೊಳ್ಳಲು.

ಮೊದಲ ಧ್ವನಿ: ನೀವು ಏಕೆ ಆತ್ಮಹತ್ಯೆ ಮಾಡಿಕೊಳ್ಳಬೇಕೂಂತ ಇದ್ದಿರಿ?

ಚಂದೂ: ಹೇಳಿದೆನಲ್ಲ ಆಗಲೇ; ಬದುಕಿನಲ್ಲಿ ನನಗೆ ನಂಬಿಕೆಯೇ ಹೋಗಿ ಬಿಟ್ಟಿತ್ತು ಅಂತ.

ಮೊದಲ ಧ್ವನಿ: ಆದರೆ ಯಾತಕ್ಕೆ?

ಚಂದೂ: ಪ್ರೊ. ಅರವಿಂದ್ ಅವರು ಸುಳ್ಳು ಹೇಳಿ ನನ್ನೆಲ್ಲ ಶ್ರದ್ಧೆಗಳನ್ನು ಧ್ವಂಸ ಮಾಡಿಬಿಟ್ಟರು. ಕಾಲೇಜಿನಿಂದ ನನ್ನನ್ನು ತೆಗೆದು ಹಾಕಿದ ರೀತಿಯಿಂದ ಜೀವನದ ಬಗ್ಗೆ ನನಗೆ ಇದ್ದ ಬದ್ದ ವಿಶ್ವಾಸವೂ ಹೋಗ್ತಾ ಇತ್ತು.

ಮೊದಲ ಧ್ವನಿ: ಹಾಗಾದರೆ ನೀವು ಯಾತಕ್ಕೆ ಆತ್ಮಹತ್ಯೆ ಮಾಡಿಕೊಳ್ಳಲಿಲ್ಲ?

ಚಂದೂ: ನಾನು ಇನ್ನೇನು ಪ್ರಪಾತದಿಂದ ಹಾರಿ ಬಿಡ್ತಾ ಇದ್ದೆ.....

ಮೊದಲ ಧ್ವನಿ: ಯಾತಕ್ಕೆ ಹಾರಲಿಲ್ಲ?

ಚಂದೂ: ನನಗೆ ಹೆಜ್ಜೆಗಳ ಸಪ್ಪಳ ಕೇಳಿಸಿತು. ಯಾರೋ ಮಾತಾಡಿಕೊಂಡು ಇತ್ತಲೇ ಬರುತ್ತಿರುವುದು ಕೇಳಿಸಿತು.

ಮೊದಲ ಧ್ವನಿ: ಆಗ ಏನು ಮಾಡಿದಿರಿ?

ಚಂದೂ: ಒಂದು ಕಡೆ ಗಿಡಗಳ ಮರೆಗೆ ಸರಿದು ಬಿಟ್ಟೆ.

ಮೊದಲ ಧ್ವನಿ: ನೀವು ಯಾರು ಬರುತ್ತಾ ಇರುವುದನ್ನು ನೋಡಿದಿರಿ?

ಚಂದೂ: ಪ್ರೊಫೆಸರ್ ಅರವಿಂದ್ ಅವರನ್ನು.

ಮೊದಲ ಧ್ವನಿ: ಇಬ್ಬರ ಮಧ್ಯೆ ಏನು ಮಾತು-ಕತೆ ನಡೀತಿತ್ತು?

ಚಂದೂ: ಪ್ರೊ. ಅರವಿಂದ್ ಪ್ರಪಾತದ ಕಡೆಗೆ ಹೋಗುತ್ತಾ ಇದ್ದರು ಮತ್ತು ಪ್ರೆಸಿಡೆಂಟ್‌ನನ್ನು ತಮ್ಮ ಹತ್ತಿರಕ್ಕೆ ಕರೀತಾ ಇದ್ದರು. ಆದರೆ ಪ್ರೆಸಿಡೆಂಟ್ ಹಿಂದು ಮುಂದೆ ನೋಡುತ್ತಾ ಇದ್ದ.

ಮೊದಲ ಧ್ವನಿ: ಇದರ ನಂತರ ಏನಾಯ್ತು?

ಚಂದೂ: ಪ್ರೊ. ಅರವಿಂದ್ ಅವನನ್ನು ಬಹಳ ಹುರಿದುಂಬಿಸುತ್ತ ಇದ್ದರು. ಕೆಳಗಿನ ಕಣಿವೆಯಲ್ಲಿನ ಜಾತ್ರೆಯನ್ನು ನೋಡಲು ಒತ್ತಾಯ ಮಾಡುತ್ತಿದ್ದರು.

ಮೊದಲ ಧ್ವನಿ: ಆಗ?

ಚಂದೂ: ಕೊನೆಗೆ ವಿಧಿಯಲ್ಲದೆ ಪ್ರೆಸಿಡೆಂಟ್ ಪ್ರಪಾತದ ತೀರ ಅಂಚಿನವರೆಗೂ ಬಂದು ಬಿಟ್ಟ.

ಮೊದಲ ಧ್ವನಿ: ಹಿಂದೆ ಯಾರಿದ್ದರು?

ಚಂದೂ: ಪ್ರೊ. ಅರವಿಂದ್

ಮೊದಲ ಧ್ವನಿ: ಪ್ರೊ. ಅರವಿಂದ್ ಅವರ ಕೈ ಎಲ್ಲಿತ್ತು?

ಚಂದೂ: ಪ್ರೆಸಿಡೆಂಟ್‌ನ ಬೆನ್ನಿನ ಮೇಲೆ. ಅವರು ಆ ಮನುಷ್ಯನ ಬೆನ್ನಿನ ಮೇಲೆ ಕೈಯಿಟ್ಟು ಕೆಳಗಿನ ಜಾತ್ರೆ ಕಡೆಗೆ ಸನ್ನೆಮಾಡಿ ತೋರಿಸುತ್ತಾ ಇದ್ದರು.

ಮೊದಲನೇ ಧ್ವನಿ: ಅದರ ನಂತರ?

ಚಂದೂ: ಇದರ ನಂತರ ನನಗೆ ಪ್ರೆಸಿಡೆಂಟ್‌ನ ಶರೀರ ಜೋಲಿ ಹೊಡೀತಾ ಇರೋ ಹಾಗೆ ಮತ್ತು ಪ್ರಪಾತದಿಂದ ಕೆಳಕ್ಕೆ ಬೀಳುತ್ತಿರುವ ಹಾಗೆ ಕಾಣಿಸಿತು.

ಮೊದಲನೇ ಧ್ವನಿ: ಪ್ರೊಫೆಸರ್ ಅರವಿಂದ್ ಅವರು ಪ್ರೆಸಿಡೆಂಟರನ್ನು ತಳ್ಳಿದರೆ? [ಚಂದು ಸುಮ್ಮನಿರುತ್ತಾನೆ]

ಮೊದಲನೇ ಧ್ವನಿ : ಯಾಕೆ ಮಾತಾಡ್ತಾ ಇಲ್ಲ? ಪ್ರೊಫೆಸರ್ ಅರವಿಂದ್ ಅವರು ಪ್ರೆಸಿಡೆಂಟರನ್ನು ತಳ್ಳಿದರೆ?[ಚಂದೂ ಅರವಿಂದನ ಕಡೆ ನೋಡುತ್ತಾನೆ. ಅರವಿಂದನು ಕಾತರದ ಕಣ್ಣುಗಳಿಂದ ಅವನಕಡೆ ನೋಡುತ್ತಾನೆ. ಮತ್ತೆ ಮರುಕ್ಷಣದಲ್ಲಿಯೇ ಚಂದೂವಿನ ಮುಖಮುದ್ರೆ ಕಠೋರವಾಗುತ್ತದೆ]

ಚಂದೂ: ತಳ್ಳಿರುವ ಸಾಧ್ಯತೆ ಇದೆ.

ಮೊದಲನೇ ಧ್ವನಿ: ಇದರ ನಂತರ ಏನಾಯಿತು?

ಚಂದೂ: ಇದರ ನಂತರ ಪ್ರೊ.ಅರವಿಂದ್ ಅವರು ಗಾಬರಿಯಿಂದ ಓಡತೊಡಗಿದರು. ನಾನು ಅವರನ್ನು ಕೂಗಿದೆ.

ಮೊದಲನೇ ಧ್ವನಿ: ಏನು ಅವರು ನಿಮ್ಮನ್ನು ನೋಡಿದರೆ?

ಚಂದೂ: ಹೂಂ ತುಂಬಾ ಚೆನ್ನಾಗಿ ನೋಡಿದರು?

ಮೊದಲನೇ ಧ್ವನಿ: ಆಗ ಅವರು ನಿಂತುಕೊಂಡರೆ?

ಚಂದೂ: ಇಲ್ಲ, ಓಡುತ್ತಾ ಇದ್ದರು. ನಾನೂ ಕೂಡ ಓಡುತ್ತಾ ಇದ್ದೆ.

ಮೊದಲನೇ ಧ್ವನಿ: ಅವರು ಎಲ್ಲಿಗೆ ಹೋದರು?

ಚಂದೂ: ಪ್ರೆಸಿಡೆಂಟರ ಬಂಗ್ಲೆಗೆ!

ಮೊದಲನೇ ಧ್ವನಿ: ಯಾಕೆ?

ಚಂದೂ: ಬಹುಶಃ ಫೋನ್ ಮಾಡಲು

ಮೊದಲನೇ ಧ್ವನಿ: ನಿಮಗೆ ಹೇಗೆ ಗೊತ್ತಾಯಿತು?

ಚಂದೂ: ಯಾಕೆಂದರೆ ನಾನು ಪೋಲೀಸ್ ಸ್ಟೇಷನ್‌ಗೆ ಹೋಗುವ ಹೊತ್ತಿಗೆ ಅವರ ಫೋನ್ ಆಗಲೇ ಬಂದಿತ್ತು.

ಮೊದಲನೇ ಧ್ವನಿ: ಯುವರ್ ಆನರ್ ಮತ್ತೂ ತಮಾಷೆಯ ವಿಷಯ ಅಂದರೆ, ಪ್ರೊ।ಅರವಿಂದರು ಪೋಲೀಸ್‌ಗೆ ಫೋನ್ ಮಾಡಿದ್ದರು. ಅದರಲ್ಲಿ ಘಟನೆ ನಡೆದ ಜಾಗದಲ್ಲೇ ಚಂದೂ ಇದ್ದ ಸಂಗತಿಯ ಉಲ್ಲೇಖವೇ ಇರಲಿಲ್ಲ. ಯುವರ್ ಆನರ್, ಇದರಿಂದ ಸ್ಪಷ್ಟವಾಗಿ ಏನು ಗೊತ್ತಾಗುತ್ತೆ ಅಂದರೆ ಅವರು ಈ ವಿಷಯವನ್ನು ಮುಚ್ಚಿಡಬೇಕೂಂತ ಇದ್ದರು.

ಎರಡನೇ ಧ್ವನಿ: ನೀವು ಸಾಕ್ಷಿಯನ್ನು ಇನ್ನೂ ಏನಾದರೂ ಪ್ರಶ್ನೆ ಕೇಳುವುದಕ್ಕೆ ಇಷ್ಟ ಪಡುತ್ತೀರೇನು?

ಮೊದಲನೇ ಧ್ವನಿ: ನೋ ಯುವರ್ ಆನರ್

ಎರಡನೇ ಧ್ವನಿ: Now the defence council may cross examine the wittness. [ನಿಧಾನವಾಗಿ ಕತ್ತಲು ಆವರಿಸುತ್ತದೆ. ಕೆಲವೇ ಕ್ಷಣಗಳಲ್ಲಿ ಬೆಳಕು. ಜೈಲಿನ ತೋರಿಕೆ. ವಿಮಲೇಂದುವಿನ ಶರೀರಾಕೃತಿ ಕಾಣಿಸಿಕೊಳ್ಳುತ್ತದೆ]

ವಿಮಲೇಂದು: ಈಗ ಏನು ಯೋಚನೆ ಮಾಡ್ತಿದ್ದೀಯಾ?

ಅರವಿಂದ: ಏನೂ ಇಲ್ಲ

ವಿಮಲೇಂದು: ನೀನು ಚಂದೂ ಬಗ್ಗೆ ಯೋಚಿಸ್ತಾ ಇಲ್ಲವೇನು?

ಅರವಿಂದ: ನಿನಗೆ ಹೇಗೆ ಗೊತ್ತಾಯಿತು

ವಿಮಲೇಂದು: ನನಗೆ ಎಲ್ಲಾ ಗೊತ್ತಿದೆ, ನೀನು ಚಂದೂನ ಹೊರತು ಬೇರೆ ಏನು ಯೋಚನೆ ಮಾಡೋಕೆ ಸಾಧ್ಯ?

ಅರವಿಂದ: ವಿಮಲೇಂದು, ಚಂದೂ ನಿಜ ಯಾತಕ್ಕೆ ಹೇಳಲಿಲ್ಲ?

ವಿಮಲೇಂದು: ಆದರೆ ಅವನು ಸುಳ್ಳನ್ನೂ ಹೇಳಲಿಲ್ಲ. ನೀನು ಪ್ರೆಸಿಡೆಂಟನ್ನು ತಳ್ಳಿದೆ ಅಂತ ಹೇಳಲಿಲ್ಲವಲ್ಲ. ಅವನು ಹೇಳಿದ್ದು ಕೇವಲ – ಸಾಧ್ಯತೆ ಇದೆ ಅಂತ.

ಅರವಿಂದ: ಆದರೆ ಅವನಿಗೆ ಗೊತ್ತಿತ್ತು ನಾನು ಪ್ರೆಸಿಡೆಂಟ್‌ನನ್ನು ತಳ್ಳಲಿಲ್ಲ ಅಂತ. ನಾನು ಅಪರಾಧಿ ಅಲ್ಲ. ಕೊಲೆಗಾರ ಅಲ್ಲ ಅಂತ ಅವನಿಗೆ ಗೊತ್ತಿತ್ತು. ಇದರ ಮೇಲೂ ಅವನು ಯಾಕೆ ಸುಳ್ಳು ಹೇಳಿದ!

ವಿಮಲೇಂದು: ದ್ರೋಣಾಚಾರ್ಯ ಇದೇ ಪ್ರಶ್ನೆಯನ್ನು ಕೇಳಿದ್ದ. ಇದೇ ಪ್ರಶ್ನೆ. ನಾನು ಬರೆದಿದ್ದ ನಾಟಕವನ್ನು ಯಾಕೆ ಮತ್ತೆ ಮತ್ತೆ ಮರೀತೀಯ. ನೆನಪು ಮಾಡಿಕೋ. ಮಹಾಭಾರತ ಯುದ್ಧದ ಹದಿನೈದನೇ ದಿನ ದ್ರೋಣಾಚಾರ್ಯನೇ ಸ್ವಯಂ ಸೈನ್ಯಾಧಿಪತಿಯಾಗಿದ್ದ. ಘನ ಘೋರಯುದ್ದ. ಅವನು ಭಯಂಕರ ಪದ್ಮವ್ಯೂಹವನ್ನು ರಚಿಸಿದ್ದ. ಅವನು ಯುದ್ಧ ಮಾಡ್ತಾ ಇದ್ದ, ಪಾಂಡವರ ಸೈನ್ಯದ ಮೇಲೆ ವಿಪತ್ತು ಆವರಿಸುತ್ತಿತ್ತು. ಆದರೆ ಈ ಮಧ್ಯೆ.... [ಬೆಳಕು ಕಮ್ಮಿಯಾಗುತ್ತದೆ. ಯುದ್ಧದ ಭಯಾನಕ ಕೋಲಾಹಲ. ಭಯಂಕರವಾದ ಚೀತ್ಕಾರಗಳು ಕಿವಿಗಳ ತಮಟೆಯನ್ನು ಒಡೆದು ಹಾಕುವಂಥ ಮರ್ಮಭೇದಕವಾದ ಶಬ್ದಗಳು. ಶಬ್ದಗಳು ಕಡಿಮೆಯಾಗುತ್ತವೆ]

ತೀಕ್ಷ್ಣ ಧ್ವನಿ: ಅಶ್ವತ್ಥಾಮನು ಸಂಹರಿಲ್ಪಟ್ಟ! ಅಶ್ವತ್ಥಾಮನು ಸಂಹರಿಸಲ್ಪಟ್ಟ! ಅಲ್ಲಿ ನೋಡು ಅಶ್ವತ್ಥಾಮ... [ಬೆಳಕು ರಂಗದ ಮೇಲೆ ಬೀಳುತ್ತದೆ ರಥದ ಮುರಿದ ಚಕ್ರ.. ರಥದ ಬಡಿಗೆಯ ಹತ್ತಿರ ದ್ರೋಣಾಚಾರ್ಯ ನಿಂತಿದ್ದಾನೆ. ಒಬ್ಬ ಸೈನಿಕ ಅವನಿಗೆ ಸಮೀಪದಲ್ಲಿ ಓಡುತ್ತಾ ಹೋಗುತ್ತಾನೆ]

ದ್ರೋಣ: (ಅವನನ್ನು ತಡೆಯುತ್ತ) ಏನು ಅಶ್ವತ್ಥಾಮನನ್ನು ಸಾಯಿಸಿದರೆ? ನನ್ನ ಮಗ.. ಅಶ್ವತ್ಥಾಮನನ್ನು?

ಸೈನಿಕ: ಜನರಂತೂ ಹಾಗೆ ಅರಚುತ್ತಾ ಇದ್ದಾರೆ. ಪಾಂಡವರ ಸೈನ್ಯದಲ್ಲಿ ಸಂಭ್ರಮಾಚರಣೆ ಕಂಡು ಬರುತ್ತಾ ಇದೆ.

ದ್ರೋಣ: ಇದು ಸತ್ಯವೆ?

ಸೈನಿಕ: ಯುದ್ಧದಲ್ಲಿ ನಿಜ ಯಾವುದು ಸುಳ್ಳು ಯಾವುದು! ಯಾವುದೂ ನಂಬುವಂತಿಲ್ಲ.

ದ್ರೋಣ: ನೀನು ಇದು ಪಾಂಡವರ ಕುಟಿಲೋಪಾಯ ಅಂತ ಹೇಳ್ತೀಯಾ?

ಸೈನಿಕ: ಏನೂ ಹೇಳಕ್ಕಾಗಲ್ಲ ಆಚಾರ್ಯ! ಜಯದ್ರಥನ ವಧೆಯನ್ನು ನೆನಪಿಸಿ ಕೊಳ್ಳಿ. ಸೂರ್ಯ ಅಸ್ತಾಚಲದಿಂದ ಮತ್ತೆ ವಾಪಸ್ ಬರಬಲ್ಲ. ನನ್ನನ್ನು ಕ್ಷಮಿಸಿ, ನನಗೆ ಹೇಳಕ್ಕೆ ಬರಲ್ಲ. [ಅವನು ಹೋಗುತ್ತಾನೆ. ಇನ್ನೊಬ್ಬ ಗಾಯಗೊಂಡ ಸೈನಿಕ ಹತ್ತಿರದಲ್ಲೇ ನಡೆದು ಹೋಗುತ್ತಾನೆ]

ದ್ರೋಣ: (ಅವನನ್ನು ತಡೆಯುತ್ತ) ಹೇಳು, ಕೊಲ್ಲಲ್ಪಟ್ಟವರು ಯಾರು? ಅಶ್ವತ್ಥಾಮವೆಂಬ ಹೆಸರಿನ ಆನೆಯೋ ಅಥವಾ ನನ್ನ ಮಗನೋ? ಯಾಕೆ ಹೇಳ್ತಾ ಇಲ್ಲ?

ಸೈನಿಕ: ತಮ್ಮ ಹಾಗೆ ನಾನೂ ಕೋಲಾಹಲ ಕೇಳಿಸಿಕೊಳ್ತಾ ಇದ್ದೀನಿ. ನಾಲ್ಕೂ ಕಡೆ ಹಾಹಾಕಾರ ಎದ್ದಿದೆ. ಅರ್ಜುನನ ಬಾಣಗಳಿಂದ ವ್ಯಾಕುಲಗೊಂಡ ಕೌರವ ಸೇನೆ ಓಡುತ್ತಾ ಇದೆ. ಸತ್ತದ್ದು ಅಶ್ವತ್ಥಾಮ ಎನ್ನುವ ಆನೆಯೋ ಅಥವಾ ತಮ್ಮ ಪುತ್ರನೋ ಈಗ ನಾನು ಹೇಗೆ ತಾನೆ ಹೇಳಲಿ [ತಟ್ಟಾಡಿಕೊಂಡು ಹೋಗುತ್ತಾನೆ]

ದ್ರೋಣ: ಯಾರಿಗೂ ಗೊತ್ತಿಲ್ಲ. ಯಾರೂ ಹೇಳಲಿಕ್ಕೆ ಸಿದ್ಧ ಇಲ್ಲ. [ಯುಧಿಷ್ಠಿರ ಬರುತ್ತಾ ಇರುವುದು ಕಾಣಿಸುತ್ತದೆ. ದ್ರೋಣರು ಕರೆಯುತ್ತಾರೆ.]

ದ್ರೋಣ: ಯುಧಿಷ್ಠಿರ ಇಲ್ಲಿ ಕೇಳು; ಇಲ್ಲಿ ಬಾ. [ಯುಧಿಷ್ಠಿರ ಹತ್ತಿರ ಬರುತ್ತಾನೆ]

ಯುಧಿಷ್ಠಿರ: ಅಪ್ಪಣೆಯಾಗಲಿ ಗುರುದೇವಾ!

ದ್ರೋಣ: ಕೋಲಾಹಲ ಕೇಳಿಸ್ತಾ ಇದೆಯಾ ಯುಧಿಷ್ಠಿರ?

ಯುಧಿಷ್ಠಿರ: ಹೌದು ಗುರುದೇವ.

ದ್ರೋಣ: ಇದನ್ನು ಕೇಳಿ ನನ್ನ ಮನಸ್ಸು ನಡುಗುತ್ತಾ ಇದೆ. ನನಗೇನೂ ಅರ್ಥವಾಗ್ತಾ ಇಲ್ಲ. ನೀನು ನಿಜ ಹೇಳ್ತಿಯಾ?

ಯುಧಿಷ್ಠಿರ: ನಾನು ಎಂದಾದರೂ ಸುಳ್ಳು ಹೇಳಿದ್ದೇನೆಯೆ ಗುರುದೇವ!

ದ್ರೋಣ: ಅದಕ್ಕೇ ಅಲ್ಲವೆ ನಾನು ನಿನ್ನನ್ನು ಕೇಳ್ತಾ ಇರೋದು. ನನಗೆ ಗುರುದಕ್ಷಿಣೆ ಬೇಕು.

ಯುಧಿಷ್ಠಿರ: ಇಲ್ಲಿ ಯುದ್ಧದಲ್ಲಿ?

ದ್ರೋಣ: ಹೌದು ಇಲ್ಲಿ ಯುದ್ಧದಲ್ಲಿ. ಇಲ್ಲಿ ಎಲ್ಲವೂ ಸತ್ಯ ಮತ್ತು ಎಲ್ಲವೂ ಸುಳ್ಳು. ನನಗೆ ಗುರುದಕ್ಷಿಣೆಯ ರೂಪದಲ್ಲಿ ಹೇಳು; ಕೊಲ್ಲಲ್ಪಟ್ಟದ್ದು ಯಾರು-ಅಶ್ವತ್ಥಾಮ ಎನ್ನುವ ಆನೆಯೋ ಅಥವಾ ನನ್ನ ಮಗನೋ? ಮನುಷ್ಯನೋ ಅಥವಾ ಆನೆಯೋ?

ಯುಧಿಷ್ಠಿರ: ಕೊಲ್ಲಲ್ಪಟ್ಟದ್ದು ಅಶ್ವತ್ಥಾಮ ಎನ್ನುವುದಷ್ಟೇ ನನಗೆ ಗೊತ್ತಿರೋದು.

ದ್ರೋಣ: ಅದು ಮನುಷ್ಯನೋ, ಆನೆಯೋ? ಈ ಪ್ರಶ್ನೆಗೆ ನೀನು ಕೊಡುವ ಉತ್ತರದ ಮೇಲೆ ನನ್ನ ಜೀವನ ನಿಂತಿದೆ ಬೇಗ ಹೇಳು.

ಯುಧಿಷ್ಠಿರ: ಕೊಲ್ಲಲ್ಪಟ್ಟದ್ದು ಅಶ್ವತ್ಥಾಮ ಎಂಬುದು ನಿಶ್ಚಿತ. ಅದು ಮನುಷ್ಯನೋ [ಮುಂದಕ್ಕೆ ಅವನು ತಡಬಡಿಸುತ್ತಾನೆ] ಅಥವಾ ಆನೆಯೋ..... [ಇದೇ ಹೊತ್ತಿಗೆ ಸರಿಯಾಗಿ ಜೋರಾಗಿ ಶಂಖಧ್ವನಿ ಯಾಗುತ್ತದೆ. ಕೋಲಾಹಲ]

ದ್ರೋಣ: [ಒಮ್ಮೆಗೇ ಕುಸಿದು ಬಿಡುತ್ತಾನೆ] ಹಾಗಾದರೆ ನನ್ನ ಮಗ ಅಶ್ವತ್ಥಾಮನ ಸಂಹಾರವಾಯಿತು. (ಕುಳಿತುಕೊಳ್ಳುತ್ತಾನೆ.) ಈಗ ನಾನು ಬದುಕಿ ಏನು ಮಾಡಲಿ? ಇಲ್ಲ, ನನ್ನಿಂದ ಯುದ್ಧ ಸಾಧ್ಯವಿಲ್ಲ, ಸಾಧ್ಯವಿಲ್ಲ. (ಕಣ್ಣುಗಳನ್ನು ಮುಚ್ಚಿಕೊಳ್ಳುತ್ತಾನೆ)

ತೆರೆ ಹಿಂದೆ: ನಿಂತುಕೊಂಡು ಏನು ನೋಡ್ತಾ ಇದ್ದಿ ಧೃಷ್ಟದ್ಯುಮ್ನ! ಆ ಮುದುಕನ ಕುತ್ತಿಗೆಯನ್ನು ಕೊಚ್ಚಿಹಾಕು! ನಿಮ್ಮ ತಂದೆಗಾದ ಅಪಮಾನದ ಸೇಡನ್ನು ತೀರಿಸಿಕೋ! [ಧೃಷ್ಟದ್ಯುಮ್ನನು ಬರುತ್ತಾನೆ. ಮತ್ತು ನಿರಾಯುಧನಾದ ದ್ರೋಣಾಚಾರ್ಯನ ಮೇಲೆ ಆಕ್ರಮಣ ಮಾಡುತ್ತಾನೆ. ಕತ್ತಲೆ. ಮತ್ತೆ ಕೆಲವೇ ಕ್ಷಣಗಳಲ್ಲಿ ಬೆಳಕು. ದ್ರೋಣಾಚಾರ್ಯ ಮರಣಾಸನ್ನ

ಸ್ಥಿತಿಯಲ್ಲಿದ್ದಾನೆ. ಅಶ್ವತ್ಥಾಮನು ಬಂದು ಅವನ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಳ್ಳುತ್ತಾನೆ]

ದ್ರೋಣ: (ಕ್ಷೀಣ ಸ್ವರದಲ್ಲಿ) ನೀನು ಬದುಕಿದ್ದೀಯಾ ಅಶು! ಹಾಗಾದರೆ ಆ ಧರ್ಮರಾಯ ಸುಳ್ಳು ಯಾಕೆ ಹೇಳಿದ) ಗುರುದಕ್ಷಿಣೆ ಕೊಡುವುದಾಗಿ ಶಪಥ ಮಾಡಿದ ಮೇಲೂ ಸುಳ್ಳು ಹೇಳಿದ.. ಯಾಕೆ, ಯಾಕೆ?

ಯುಧಿಷ್ಠಿರ: ಗುರುದೇವ!

ದ್ರೋಣ: ನೀನು ಸರಿಯಾಗಿ ಮಾಡಿದೆ. ನಾನು ಇದಕ್ಕೇ ಯೋಗ್ಯನಾಗಿದ್ದೆ. ಸತ್ಯ ಮತ್ತು ನ್ಯಾಯ ಯಾವ ಕಡೆ ಇದೆ ಅಂತ ಗೊತ್ತಿದ್ದೂ ಅದರ ವಿರುದ್ಧವಾಗಿ ಹೋರಾಡಿದೆ. ನನ್ನದೇ ಶಿಷ್ಯರ ವಿರುದ್ಧವಾಗಿ, ರಾಜರ ಅನ್ನದ ದಾಸ್ಯತೆ-ರಾಜಿಯ ಸ್ವಭಾವ. ಸರಿಯಾಗಿ ಮಾಡಿದೆ ನೀನು, ಈ ಹೊತ್ತಿನಲ್ಲಿ ನೀನು ಸುಳ್ಳು ಹೇಳುವುದೇ ಧರ್ಮ. ಯುಧಿಷ್ಠಿರ, ನೀನು ಸತ್ಯವನ್ನೇ ಹೇಳಿದರೂ ಕೂಡ ಇತಿಹಾಸ ಸುಳ್ಳು ಹೇಳುತ್ತದೆಯೇ? ಒಳ್ಳೆಯದು ಮಾಡಿದೆ ನೀನು. ಒಳ್ಳೆಯದು ಮಾಡಿದೆ. (ಸಾಯುತ್ತಾನೆ) [ಕತ್ತಲೆ ಆವರಿಸಿಕೊಳ್ಳುತ್ತದೆ ಸ್ವಲ್ಪ ಹೊತ್ತಿನ ತನಕ ಕರುಣಾಜನಕವಾದ ಸಂಗೀತ. ಮತ್ತೆ ಬೆಳಕು ಮೂಡುತ್ತದೆ. ಅರವಿಂದ ಮತ್ತು ವಿಮಲೇಂದು ಮೊದಲಿನ ಸ್ಥಿತಿಯಲ್ಲಿ]

ವಿಮಲೇಂದು: ನಿನ್ನ ಪ್ರಶ್ನೆಗೆ ಉತ್ತರ ಸಿಕ್ಕಿತಲ್ಲ.

ಅರವಿಂದ: ಚಂದೂನ ಧರ್ಮರಾಯನಿಗೆ ಹೋಲಿಸುವುದು ಸರಿಯೇನು?

ವಿಮಲೇಂದು: ಮತ್ತೆ ಸುಳ್ಳು! ನಿನ್ನ ಪ್ರಶ್ನೆಯ ಉತ್ತರ ಏನು ಅಂತ ನಿನಗೆ ಗೊತ್ತಿದೆ. hour of confession is approaching. ಆದರೆ ನಿನಗೆ ಸತ್ಯ ಹೇಳಲಿಕ್ಕೆ ಇಷ್ಟವಿಲ್ಲ. ಚಂದೂಗೆ ಸುಳ್ಳು ಹೇಳಲು ಕಲಿಸಿದವರು ಯಾರು?

ಅರವಿಂದ: ಯಾರು ಕಲಿಸಿದರು?

ವಿಮಲೇಂದು: ನೀನು, ಇನ್ಯಾರು?

ಅರವಿಂದ: ನಾನೆ?

ವಿಮಲೇಂದು: ನೀನು ಅವನಿಗೆ ಯಾವಾಗ ತಾನೆ ನಿಜ ಹೇಳಿದ್ದೆ? ನಿನಗೆ ಗೊತ್ತೇನು ನೀನು ಹೇಳಿದ ಪ್ರತಿಯೊಂದು ಸುಳ್ಳೂ ಅವನ ಪ್ರತಿಯೊಂದು ನಂಬಿಕೆಗೂ ಭಾರೀ ಅಘಾತವನ್ನುಂಟು ಮಾಡಿತ್ತು. ಒಟ್ಟಾರೆ ಶಿಕ್ಷಕನಾಗಿ ನೀನು ಅವನಿಗೆ ಏನನ್ನು ಕೊಟ್ಟೆ? ಅರ್ಥಶಾಸ್ತ್ರದ ಮೇಲೆ ಉಪನ್ಯಾಸ! ಮಾಲ್ಥೂಸ್, ಪೀಗೂ ಮತ್ತು ಕೇನ್ಸ್‌ರ ಸಿದ್ಧಾಂತಗಳು. ಇವುಗಳನ್ನಂತೂ ಪುಸ್ತಕಗಳಲ್ಲೂ ಓದಿಕೊಳ್ಳಬಹುದು. ನೀನು ಏನನ್ನು ಕೊಟ್ಟೆ ಅನ್ನುವುದು ಪ್ರಶ್ನೆ. ಅವನ ಜೀವನಕ್ಕೆ ಅರ್ಥ ತಂದುಕೊಡುವಂಥದ್ದೇನನ್ನಾದರೂ ನೀನು ಕೊಟ್ಟೆಯಾ?

ಅರವಿಂದ: ನೀನು ಮತ್ತೆ ಮತ್ತೆ ನನ್ನ ಮೇಲೆ ದೋಷಾರೋಪ ಮಾಡ್ತಿದ್ದೀ. ಆದರೆ ನನಗೆ ಸುಳ್ಳುಹೇಳುವುದನ್ನು ಕಲಿಸಿದ್ದು ಯಾರು ಹೇಳು?

ವಿಮಲೇಂದು: ವ್ಯವಸ್ಥೆ, ಉಸಿರು ಕಟ್ಟಿಸುವಂಥ ವ್ಯವಸ್ಥೆ. ಪ್ರತಿಭಟನೆಯಿಂದ ಸಿಟ್ಟಿಗೇಳುವ ವ್ಯವಸ್ಥೆ.

ಅರವಿಂದ: ನಾನು ಮೊದಲಿನಿಂದಲೂ ಕೀಳು ಮನುಷ್ಯನಾಗಿದ್ದೆನೆ?

ವಿಮಲೇಂದು: ಇಲ್ಲ.

ಅರವಿಂದ: ನಾನು ಮಾಲ್ಥೂಸ್, ಪೀಗೂ ಹಾಗೂ ಕೇನ್ಸ್‌ರ ಸಿದ್ಧಾಂತಗಳಾಚೆಗೆ ಜೀವನದ ಅರ್ಥ ಹುಡುಕುವ ಪ್ರಯತ್ನ ಮಾಡಲಿಲ್ಲವೆ?

ವಿಮಲೇಂದು: ಮಾಡಿದೆ.

ಅರವಿಂದ: ನನ್ನಲ್ಲಿ ಆಕ್ರೋಶ ಇರಲಿಲ್ಲವೆ, ತುಡಿತ ಇರಲಿಲ್ಲವೆ?

ವಿಮಲೇಂದು: ನಾನೆಲ್ಲಿ ಇಲ್ಲ ಅಂದೆ!

ಅರವಿಂದ: ಹಾಗಿದ್ದಮೇಲೆ ನೀನು ಆ ಪ್ರೆಸಿಡೆಂಟ್ ಮೇಲೆ ಯಾಕೆ ದೋಷಾರೋಪ ಮಾಡ್ತಿಲ್ಲ?

ವಿಮಲೇಂದು: ಯಾಕೆ ಅಂದರೆ ಅವನ ಹತ್ತಿರ ಶಕ್ತಿ ಇತ್ತು. ವ್ಯವಸ್ಥೆ ಅವನ ಬೆನ್ನು ತಟ್ಟುತ್ತಿತ್ತು. ಅವನಿಗಿದ್ದ ಶಕ್ತಿಯಿಂದಾಗಿ ನಿನ್ನ ಭವಿಷ್ಯವನ್ನು ನಿರ್ಧರಿಸುವ ಅಧಿಕಾರ ಅವನಿಗಿತ್ತು. ಪ್ರಶ್ನೆ ಏನಂದರೆ ಅವನು ನಿರ್ಧಾರ ಮಾಡಿದ್ದರ

ಪ್ರಕಾರ ನೀನು ಯಾಕೆ ನಡೆಯಲಿಲ್ಲ. ಎಂದು. ನಿನಗೆ ಜ್ಞಾಪಕ ಇದೆಯಾ ನೀನು ವಿರೋಧಿಸುವ ಭಾಷೆಯನ್ನು ಅಳವಡಿಸಿಕೊಂಡಾಗ ಅಧಿಕಾರವು ನೇರವಾಗಿ ನಿನ್ನ ಅಸ್ತಿತ್ವದ ಮೇಲೆ ಹಲ್ಲೆ ಮಾಡಿತು. ಕೆಲವು ಸಲ ಪ್ರಲೋಭನೆ ಒಡ್ಡಿ, ಇನ್ನು ಕೆಲವು ಸಲ ಆತಂಕವನ್ನೊಡ್ಡಿ, ಆದ್ದರಿಂದ ವಿರೋಧಿಸಬೇಡ. ಎಲ್ಲ ವಿರೋಧವೂ ವ್ಯರ್ಥ. ಒಂದು ವೇಳೆ ವ್ಯವಸ್ಥೆ ನಿನ್ನನ್ನು ತನ್ನ ಸೂಚನೆಯ ಮೇರೆಗೆ ಬೊಗಳುವ ನಾಯಿ ಮಾಡಬೇಕು ಅಂತ ಬಯಸಿದರೆ ಬೊಗಳು; ನಾಯಿ ಮರಿಗಳಿಗೆ ಜನ್ಮ ಕೊಡು. ಚಂದೂ ಮತ್ತು ಯುಧಿಷ್ಠಿರರಿಗೆ ಜನ್ಮ ಕೊಡಬೇಡ. ರಾಜ್‌ಕುಮಾರ್ ಮತ್ತು ದುರ್ಯೋಧನರನ್ನು ಹುಟ್ಟಿಸು.

ಅರವಿಂದ: ನಿನ್ನ ಆತ್ಮಬಲಿದಾನದ ತತ್ವ ಇದೇ ಏನು?

ವಿಮಲೇಂದು: ಭಾರೀ ಭಾರೀ ಶಬ್ದಗಳನ್ನು ಬಳಸೋದು ನಿಲ್ಲಿಸು. ಅವೆಲ್ಲ ಅರ್ಥ ಕಳೆದುಕೊಂಡಿವೆ. ನನ್ನ ಆತ್ಮಬಲಿದಾನ! (ಬಿಡುವು), ಮೂರ್ಖ! ನನ್ನ ಹೆಂಡತಿ ಎಲ್ಲಿದ್ದಾಳೆ ಅಂತ ಗೊತ್ತಿದೆಯೇನು?

ಅರವಿಂದ: ಇಲ್ಲ, ನನಗೆ ಹೇಗೆ ಗೊತ್ತಾಗ ಬೇಕು?

ವಿಮಲೇಂದು: ಆ ಮುದಿ ಆಫೀಸರ್‌ನಿಂದ ತಪ್ಪಿಸಿಕೊಳ್ಳಲು ಪಟ್ಟಣ ಬಿಟ್ಟು ಹೊರಟು ಹೋಗಿದ್ದಾಳೆ. ಅವನ ಹಸಿದ ಕಣ್ಣುಗಳಿಂದ ತಪ್ಪಿಸಿಕೊಳ್ಳಲು, ಅವನ ತೊಟ್ಟಿಕ್ಕುತ್ತಿರುವ ಜೊಲ್ಲಿನಿಂದ ರಕ್ಷಿಸಿಕೊಳ್ಳಲು. ಇಷ್ಟರ ಮೇಲೂ ನೀನು ಆತ್ಮಬಲಿದಾನ ಎಂದು ಹೇಳಿ ಭಾಷೆಯ ವ್ಯಭಿಚಾರ ಮಾಡ್ತಿದ್ದೀ. ನಾಚಿಕೆಯಾಗಲ್ವೆ ನಿನಗೆ?

ಅರವಿಂದ: ಇಲ್ಲ, ಇದು ಸುಳ್ಳು.

ವಿಮಲೇಂದು: (ಚೀರುತ್ತ) ಇಲ್ಲ. ಇದು ಸತ್ಯ, ಮುಂದೆ ಮಾತಾಡಬೇಡ, ನೀನು ಯಾರೂಂತ ಗೊತ್ತಿದೆಯಾ?

ಅರವಿಂದ: ನಾನು ಯಾರು?

ವಿಮಲೇಂದು: ನೀನು ದ್ರೋಣಾಚಾರ್ಯ. ವ್ಯವಸ್ಥೆ ಮತ್ತು ಅಧಿಕಾರಗಳೆಂಬ ಚಾವಟಿಗಳಿಂದ ಹೊಡೆಸಿಕೊಳ್ಳುತ್ತಿರುವ ದ್ರೋಣಾಚಾರ್ಯ. ಇತಿಹಾಸದ ಅಖಂಡ ಪ್ರವಾಹದಲ್ಲಿ ಮರದ ಕೊರಡಿನ ಹಾಗೆ

ತೇಲುತ್ತಿರುವ, ವರ್ತಮಾನದ ದಡಕ್ಕೆ ಹತ್ತಿರುವ, ಕೊಳೆತ ಕೊರಳಿನ ದ್ರೋಣಾಚಾರ್ಯ. ವ್ಯವಸ್ಥೆಯ ಲೈಟ್‌ಹೌಸ್ ಅನ್ನು ತನಗೆ ದಿಕ್ಕು ತೋರಿಸಬೇಕೆಂದು ಕೇಳುತ್ತಿರುವ ಮುರಿದ ಹಡಗಿನಂಥ ದ್ರೋಣಾಚಾರ್ಯ.

ಅರವಿಂದ: ನಾನು ದ್ರೋಣಾಚಾರ್ಯನಲ್ಲ, ಅರವಿಂದ, ಪ್ರೊ. ಅರವಿಂದ.

ವಿಮಲೇಂದು: ಬೊಗಳೆ! ನೀನು ದ್ರೋಣಾಚಾರ್ಯ! ಕೌರವರ ಭಾಷೆಯನ್ನಾಡುವ, ಯುದ್ಧದಲ್ಲೂ ಅವರನ್ನು ಬೆಂಬಲಿಸುವವ. ನೀನು ಯಾವಥರದ ಪ್ರೊಫೆಸರ್! ನೀನು ದ್ರೋಣಾಚಾರ್ಯ.

ಅರವಿಂದ: ಇಲ್ಲ.... ಇಲ್ಲ.....

ವಿಮಲೇಂದು: ಹೌದು, ಹೌದು, ನೀನು ದ್ರೋಣಾಚಾರ್ಯ. ಇನ್ನೊಬ್ಬ ದ್ರೋಣಾಚಾರ್ಯ! ಇನ್ನೊಬ್ಬ ದ್ರೋಣಾಚಾರ್ಯ! ಇನ್ನೊಬ್ಬ ದ್ರೋಣಾಚಾರ್ಯ! [ಕ್ರಮೇಣ ಕತ್ತಲೆ]





ಹಸಿವಿನ ಅನಿವಾರ್ಯತೆ ಮತ್ತು ಅಧಿಕಾರದ ಮೋಹದ ಎದಿರು ತಾನು ನಂಬಿದ ತತ್ವದ ಜೊತೆ ಅನಿವಾರ್ಯವಾಗಿ ರಾಜಿ ಮಾಡಿಕೊಳ್ಳುವ ವ್ಯಕ್ತಿತ್ವದ 'ಆರ್ಕಿಟೈಪ್' ಆಗಿ ದ್ರೋಣಾಚಾರ್ಯನ ಪಾತ್ರವನ್ನು ಭಾರತೀಯ ಮನಸ್ಸು ಸೃಷ್ಟಿಸಿಕೊಂಡಿದೆ. ತತ್ವನಿಷ್ಠೆಯನ್ನು ಆತ್ಯಂತಿಕ ಮೌಲ್ಯವಾಗಿ ಪರಿಗಣಿಸಿದ ದ್ರೋಣ ಕೌಟುಂಬಿಕ ಸಂಬಂಧಗಳ ಒತ್ತಡದ ಕಾರಣ ಪಥಭ್ರಷ್ಟನಾಗುವ ಸೂಕ್ಷ್ಮಗಳನ್ನು ಹಾಗೂ ವೈಯಕ್ತಿಕ ದುರಂತವನ್ನು ತಪ್ಪಿಸುವ ಸಲುವಾಗಿ ಸಾಮಾಜಿಕ ದುರಂತಕ್ಕೆ ಎಡೆಮಾಡಿಕೊಡುವ ಸ್ವಮರುಕದ ಅಸಹಾಯಕ ನೆಲೆಯನ್ನು ಗ್ರಹಿಸುವ ಪರಿಕರವಾಗಿ ದ್ರೋಣನಪಾತ್ರವನ್ನು ಭಾರತೀಯ ನಾಟಕಗಳು ಕಟ್ಟಿಕೊಂಡಿವೆ.

.....ಎಪ್ಪತ್ತರ ಚಳುವಳಿಗಳ ಕನಸುಗಳು ಬೌದ್ಧಿಕ ಪಳಿಯುಳಿಕೆಗಳಾಗಿ ಆಗಾಗ ಕಾಡುತ್ತಿರುವ ಈ ಕಾಲಘಟ್ಟದಲ್ಲಿ 'ಇನ್ನೊಬ್ಬ ದ್ರೋಣಚಾರ್ಯ' ನಾಟಕವನ್ನು ಕನ್ನಡಿಸುವ ಮೂಲಕ ಮತ್ತೆ ಆ ನೆನಪುಗಳ ಭೂತವನ್ನು ಮರು ಎದಿರುಗೊಳ್ಳುವಂತೆ ಮಾಡಿದ ಡಾ. ಆರ್. ಲಕ್ಷ್ಮೀನಾರಾಯಣ ಅವರಿಗೆ ಅಭಿನಂದನೆಗಳು.

ಡಾ. ಕೆ.ವೈ. ನಾರಾಯಣಸ್ವಾಮಿ

ಅವಿರತ ಪುಸ್ತಕ